ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 128 RNI Number : KNKAN/25/A2770 17-05-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :128 ರಾಯಚೂರು 17-05-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಸಾಧನಾ ಸಮಾವೇಶಕ್ಕೆ ಸಾರಿಗೆ ಗ್ರಹಣ

ಬೆಂಗಳೂರು, ಮೇ 16- ತುಮಕೂರಿನಲ್ಲಿ ನಡೆಯುವ ರಾಜ್ಯಸರ್ಕಾರದ ಮೂರನೇ ವರ್ಷದ ಸಾಧನಾ ಸಮಾವೇಶಕ್ಕೆ ಸಾರಿಗೆ ನೌಕರರು ಕಪ್ಪು ಬಾವುಟ ಪ್ರದರ್ಶಿಸಲು ಮುಂದಾಗಿದ್ದಾರೆ. ಸಾರಿಗೆ ನೌಕರರ ಮುಷ್ಕರಕ್ಕೆ 21 ದಿನಗಳ ಮೊದಲೇ ನೋಟೀಸ್‌ನೀಡಲಾಗಿದೆ. ಆದರಂತೆ ಮೇ 20 ರಿಂದ ಅನಿರ್ಧಿಷ್ಠಾವಧಿ ಮುಷ್ಕರ ಶುರುವಾಗಲಿದೆ ಎಂದು ಕೆಎಸ್‌ಆರ್‌ಟಿಸಿ ನೌಕರರ ಮತ್ತು ಸಿಬ್ಬಂದಿಗಳ ಸಂಘದ ಪ್ರಧಾನ ಕಾರ್ಯದರ್ಶಿ ವಿಜಯ್‌ಭಾಸ್ಕರ್ ತಿಳಿಸಿದ್ದಾರೆ.

ಕೆಲವರು ಹಿಂದಿನ ದಿನವೇ ಕೆಲಸ ಸ್ಥಗಿತಗೊಳಿಸುವ ಸಾಧ್ಯತೆ ಇದೆ. ತಡರಾತ್ರಿ ತಂಗುವ ಬಸ್‌ಗಳು ಮತ್ತು ದೂರದೂರಿಗೆ ರಾತ್ರಿ ಪ್ರಯಾಣ ಆರಂಭಿಸುವ ಚಾಲಕರು ಮತ್ತು ಸಿಬ್ಬಂದಿಗಳು ಹಿಂದಿನ ದಿನವೇ ತಮ ಮುಷ್ಕರವನ್ನು ಆರಂಭಿಸಲಿದ್ದಾರೆ. ಉಳಿದಂತೆ ಮೇ 20 ರಂದು ಬೆಳಗ್ಗೆ 6 ಗಂಟೆಯಿಂದಲೇ ಎಲ್ಲಾ ಸಾರಿಗೆ ಬಸ್‌ಗಳು ಸ್ಥಗಿತಗೊಳ್ಳಲಿದೆ ಎಂದು ವಿಜಯ್ ಭಾಸ್ಕರ್ ತಿಳಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಸಾರಿಗೆ ನೌಕರರ ಮುಷ್ಕರಕ್ಕೆ ಹೆದರಿ ಮೇ 20ರಂದು ತುಮಕೂರಿನಲ್ಲಿ ನಡೆಯಬೇಕಿದ್ದ ಸಾಧನಾ ಸಮಾವೇಶವನ್ನು ಒಂದು ದಿನ ಮುಂಚಿತವಾಗಿ ಅಂದರೆ, ಮೇ 19ರಂದೇ ನಡೆಸುತ್ತಿದೆ. ಅಂದು ತುಮಕೂರಿನಲ್ಲಿ ಸಾರಿಗೆ ನಿಗಮಗಳ ನೌಕರರು ಸಾಧನಾ ಸಮಾವೇಶಕ್ಕೆ ಕಪ್ಪು ಬಾವುಟ ಪ್ರದರ್ಶಿಸಲಿದ್ದಾರೆ.

ಕಾರ್ಯಕ್ರಮಕ್ಕೆ ಅಡ್ಡಿಪಡಿಸುವುದಿಲ್ಲ, ಬದಲಾಗಿ ತುಮಕೂರಿನ ಟೌನ್‌ಹಾಲ್ ಸರ್ಕಲ್‌ನಲ್ಲಿ ಸುಮಾರು ಒಂದು ಸಾವಿರ ಜನ ಸಮಾವೇಶಗೊಂಡು ಕಪ್ಪು ಬಾವುಟ ಪ್ರದರ್ಶಿಸುತ್ತೇವೆ ಎಂದು ವಿಜಯ್ ಭಾ ಸ್ಕರ್ ತಿಳಿಸಿದ್ದಾರೆ. ವೇತನ ಪರಿಷ್ಕರಣೆ ಹಾಗೂ ಇತರ ಬೇಡಿಕೆಗಳ ಈಡೇರಿಕೆಗೆ ನಮ ಒತ್ತಾಯ ನ್ಯಾಯ ಬದ್ಧವಾಗಿದೆ. ಹಲವು ಬಾರಿ ಚರ್ಚೆ ನಡೆಸಿದರೂ ಸರ್ಕಾರ ಸ್ಪಂದಿಸುತ್ತಿಲ್ಲ, ಕೊನೆಗೆ ಏಕಪಕ್ಷೀಯವಾಗಿ ಶೇ. 12.5ರಷ್ಟು ವೇತನ ಹೆಚ್ಚಿಸಿ, ಆದೇಶ ಹೊರಡಿಸಲಾಗಿದೆ. ಇದು ಒಪ್ಪಿತವಲ್ಲ ಎಂದು ಹೇಳಿದರು.

ಮೇ 30ರೊಳಗೆ ರಾಜ್ಯ ಸಂಪುಟ ಪುನರ್ ರಚನೆ

ಕೊಪ್ಪಳ: ಈ ತಿಂಗಳ 30ರ ಒಳಗಾಗಿ ಸಂಪುಟ ಪುನರ್ ರಚನೆ ಆಗುತ್ತದೆ, ಇಲ್ಲವೇ ವಿಸ್ತರಣೆ ಆಗುತ್ತದೆ ಎಂದು ಶಾಸಕ ಮತ್ತು ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಹೇಳಿದ್ದಾರೆ.



ಕೊಪ್ಪಳದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಎರಡು ವರ್ಷ ಮುಖ್ಯಮಂತ್ರಿಗಳಾಗಿ ಮುಂದುವರಿಯುತ್ತಾರೆ. ಒಂದು ವೇಳೆ ಪಕ್ಷದ ವರಿಷ್ಠರು ಬದಲಾವಣೆ ಬಯಸಿದರೆ ಸಿದ್ದರಾಮಯ್ಯರ ಮಟ್ಟದ ಅನುಭವಿಯಾಗಿರುವ ಮಲ್ಲಿಕಾರ್ಜುನ ಖರ್ಗೆಯವರನ್ನು ಮುಖ್ಯಮಂತ್ರಿ ಮಾಡಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಆದರೆ ಮುಖ್ಯಮಂತ್ರಿ ಬದಲಾವಣೆ ಮಾಡುವುದು ಸರಿಯಲ್ಲ ಎಂದರು.

ಸಂಪುಟ ಪುನರ್ ರಚನೆಯಾಗಬೇಕು. ಏಕೆಂದರೆ ಮೂರು ವರ್ಷ ಕಳೆದಿರುವುದರಿಂದ ಹೊಸ ಮುಖಗಳನ್ನು ತಂದರೆ ಉತ್ತಮ ಆಡಳಿತ ಕೊಡಲು ಸಾಧ್ಯ. ಉತ್ತಮ ಆಡಳಿತ ಕೊಟ್ಟರೆ ಮುಂದಿನ ಚುನಾವಣೆಯಲ್ಲಿ ಮತ್ತೆ ಪಕ್ಷ ಅಧಿಕಾರಕ್ಕೆ ತರಲು ಅನುಕೂಲ ಆಗುತ್ತದೆ ಎಂದು ರಾಯರೆಡ್ಡಿ ಹೇಳಿದರು.

ಪ್ರಧಾನಿ ರಾಜೀನಾಮೆ ನೀಡಲಿ

ಪೆಟ್ರೋಲ್ ಡೀಸೆಲ್ ನ ಬೆಲೆ ಏರಿಕೆ ಮಾಡಿರುವುದು

3ನೇ ಪುಟಕ್ಕೆ

ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದಲ್ಲಿ ಪ್ರವೇಶ ಆರಂಭ

ಉಚಿತ ಶಿಕ್ಷಣದೊಂದಿಗೆ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಸುವರ್ಣಾವಕಾಶ



ರಾಯಚೂರು,ಮೇ.16- ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದಲ್ಲಿ 2026 27ನೇ ಸಾಲಿನ ಪ್ರವೇಶ ಪ್ರಕ್ರಿಯೆ ಆರಂಭಗೊಂಡಿದ್ದು, ಉಚಿತ ಶಿಕ್ಷಣದೊಂದಿಗೆ ಸಂಸ್ಕೃತ ಹಾಗೂ ವೈದಿಕ ವಿದ್ಯಾಭ್ಯಾಸಕ್ಕೆ ಸುವರ್ಣಾವಕಾಶ ಕಲ್ಪಿಸಲಾಗಿದೆ ಎಂದು ಡಾಣಣ ಎನ್. ವಾದಿರಾಜಾಚಾರ್ಯ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಆಶ್ರಯದಲ್ಲಿ ಮಂತ್ರಾಲಯ ಹಾಗೂ ರಾಯಚೂರಿನ ಜವಾರನಗರ ರಾಘವೇಂದ್ರ ಮಠದಲ್ಲಿ ವಿದ್ಯಾಪೀಠ ಕಾರ್ಯನಿರ್ವಹಿಸುತ್ತಿದೆ ಎಂದರು.

ಜಗದ್ಗುರು ಶ್ರೀಮನ್ಮಧ್ವಾಚಾರ್ಯರು ಅವರ ಮೂಲ ಮಹಾಸಂಸ್ಥಾನದ ಪರಮಪೂಜ್ಯ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು ಅವರ ಪರಮಾನುಗ್ರಹದಿಂದ ವಿದ್ಯಾಪೀಠ ಕಾರ್ಯನಿರ್ವಹಿಸುತ್ತಿದ್ದು, 8 ವರ್ಷ ಮೇಲ್ಪಟ್ಟ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ವಿದ್ಯಾಪೀಠದಲ್ಲಿ ಉಚಿತ ಲೌಕಿಕ ಶಿಕ್ಷಣದ ಜೊತೆಗೆ ಅನ್ನ, ವಸ್ತ್ರ, ಪುಸ್ತಕ ಹಾಗೂ ವಸತಿ ವ್ಯವಸ್ಥೆ ಸಂಪೂರ್ಣ ಉಚಿತವಾಗಿದ್ದು, ವಿದ್ಯಾರ್ಥಿಗಳಿಗೆ ಧಾರ್ಮಿಕ, ಸಾಂಸ್ಕೃತಿಕ ಹಾಗೂ ನೈತಿಕ ಶಿಕ್ಷಣಕ್ಕೂ ವಿಶೇಷ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

ಇಲ್ಲಿ ವೇದ, ಕಾವ್ಯ, ಸಾಹಿತ್ಯ, ವ್ಯಾಕರಣ, ತರ್ಕ, ವೇದಾಂತ, ಪೌರೋಹಿತ್ಯ ಹಾಗೂ ಜ್ಯೋತಿಷ್ಯ ಶಾಸ್ತ್ರಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಜೊತೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಥಮ, ಕಾವ್ಯ, ಸಾಹಿತ್ಯ, ಬಿ.ಎ., ಎಂ.ಎ. ಪರೀಕ್ಷೆಗಳನ್ನೂ ಇದೇ ವಿದ್ಯಾಪೀಠದಲ್ಲಿ ನಡೆಸಲಾಗುವುದು ಎಂದು ಮಾಹಿತಿ ನೀಡಿದರು. ?

ಓಟ್ಟಚಿಟಿಜುಟ ಖಿಚಿಞಞಟಿಜಿಠಿ ಖ್ಲಿಜಿಡಟ್ಟಿಠಿಜಿಠಿಢ +1

ಸುಮಾರು 100 ವರ್ಷಗಳ ಇತಿಹಾಸ ಹೊಂದಿರುವ ಈ ವಿದ್ಯಾಪೀಠಕ್ಕೆ ಭಕ್ತರು ಮಠಕ್ಕೆ ನೀಡುವ ಕಾಣಿಕೆ ಹಣದಲ್ಲಿ ಶೇಕಡಾ 20ರಷ್ಟು ಮೊತ್ತವನ್ನು ವಿದ್ಯಾಪೀಠದ ಅಭಿವೃದ್ಧಿ ಹಾಗೂ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಬಳಸಿಕೊಳ್ಳಲು ಶ್ರೀಗಳು ಅವಕಾಶ ನೀಡುತ್ತಿದ್ದಾರೆ ಎಂದು ಹೇಳಿದರು.

ಈ ವಿದ್ಯಾಪೀಠದಲ್ಲಿ ವೈದಿಕ ಮತ್ತು ಲೌಕಿಕ ಎರಡೂ ರೀತಿಯ ಬೋಧನೆಗಳನ್ನು ಸಮನ್ವಯವಾಗಿ ನೀಡಲಾಗುತ್ತಿದೆ. ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಯೇ

3ನೇ ಪುಟಕ್ಕೆ

ಸಾಧು ವೇಷದಲ್ಲಿ ಬಂದು ಕಳ್ಳತನ



ಸಿಂಧನೂರು,ಮೇ.15- ಸಿಂಧನೂರು ನಗರದಲ್ಲಿ ಸಾಧು ವೇಷದಲ್ಲಿದ್ದ ಅಪರಿಚಿತ ವ್ಯಕ್ತಿ ಯೋರ್ವ ಅಂಗಡಿ ಮಾಲೀಕರಿಗೆ ಹೂ ನೀಡಿ. ಅರ್ಧ ತೋಲೆ ಬಂಗಾರ ಹಾಗೂ ಅಂಗಡಿಯಲ್ಲಿದ್ದ 10.500.ರೂ. ಹಣ ದೋಚಿಕೊಂಡು ಪರಾರಿಯಾದ ಘಟನೆ ಸಿಂಧನೂರು ನಗರದಲ್ಲಿ ತಡವಾಗಿ ಬೆಳಕಿಗೆ ಬಂದಿದೆ.

ನಗರದ ಕುಷ್ಟಗಿ ಮುಖ್ಯರಸ್ತೆಯಲ್ಲಿರುವ ಸಾಯಿ ಮೆಡಿಕಲ್ ಮತ್ತು ಜನರಲ್ ಸ್ಟೋರ್ ಮಾಲೀಕ ವಿಷ್ಣು ದತ್ತ ಮೋಹನ್ ದತ್ತ ಅವರು ಈ ಕುರಿತು ಶಹರ್ ಪೋಲಿಸ್ ಠಾಣೆಗೆ ಲಿಖಿತ ದೂರು ನೀಡಿದ್ದಾರೆ. ಸಾಧು ವೇಷ ಧರಿಸಿಕೊಂಡು ಭಿಕ್ಷುಕನಂತೆ ಸಂಚರಿಸುತ್ತಿದ್ದ ಅಪರಿಚಿತ ವ್ಯಕ್ತಿ. ಅಂಗಡಿ ಮುಂಭಾಗದಲ್ಲಿದ್ದ ನೀರಿನ ಕ್ಯಾನ್ ಬಳಿ ಬಂದು ನೀರು ಕುಡಿಯಲು ಕೇಳಿದ್ದಾನೆ. ಮಾನವೀಯತೆಯ ದೃಷ್ಟಿಯಿಂದ ಅಂಗಡಿ ಮಾಲೀಕರು. ತಮ್ಮ ಅಂಗಡಿಯೊಳಗಿನ ಫ್ರಿಡ್ಜ್ ನಲ್ಲಿದ್ದ ತಣ್ಣನೆಯ ನೀರನ್ನು ಕುಡಿಯಲು ನೀಡಿದ್ದಾರೆ.

ಈ ವೇಳೆ ಅಪರಿಚಿತ ವ್ಯಕ್ತಿ ತನ್ನ ಬಳಿ ಇದ್ದ ಎರಡು ಹೂಗಳನ್ನು ಅಂಗಡಿ ಮಾಲಕರ ಕೈಗೆ ನೀಡಿ ಮಾತಿನ ಮಂತ್ರದಿಂದ ಅವರನ್ನು. ಮರಳು ಮಾಡಿದ್ದಾನೆ ಎನ್ನಲಾಗಿದೆ. ಬಳಿಕೆ ಆತ ಹೇಳಿದಂತೆ ನಡೆದುಕೊಂಡ ಅಂಗಡಿ ಮಾಲಕ ಕೈಯಲ್ಲಿದ್ದ ಅರ್ಧ ತೊಲೆ ಬಂಗಾರದ ಆಭರಣ. ಅಂಗಡಿಯ ಗಲ್ಲಾ ಪೆಟ್ಟಿಗೆ ಎಲ್ಲಿದ್ದ. 10.500.ರೂ ದೋಚಿಕೊಂಡು ಪರಾರಿಯಾಗಿದ್ದಾನೆ.

ಸ್ವಲ್ಪ ಸಮಯದ ಬಳಿಕ ಮಾಲಕನಿಗೆ ಈ ಘಟನೆಯ ಬಗ್ಗೆ ಅರಿವಿಗೆ ಬಂದಾಗ. ಆರೋಪಿಯು ಅಲ್ಲಿಂದ ಪರಾರಿಯಾಗಿದ್ದನು. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಈ ಘಟನೆಯಲ್ಲಿ ಭಾಗಿಯಾದ ಸಾಧುಗಳ ರೂಪ ಧರಿಸಿದ ವ್ಯಕ್ತಿಯ ಭಾವಚಿತ್ರ ಸಿ ಸಿ ಟಿವಿಯಲ್ಲಿ ಸರೆಯಾಗಿದ್ದು ಆರೋಪಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ..

ಜಿಲ್ಲಾ ಎಸ್‌ಪಿ ಅವರಿಂದ ಬಸವರಾಜ ನಾಯಕರಿಗೆ ಪ್ರಶಂಸನಾ ಪತ್ರ



ರಾಯಚೂರು,ಮೇ.15- ಜಿಲ್ಲೆಯಲ್ಲಿನ ಸಾರ್ವಜನಿಕರ ಹಿತಾಸಕ್ತಿಗೆ ಸಂಬಂಧಿಸಿದಂತೆ ನೇತಾಜಿ ನಗರ ಪೊಲೀಸ್ ಠಾಣೆಯ ಪಿಎಸ್‌ಐ ಬಸವರಾಜ ನಾಯಕ ಉತ್ತಮ ಕಾರ್ಯವನ್ನು ಮೆಚ್ಚಿ ಅವರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷು ಗಿರಿ ಅವರು ಗೌರವ ಪೂರ್ವಕವಾಗಿ ಪ್ರಶಂಸನಾ ಪತ್ರ ನೀಡಿ ಗೌರವಿಸಿದರು.

ಪಿಎಸ್‌ಐ ಬಸವರಾಜ ನಾಯಕ ಅವರು ಮಹಿಳೆ ಕಾಣೆ ಪ್ರಕರಣಗ'ಳಲ್ಲಿ ಪತ್ತೆ ಹಾಗೂ 41/2026 ಮನೆಗಳ್ಳತನ ಪ್ರಕರಣದಲ್ಲಿ 1,26, 000/-ರೂ ಬೆಲೆ ಬಾಳುವ ಬಂಗಾರದ ಮತ್ತು ಬೆಳ್ಳಿ ಆಭರಣಗಳ ಜಪ್ತಿ ಮಾಡಿ ಆರೋಪಿತರನ್ನು ಪತ್ತೆ, ವಿವಿಧೆಡೆ ಹೇಂಡ ವಿವಿಧ ಪ್ರಕರಣವನ್ನು ಬೇಧಿಸಿ ಉತ್ತಮವಾಗಿ ಕರ್ತವ್ಯ ನಿರ್ವಹಿಸಿ ಪೊಲೀಸ್ ಇಲಾಖೆಯ ಗೌರವ ತರುವ ಕೆಲಸ ಮಾಡಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷು ಗಿರಿ ಪ್ರಶಂಸಿಂಸಿದರು.

ನಿಮ್ಮ ಕರ್ತವ್ಯನಿಷ್ಠೆ, ಸಮಯಪ್ರಜ್ಞೆ ಮತ್ತು ಸೇವಾಮನೋಭಾವವನ್ನು ಮೆಚ್ಚುತ್ತಾ ಇಲಾಖೆಯಲ್ಲಿ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಶ್ರಮವಹಿಸಿ ಇಲಾಖೆಯಲ್ಲಿನ ಇತರರಿಗೆ ಮಾರ್ಗದರ್ಶನವಾಗುವಂತೆ ಕೆಲಸ ಕಾರ್ಯಗಳನ್ನು ನಿರ್ವಹಿಸುವಂತೆ ಈ ಪ್ರಶಂಸನೀಯ ಪತ್ರವನ್ನು ನಿಮಗೆ ನೀಡಿದ್ದು ಇರುತ್ತದೆ ಎಂದು ಜಿಲ್ಲಾ ಎಸ್‌ಪಿ ಅರುಣಾಂಗ್ಷು ಗಿರಿ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.


ಡೆಂಗಿ ನಿಯಂತ್ರಣಕ್ಕಾಗಿ ಸಮುದಾಯದ ಸಹಭಾಗಿತ್ವ ಅತ್ಯಗತ್ಯ - ಡಾ.ಸುರೇದ್ರಬಾಬು

ನೀರು ತುಂಬುವ ಪರಿಕರಗಳಲ್ಲಿ ಸೊಳ್ಳೆ ಮರಿ ಕಂಡುಬಂದಲ್ಲಿ ತಕ್ಷಣ ಸ್ವಚ್ಚಗೊಳಿಸಿ, ನೀರು ತುಂಬಿದ ನಂತರ ಸರಿಯಾಗಿ ಮುಚ್ಚಳ ಮುಚ್ಚಿ, ಡೆಂಗ್ಯು ರೋಗ ತಡೆಯಬೇಕು ಎಂದು ಜಿಲ್ಲಾ ಅರೋಗ್ಯ ಅಧಿಕಾರಿ ಡಾ. ಸುರೇಂದ್ರ ಬಾಬು ಅವರು ಹೇಳಿದರು.



ಸಾಮಾನ್ಯವಾಗಿ ಅಡುಗೆ ಮನೆಯಲ್ಲಿ ಕುಡಿಯಲು ನೀರು ತುಂಬುವ ಪರಿಕರಗಳಿಗೆ ಸರಿಯಾಗಿ ಮುಚ್ಚಳ ಮುಚ್ಚುವ ಪದ್ದತಿಯನ್ನು ಮನೆಯ ಹೊರಗೆ ಬಳಕೆಗಾಗಿ ನೀರು ತುಂಬುವ ಡ್ರಮ್, ಬ್ಯಾರೇಲ್, ಸಿಮೆಂಟ್ ತೊಟ್ಟಿ, ಕಲ್ಲಿನ ಡೋಣ , ಕೊಡ, ಮುಂತಾದ ಪರಿಕರಗಳಿಗೆ ಅನುಸರಿಸುವ ಜೊತೆಗೆ ಮನೆಯ ಸುತ್ತಲೂ ನೀರು ನಿಲ್ಲಬಹುದಾದ ಘನ ತ್ಯಾಜ್ಯ ವಸ್ತುಗಳಾದ, ತೆಂಗಿನ ಚಿಪ್ಪು, ಒಡೆದ ಬಕೆಟ್, ಕೊಡ, ಹಳೆಯ ಟೈರು, ಟಿನ್ ಸೇರಿದಂತೆ ಇತರೆ ವಸ್ತುಗಳನ್ನು ತೆರವುಗೊಳಿಸುವ ರೂಡಿ ಹಾಕಿಕೊಂಡಲ್ಲಿ ಹಾಗೂ ಯಾವುದೇ ಪರಿಕರಗಳಲ್ಲಿ ಸೊಳ್ಳೆ ಮರಿ (ಬಾಲದ ಹುಳು) ಕಂಡುಬಂದಲ್ಲಿ ತಕ್ಷಣ ಸ್ವಚ್ಚಗೊಳಿಸಿ, ನೀರು ತುಂಬಿದ ನಂತರ ಸರಿಯಾಗಿ ಮುಚ್ಚಳ ಮುಚ್ಚಿದಲ್ಲಿ ಡೆಂಗ್ಯು ಸೇರಿದಂತೆ ಸೊಳ್ಳೆಯಿಂದ ಹರಡುವ ರೋಗ ತಡೆಗೆ ಸಹಕಾರಿಯಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸ'ುರೇಂದ್'ಬಾಬು ತಿಳಿಸಿದರು.ಜಿಲ್ಲಾಡಳಿತ ಜಿಲ್ಲಾ ಪಂಚಾಯತ, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಎನ್‌ವಿಬಿಡಿಸಿಪಿ ವಿಭಾಗದ ಸಂಯೋಗದಲ್ಲಿ ಕೃಷ್ಣ ಸಭಾಂಗಣದಲ್ಲಿ ಜರುಗಿದ ರಾಷ್ಟ್ರೀಯ ಡೆಂಗ್ಯು ದಿನದ ಅಂಗವಾಗಿ ಜರುಗಿದ ಜಿಲ್ಲಾ ಮಟ್ಟದ ಕಾರ್ಯಕ್'ವ'ುದ'ಲ್ಲಿ ವೈದ್ಯಾಧಿಕಾರಿಗ'ಳ'ು, ಸಿಬ್ಬಂದಿಯವರನ್ನು ಉದ್ದೇಶಿಸಿ ಮಾತನಾಡುತ್ತಾ, ರಾಜ್ಯ ಸರಕಾರದ ಮಾರ್ಗಸೂಚಿಯನ್ವಯ ಗ್ರಾಮ ಪಂಚಾಯತ, ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಪ್ರತಿ ಶುಕ್ರವಾರ ಲಾರ್ವಾ ಸಮೀಕ್ಷೆಯನ್ನು ಬಲಪಡಿಸಿ ಕೇವಲ ನೀರು ಸಂಗ್ರಹಕ ಪರಿಕರಗಳಲ್ಲದೆ ಹೂವಿನ ಕುಂಡಲ, ಫ್ರಿಜ್‌ನ ಹಿಂಭಾಗ, ಎರ್ ಕೂಲ್ರ್ ಮುಂತಾದವುಗಳ ಪರಿಶೀಲಿಸಿ, ಸ್ವಚ್ಚಗೊಳಿಸಲು ಜನತೆಗೆ ನಿರಂತರ ಜಾಗೃತಿ ನೀಡುತ್ತಿರುವುದರಿಂದ ಪ್ರಕರಣಗಳ ಸಂಖ್ಯೆ ಗ'ಣನೀಯುವಾಗಿ ನಿಯಂತ್ರಣಗೊಡಿದ್ದು, ಕನಿಷ್ಠ ವಾರಕ್ಕೊಮ್ಮೆ ಎಲ್ಲ ನೀರಿನ ಪರಿಕರಗಳನ್ನು ಚೆನ್ನಾಗಿ ತಿಕ್ಕಿ ತೊಳೆದು ಮುಚ್ಚಳ ಮುಚ್ಚುವ ರೂಡಿ ಅಳವಡಿಸಿಕೊಳ್ಳಲು ಸಮುದಾಯದ ಸಹಕಾರ ನಿರಂತರವಾಗಿರಲಿ ಎಂದು ತಿಳಿಸಿದರು.ಡಿಎಸ್‌ಓ ಹಾಗೂ ಎನ್‌ವಿಬಿಡಿಸಿಪಿ ಅಧಿಕಾರಿ ಡಾ. ಗಣೇಶ್ ಕೆ, ಮಾತನಾಡಿ ಡೆಂಗ್ಯು ಹರಡುವ ಈಡಿಸ್ ಈಜಿಪ್ಟೆ ಸೊಳ್ಳೆ ಶುದ್ದ ನೀರಿನಲ್ಲಿ ಸಂತತಿ ವೃದ್ದಿ ಮಾಡುವುದರಿಂದ ಮತ್ತು ಹಗಲು ಹೊತ್ತಿನಲ್ಲಿಯೇ ಕಚ್ಚುವುದರಿಂದ ಮನೆಯ ಒಳ ಹಾಗೂ ಹೊರ

ಮೂರನೇಯ ಪುಟಕ್ಕೆ



ಜನರ ಸಮಸ್ಯೆಗಳನ್ನು ಬಗೆಹರಿಸಲು ಸಹಕಾರ ಅಗತ್ಯ

ರಾಯಚೂರು,ಮೇ.16. ನಗರದಲ್ಲಿ ಜನರ ಸಮಸ್ಯೆಗ ಳನ್ನು ಬಗೆಹರಿಸಲು ಎಲ್ಲರ ಸಹಕಾರ ಅಗತ್ಯ ಎಂದು ಸದರ ಬಜಾರ್ ಪೊಲೀಸ್ ಠಾಣೆಯು ಪೊಲೀಸ್ ಇನ್ಸ್ ಪೆಕ್ಟರ್ ದಾದಾವಲಿ ಕರೆ ನೀಡಿದರು.ಅವರು ನಗರದ ಸದರ ಬಜಾರ್ ಪೋಲಿ ಸ್ ಠಾಣೆಯಲ್ಲಿ ಮಾನವ ಹಕ್ಕು ಗಳ ಸಂಘದ ಸದಸ್ಯರ ಜತೆ ನಡೆ ದ ಸಭೆಯಲ್ಲಿ ಮಾತಾನಾಡಿದ ರು,ಜನರ ಬಾವನಗಳಿಗೆ ತಕ್ಕಂತೆ ಕಲಸ ಮಾಡುವ ಮೂಲಕ ತ ಮ್ಮ ಮೊದಲ ಪ್ರಯತ್ನ ಮಾ ಡುವಂತೆ ಮಾತಾನಾಡಿದರು.ಜ ನರು ಪೋಲಿಸ್ ಠಾಣೆಗಳು ಮೆಟ್ಟಲು ಹತ್ತಲು ಹಿಂಜರಿಯದೆ ಜನರ ಅಹವಾಲನ್ನು ಸ್ವೀಕರಿ ಸುವ ಮೂಲಕ ತಮ್ಮ ಕರ್ತವ್ಯ ನಿರ್ವಹಿಸಲು ಮುಂದಾಗಲು ತಿಳಿಸಿದರು.ಈ ಸಂದರ್ಭದಲ್ಲಿ ಮಾನವ ಹಕ್ಕುಗಳ ಸಂಘದ ಅದ್ಯಕ್ಷ ಮೆಹಿದೆ.ಮಾರುತಿ.ವಿ ಜಯ್.ರಶೀದೆ.ನರೇಶ್ ಭಾಗವಹಿಸಿದ್ದರು.

ಗುಡದನಾಳ ಗ್ರಾಮದಲ್ಲಿ ತೀವ್ರ ಕುಡಿಯುವ ನೀರಿನ ಸಂಕಷ್ಟ

ಸಮಸ್ಯೆ ಬಗೆಹರಿಸುವಂತೆ ಅಧಿಕಾರಿಗಳಿಗೆ ಗ್ರಾಮಸ್ಥರ ಮನವಿ

ಲಿಂಗಸುಗೂರು ಮೇ 15 ತಾಲೂಕಿನ ಹೊನ್ನಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಡದನಾಳ ಗ್ರಾಮದಲ್ಲಿ ತೀವ್ರ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದು, ಸಮಸ್ಯೆಯನ್ನು ತಕ್ಷಣ ಬಗೆಹರಿಸುವಂತೆ ಗ್ರಾಮಸ್ಥರು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗ'ಳಿಗೆ ಮನವಿ ಸಲ್ಲಿಸಿದರು.



ಗ್ರಾಮದಲ್ಲಿ ಹ'ಲವ'ು ವ'ಷ'ಗ'ಳಿಂದ' ಸ'ವ'ುಪ'ಕ' ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ಸಾರ್ವಜನಿಕರು ಸಂಕಷ್ಟ ಅನುಭವಿಸುತ್ತಿದ್ದು, ಬೇಸಿಗೆ ತೀವ್ರಗೊಂಡ ಹಿನ್ನೆಲೆ ನೀರಿನ ಅಭಾವ ಮತ್ತಷ್ಟು ಹೆಚ್ಚಾಗಿದೆ. ಮಹಿಳೆಯರು, ಯುವಕರು ಹಾಗೂ ಮಕ್ಕಳು ದೂರದ ಕೆರೆಗಳು ಮತ್ತು ಹೊಲಗಳಿಂದ ನೀರು ತಂದು ಜೀವನ ಸಾಗಿಸುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಗ್ರಾಮಸ್ಥರು ದೂರಿದರು.

ಈ ಕುರಿತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರು ಹಾಗೂ ಸಂಬಂಧಪಟ್ಟ ಇಲಾಖಿಯ ಅಧಿಕಾರಿಗ'ಳಿಗೆ ಅನೇಕ ಬಾರಿ ಮೌಖಿಕ ಹಾಗೂ ಲಿಖಿತ ಮನವಿಗಳನ್ನು ಸ'ಲ್ಲಿಸಿದ'ರ'ೂ ಯಾವುದೇ ಶಾಶ್ವತ ಪರಿಹಾರ ದೊರೆತಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದರು. ಗ್ರಾಮದಲ್ಲಿನ ಸಾರ್ವಜನಿಕ ನಳಗಳಿಗೆ ನಿಯಮಿತವಾಗಿ ನೀರು ಪೂರೈಸಿ ಸಮಸ್ಯೆ

ಮೂರನೇಯ ಪುಟಕ್ಕೆ

ಡಿಸಿಯಂ ಹುಟ್ಟುಹಬ್ಬ-ನಿರಾಶ್ರಿತರಿಗೆ ಹಣ್ಣು ಹಂಪಲು ವಿತರಣೆ



ರಾಯಚೂರು ಮೇ.16. ರಾಜ್ಯದ ಉಪ ಮುಖ್ಯಮಂತ್ರಿ, ಕೆ.ಪಿ.ಸಿ.ಸಿ ಅದ್ಯಕ್ಷ ಡಿ.ಕೆ.ಶಿವ ಕುಮಾರ್ ಹುಟ್ಟು ಹಬ್ಬನ್ನು ಅಬಿಮಾನ ಬಳಗದ ವತಿಯಿಂ ದ ಆಚರಿಸಲಾಯಿತು.ನಗರದ ನಿರಾಶ್ರಿತರ ಕೇಂದ್ರದಲ್ಲಿ ಅಬಿ ಮಾನ ಬಳಗ ಅದ್ಯಕ್ಷ ಸುನಿಲ್ ಸಿಂಗ್ ನಿರಾಶ್ರಿತರಿಗೆ ಹಣ್ಣು ಹಂಪಲು ವಿತರಣೆ ಮಾಡಿ ಕಾರ್ಯಕ್ರಮವನ್ನು ಕೈಗೊಳ್ಳ ಲಾಯಿತು.ನಂತರ ಅವರಿಗೆ ಉಪಹಾರ ವ್ಯವಸ್ಥೆಯ ಮೂಲ ಕ ಜನ್ನದಿನಾಚಾರಣೆ ನಡಿಯು ತು.ಈ ಸಂದರ್ಭದಲ್ಲಿ ರವಿ,ಸ ಯ್ಯದ್ ನಾಸಿರ್ ಪಾಷಾ,ಚಂದ್ರ ಶೇಖರರಾಮಕೋಟಿ,ಶಿವಕಾಂತ,ಚೇತನ್,ಪ್ರಸಾದ್,ಎಡಿಷನ್,ಸಿರಾಜ್,ಯಾಸಿನ್,ಜಾಕಿರ್ ಪಾಷಾ,ಮೆಹಿನ್ ಸೇರಿದಂತೆ ಅನೇಕ ಭಾಗವಹಿಸಿದ್ದರು

ಪೂರಕ ಮಾಹಿತಿಯೊಂದಿಗೆ ಹಾಜರಾಗಲು ಅಧಿಕಾರಿಗಳಿಗೆ ಜಿಪಂ ಸಿಇಒ ಸೂಚನೆ



ಬಳ್ಳಾರಿ,ಮೇ 16-

ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರು ಜಿಲ್ಲಾ ಪ್ರವಾಸ ಹಾಗೂ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದು, ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಎಲ್ಲಾ ಇಲಾಖಾ ಅಧಿಕಾರಿಗಳು ಕಡ್ಡಾಯವಾಗಿ ಪೂರಕ ಮಾಹಿತಿ ಮತ್ತು ಅಂಕಿ ಅಂಶಗಳೊಂದಿಗೆ ಸಭೆಗೆ ಹಾಜರಾಗಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿ ಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮೇ 18 ರಂದು ಕರ್ನಾಟಕ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ಆಯೋಗದ ಅಧ್ಯಕ್ಷರ ಭೇಟಿ ಹಿನ್ನಲೆ ಅಂಗವಾಗಿ ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಪೂರ್ವಭಾವಿ ಸಭೆ ನಡೆಸಿ ಅವರು ಮಾತನಾಡಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳ ಅಭಿವೃದ್ಧಿಗಾಗಿ ಮೀಸಲಿಟ್ಟ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನದ ಕಳೆದ ಮೂರು ವರ್ಷಗಳ ಪ್ರಗತಿ ವರದಿ ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ಕಾಮಗಾರಿಗಳ ವಿವರಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು ಎಂದು ತಿಳಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಎಸ್ಸಿ ಎಸ್ಪಿ-ಟಿಎಸ್ಪಿ ಅನುದಾನವನ್ನು ಯಾವುದೇ ಕಾರಣಕ್ಕೂ ವಿಳಂಬ ಮಾಡದೆ, ನಿಗದಿತ ಅವಧಿಯೊಳಗೆ ಸಮರ್ಪಕವಾಗಿ ಬಳಕೆ ಮಾಡಬೇಕು. ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಮತ್ತು ವಿತರಿಸಲಾದ ಸೌಲಭ್ಯಗಳ ಬಗ್ಗೆ ನಿಖರವಾದ ಅಂಕಿಅಂಶಗಳನ್ನು ಒದಗಿಸಬೇಕು ಎಂದು ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳ ಫಲಾನುಭವಿಗಳಿಗೆ ಯಾವುದೇ ಸೌಲಭ್ಯ ನೀಡುವಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಇದಕ್ಕಾಗಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ಆನ್‌ಲೈನ್ ಮೂಲಕವೇ ಅರ್ಜಿ ಆಹ್ವಾನಿಸಬೇಕು. ಇದಕ್ಕಾಗಿ 'ಎನ್‌ಐಸಿ' ಯುನಿಟ್ ಇದ್ದು, ಆನ್‌ಲೈನ್ ಪ್ರಕ್ರಿಯೆಗೆ ಅನುವು ಮಾಡಿಕೊಡಲಿದ್ದಾರೆ ಎಂದು ತಿಳಿಸಿದರು.

ಜಿಲ್ಲೆಯ ವಿವಿಧ ನಗರ-ಸ್ಥಳೀಯ ಸಂಸ್ಥೆಗಳಲ್ಲಿ ಎಸ್ಸಿ ಎಸ್ಪಿ-ಟಿಎಸ್ಪಿ ಅನುದಾನ ಬಳಕೆಯಾಗದೇ ಇರುವುದು ಕಂಡುಬಂದಿದ್ದು, ಸಂಬಂಧಿಸಿದ ಮುಖ್ಯಾಧಿಕಾರಿಗಳಿಗೆ ಹಾಗೂ ಜಿಲ್ಲಾ ನಗರಾಭಿವೃದ್ಧಿ ಇಲಾಖೆಯ ಯೋಜನಾ ನಿರ್ದೇಶಕರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಬೇಕು ಎಂದು ನಿರ್ದೇಶನ ನೀಡಿದರು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಮಾತನಾಡಿ, ಆಯೋಗದ ಅಧ್ಯಕ್ಷರ ಭೇಟಿಯ ಸಂದರ್ಭದಲ್ಲಿ ಸ್ಥಳೀಯ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ಸಂಘಟನೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಭೇಟಿ ಮಾಡಿ ತಮ್ಮ ಕುಂದು ಕೊರತೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಈ ಕುರಿತು ಸಾಕಷ್ಟು ಪ್ರಚಾರ ಕೈಗೊಳ್ಳಬೇಕು. ಆಯೋಗದ ಅಧ್ಯಕ್ಷರ ಭೇಟಿ ಮಾಹಿತಿ ಕುರಿತು ಜನಪ್ರತಿನಿಧಿಗಳಿಗೆ ಗಮನಕ್ಕೆ ತರಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಿಗೆ ಸೂಚಿಸಿದರು.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದಪ್ಪ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಾಷು ಮೋದ್ದಿನ್, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯಕ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಬೀದರನಲ್ಲಿ ಅಗ್ನಿವೀರ ಸೇನಾ ಭರ್ತಿ ರ್‍ಯಾಲಿ



ಬೀದರ,ಮೇ 16-

ಬೀದರ್‌ನಲ್ಲಿ ಜನೇವರಿ-2027 ರಲ್ಲಿ ಬಹುವರ್ಷಗಳ ನಂತರ ಅಗ್ನಿವೀರ ಸೇನಾ ಭರ್ತಿ ರ್‍ಯಾಲಿ ಜರುಗಲಿದ್ದು, ಬೀದರ ಜಿಲ್ಲೆಯ ಉದ್ಯೋಗಾಕಾಂಕ್ಷಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಇದರ ಲಾಭ ಪಡೆಯಬೇಕೆಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ತಿಳಿಸಿದರು.

ಅವರು ಶುಕ್ರವಾರ ಬೀದರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಈ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾಡನಾಡುತ್ತಾ, ಕಲ್ಯಾಣ ಕರ್ನಾಟಕದ ಆರು ಜಿಲ್ಲೆಗಳ ಯುವಕರು ಈ ಸೇನಾ ಭರ್ತಿ ರ್‍ಯಾಲಿಯಲ್ಲಿ ಪಾಲ್ಗೊಳ್ಳಲು ಅವಕಾಶ ಇದ್ದು, ಬೀದರ ಜಿಲ್ಲೆಯ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಬೀದರನ ನೆಹರು ಕ್ರೀಡಾಂಗಣದಲ್ಲಿ ಸೇನಾ ಭರ್ತಿ ರ್‍ಯಾಲಿ ಜರುಗಲಿದ್ದು, ರ್‍ಯಾಲಿ ಯಶಸ್ವಿಗೊಳ್ಳಲು ಜಿಲ್ಲಾಡಳಿತದಿಂದ ಎಲ್ಲ ರೀತಿಯ ಸಹಕಾರ ನೀಡುವುದುದಾಗಿ ತಿಳಿಸಿದರು. ಅಗ್ನಿವೀರ ಸೇನಾ ಭರ್ತಿ ರ್‍ಯಾಲಿ ಬಗ್ಗೆ ಮಾತನಾಡಿದ ಕರ್ನಲ್ ಅಶ್ವಿನಿ ಅವರು ಬೀದರನಲ್ಲಿ 5 ವರ್ಷಗಳ ನಂತರ ರ್‍ಯಾಲಿ ಜರುಗಲಿದೆ. ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಯುವಕರು ವಿಶೇಷವಾಗಿ ಬೀದರ ಜಿಲ್ಲೆಯ ಯುವಕರು ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಬೀದರ ಜಿಲ್ಲೆಯ ಅಭ್ಯರ್ಥಿಗಳು ತೀರ ಕಡಿಮೆ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆ, ಯುವರಲ್ಲಿ ಸೇನಾ ಭರ್ತಿ ಬಗ್ಗೆ ಹೆಚ್ಚಿನ ಅರಿವು ಪ್ರಚಾರ ಅಗತ್ಯವಿದೆ ಎಂದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ ಪೂಜಾರಿ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.



ಉದ್ಯೋಗ ಖಾತ್ರಿ ಕಾಮಗಾರಿ ಪರಿಶೀಲಿಸಿದ ಇಓ ಬಸವರಾಜ ಸಜ್ಜನ್

ಸುರಪುರ,ಮೇ 16-

ತಾಲ್ಲೂಕಿನ ಅರಕೇರಾ (ಕೆ) ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿಜಾಸಪುರ ಗ್ರಾಮದ ಬಳಿ ನಡೆದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಅಡಿಯಲ್ಲಿ ನಡೆದ ಕೆನಾಲ್ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಸಜ್ಜನ್ ಭೇಟಿ ನೀಡಿ ಕಾಮಗಾರಿಯ ಪ್ರಗತಿ ಹಾಗೂ ಸ್ಥಳದಲ್ಲಿನ ಮೂಲಭೂತ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕೂಲಿ ಕಾರ್ಮಿಕರೊಂದಿಗೆ ಸಂವಾದ ನಡೆಸಿ ಮಾತನಾಡಿ, ನರೇಗಾ ಯೋಜನೆಯಡಿ ದೊರೆಯುವ ಸೌಲಭ್ಯಗಳು, ನಿಗದಿತ ಕೆಲಸದ ಅವಧಿ, ಕೂಲಿ ಪಾವತಿ ವಿಧಾನ ಹಾಗೂ ಕಾಮಗಾರಿಯ ಗುಣಮಟ್ಟ ಕಾಪಾಡುವ ಕುರಿತು ಮಾಹಿತಿ ನೀಡಿದರು. ಜೊತೆಗೆ ಕೆಲಸದ ಸ್ಥಳದಲ್ಲಿ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಹಾಗೂ ಪ್ರತಿದಿನ ಹಾಜರಾತಿ ದಾಖಲಿಸುವ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು.

ಕೂಲಿ ಕಾರ್ಮಿಕರ ಅನುಕೂಲಕ್ಕಾಗಿ ಕೆಲಸದ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಫಸ್ಟೆಡ್ ಕಿಟ್ ವ್ಯವಸ್ಥೆಯನ್ನು ಪರಿಶೀಲಿಸಿ, ಅವುಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸಿದರು.

ಕಾಮಗಾರಿಯಲ್ಲಿ ತೊಡಗಿಸಿಕೊಂಡಿದ್ದ ಕಾರ್ಮಿಕರಿಗೆ ಸಮಯಕ್ಕೆ ಸರಿಯಾಗಿ ಕೆಲಸ ನಿರ್ವಹಿಸುವುದು, ಕಾಮಗಾರಿಯನ್ನು ಗುಣಮಟ್ಟದೊಂದಿಗೆ ಪೂರ್ಣಗೊಳಿಸುವುದರ ಕುರಿತು ಸೂಚಿಸಲಾಯಿತು. ಸ್ಥಳದಲ್ಲಿದ್ದ ಮೇಟುಗಳೊಂದಿಗೆ ಚರ್ಚಿಸಿ ಕಾಮಗಾರಿಯ ಪ್ರಗತಿ, ಕಾರ್ಮಿಕರ ಹಾಜರಾತಿ ಹಾಗೂ ಲೇಬರ್ ಎಂಗೇಜ್ ಕುರಿತು ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ತಾಂತ್ರಿಕ ಸಂಯೋಜಕರಾದ ಶಿವಯೋಗಿ ಹಿರೇಮಠ, ತಾಂತ್ರಿಕ ಸಹಾಯಕರಾದ ಭರತ,ಐಇಸಿ ಮಲ್ಲಿಕಾರ್ಜುನ ದೇವಾಪುರ,ಮೇಟುಗಳು ಹಾಗೂ ಕೂಲಿ ಕಾರ್ಮಿಕರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಅಧ್ಯಯನ ದೇಶದ ಅಭಿವೃದ್ಧಿಗೆ ಪೂರಕವಾಗಲಿ: ಡಾ.ಶರಣಪ್ಪ ಎಸ್.ಡಿ.

ಜ್ಞಾನೋತ್ಸವ-2026 ಟೆಕ್ನೋ-ಕಲ್ಚರಲ್ ಫೆಸ್ಟ್‌ಗೆ ಚಾಲನೆ



ಕಲಬುರಗಿ,ಮೇ 16-

ವಿದ್ಯಾರ್ಥಿಗಳು ಕೇವಲ ವೈಯಕ್ತಿಕ ಸಾಧನೆಗಾಗಿ ಮಾತ್ರ ಅಧ್ಯಯನ ಮಾಡಬಾರದು. ಅವರ ಶಿಕ್ಷಣವು ಕುಟುಂಬ ಅಥವಾ ಸಮಾಜಕ್ಕೆ ಸೀಮಿತವಾಗದೇ ದೇಶದ ಅಭಿವೃದ್ಧಿಗೆ ಸಹಾಯಕವಾಗಬೇಕು ಎಂದು ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದ ಶರಣಬಸವ ವಿಶ್ವವಿದ್ಯಾಲಯ ಆವರಣದಲ್ಲಿ ಶುಕ್ರವಾರ ನಡೆದ ಎರಡು ದಿನಗಳ ಜ್ಞಾನೋತ್ಸ ವ-2026 ಟೆಕ್ನೋ-ಕಲ್ಚರಲ್ ಫೆಸ್ಟ್ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಜ್ಞಾನೋತ್ಸ ವ-2026 ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ನಾವೀನ್ಯತೆ, ಸ್ನೇಹಭಾವ ಮತ್ತು ಒಗ್ಗಟ್ಟನ್ನು ಬೆಳೆಸುವ ವೇದಿಕೆಯಾಗಿದೆ. ಇಂತಹ ಉತ್ಸ ವಗಳು ವಿದ್ಯಾರ್ಥಿಗಳಿಗೆ ಹೊಸ ಚಿಂತನೆ ಮತ್ತು ಉತ್ಸಾ ಹವನ್ನು ನೀಡುತ್ತವೆ ಎಂದು ಹೇಳಿದರು.

ಕಲೆ, ವಿಜ್ಞಾನ ಹಾಗೂ ವಾಣಿಜ್ಯ ಸೇರಿದಂತೆ ಯಾವುದೇ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಲು ವಿದ್ಯಾರ್ಥಿಗಳು ಅಸಾಧಾರಣ ದೃಷ್ಟಿಕೋನವನ್ನು ಹೊಂದಿರಬೇಕು. ತಮ್ಮ ಸಾಮರ್ಥ್ಯವನ್ನು ಅಧ್ಯಯನದ ಮೂಲಕ ಸಾಬೀತುಪಡಿಸಿ, ಕನಸುಗಳನ್ನು ನನಸಾಗಿಸಿಕೊಳ್ಳಲು ನಿರಂತರ ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸ್ಥಾಪಿಸಿದ್ದ ನಾವೀನ್ಯತೆ ಹಾಗೂ ಮಾರ್ಕೆಟಿಂಗ್ ಮಳಿಗೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ''ಯಾವಾಗಲೂ ವಿಶಾಲವಾಗಿ ಯೋಚಿಸಿ. ನಾನು ಮತ್ತು ನನ್ನ ಕುಟುಂಬ ಎಂಬ ಸೀಮಿತ ಚಿಂತನೆಯಿಂದ ಹೊರಬಂದು ಜಾಗತಿಕ ನಾಯಕರು, ಸಂಶೋಧಕರು, ಇಂಜಿನಿಯರ್‌ಗಳು, ಶಿಕ್ಷಕರು ಹಾಗೂ ವೈದ್ಯರಾಗಿ ಬೆಳೆದು ದೇಶಕ್ಕೆ ಕೊಡುಗೆ ನೀಡಬೇಕು'' ಎಂದು ಪ್ರೇರೇಪಿಸಿದರು. ಸಮಯದ ಮಹತ್ವವನ್ನು ಉಲ್ಲೇಖಿಸಿದ ಅವರು, ಸಮಯ ಅಮೂಲ್ಯವಾದುದು. ಅದನ್ನು ವ್ಯರ್ಥ ಮಾಡದೆ ಸದುಪಯೋಗಪಡಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇದೇ ವೇಳೆ ಸಂಚಾರಿ ನಿಯಮಗಳ ಪಾಲನೆ ಕುರಿತು ಜಾಗೃತಿ ಮೂಡಿಸಿದ ಆಯುಕ್ತರು, ಎಲ್ಲರೂ ತಪ್ಪದೇ ಹೆಲ್ಮೆಟ್ ಹಾಗೂ ಸೀಟ್ ಬೆಲ್ಟ್ ಧರಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಸಂಭ್ರಮ, ಸಡಗರ ಮನೆಮಾಡಿದ್ದು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉತ್ಸಾ ಹದಿಂದ ಭಾಗವಹಿಸಿದ್ದರು. ವಿಶ್ವವಿದ್ಯಾಲಯ ಆವರಣದಲ್ಲಿ ಉತ್ಸ ವದ ವಾತಾವರಣ ಕಂಗೊಳಿಸುತ್ತಿತ್ತು.

ಶರಣಬಸವೇಶ್ವರ ಸಂಸ್ಥಾನದ 9ನೇ ಮಹಾದಾಸೋಹ ಪೀಠಾಧಿಪತಿಗಳಾದ ಪೂಜ್ಯ ದೊಡ್ಡಪ್ಪ ಅಪ್ಪಾಜಿ ಜ್ಞಾನೋತ್ಸ ವ-2026 ಟೆಕ್ನೋ-ಕಲ್ಚರಲ್ ಫೆಸ್ಟ್ ಉದ್ಘಾಟಿಸಿದರು. ಕಾರ್ಯಕ್ರಮವು ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಡಾ. ದಾಕ್ಷಾಯಿಣಿ ಅವ್ವಾಜಿ ಅವರ ಘನ ಉಪಸ್ಥಿತಿಯಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ, ಉಪಕುಲಪತಿ ಪ್ರೊ. ಅನಿಲಕುಮಾರ ಬಿಡವೆ, ನಿರ್ದೇಶಕ ಪ್ರೊ. ವಿ.ಡಿ. ಮೈತ್ರಿ, ಕುಲಸಚಿವ (ಮೌಲ್ಯಮಾಪನ) ಡಾ. ಎಸ್.ಎಚ್. ಹೊನ್ನಳ್ಳಿ, ಡೀನ್ ಡಾ. ಶಿವಕುಮಾರ ಜವಳಿಗಿ, ಹಣಕಾಸು ಅಧಿಕಾರಿ ಡಾ.ಕಿರಣ ಮಾಕಾ ಸೇರಿದಂತೆ ವಿವಿಧ ವಿಭಾಗಗಳ ಡೀನರು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಕುಲಸಚಿವ ಡಾ. ಲಕ್ಷ್ಮೀ ಪಾಟೀಲ ಮಾಕಾ ಅತಿಥಿಗಳನ್ನು ಸ್ವಾಗತಿಸಿದರು. ಪ್ರೊ. ಶೃತಿ ಹಾಗೂ ಪ್ರೊ. ಚೇತನಾ ಕಾರ್ಯಕ್ರಮ ನಿರೂಪಿಸಿದರು.

ಜ್ಞಾನೋತ್ಸ ವ-2026 ಅಂಗವಾಗಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಸ್ಥಾಪಿಸಿದ್ದ ಮಳಿಗೆಗಳನ್ನು ಪೂಜ್ಯ ದೊಡ್ಡಪ್ಪ ಅಪ್ಪಾಜಿಯವರು ಉದ್ಘಾಟಿಸಿದರು.

ಪಿಂಚಣಿ ವಿಲೇವಾರಿ ವೇಗಗೊಳಿಸಲು ಕ್ರಮ; ಶೀಘ್ರದಲ್ಲೇ ಡಿಜಿಟಲೀಕರಣ ವ್ಯವಸ್ಥೆ ಜಾರಿ- ಸಚಿನ್ ಕೃಷ್ಣ ಕೌಶಿಕ್



ಬಳ್ಳಾರಿ,ಮೇ 16-

ಪಿಂಚಣಿ ವಿಲೇವಾರಿ ಪ್ರಕ್ರಿಯೆ ಯನ್ನು ಸಂಪೂರ್ಣವಾಗಿ ಡಿಜಿಟಲೀ ಕರಣಗೊಳಿಸಲು ಸಿದ್ಧತೆ ನಡೆಸಲಾ ಗುತ್ತಿದ್ದು, ಶೀಘ್ರದಲ್ಲೇ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ ಎಂದು ಡೆಪ್ಯುಟಿ ಅಕೌಂಟ್ ಜನರಲ್ (ಪಿಂಚಣಿ ವಿಭಾಗ) ಸಚಿನ್ ಕೃಷ್ಣ ಕೌಶಿಕ್ ಅವರು ಹೇಳಿದರು.

ಅಕೌಂಟೆಂಟ್ ಜನರಲ್ ಕಚೇರಿ ಬೆಂಗಳೂರು ಹಾಗೂ ಖಜಾನೆ ಇಲಾಖೆ ಬೆಂಗಳೂರು, ಖಜಾನೆ ಇಲಾಖೆ ಬಳ್ಳಾರಿ ಇವರ ಸಹಯೋ ಗದಲ್ಲಿ ನಗರದ ತಾಲ್ಲೂಕು ಆಡಳಿತ ಭವನದ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಪಿಂಚಣಿ ಅದಾ ಲತ್, ಸಾಮಾನ್ಯ ಭವಿಷ್ಯ ನಿಧಿ ಅದಾ ಲತ್ ಹಾಗೂ ಲೆಕ್ಕಪತ್ರ ಸಮಸ್ಯೆಗಳ ಕುರಿತು ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಿವೃತ್ತ ಸರ್ಕಾರಿ ನೌಕರರು ತಮ್ಮ ಪಿಂಚಣಿ ಸೌಲಭ್ಯಗಳಿಗಾಗಿ ಕಚೇರಿ ಯಿಂದ ಕಚೇರಿಗೆ ಅಲೆಯುವುದನ್ನು ತಪ್ಪಿಸಲು ಮತ್ತು ವಿಳಂಬವಿಲ್ಲದೆ ಸೌಲಭ್ಯ ಒದಗಿಸಲು ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ಈ ಹಿಂದೆ ಪಿಂಚಣಿ ಮಂಜೂರಾತಿಗೆ ದೀರ್ಘಕಾಲ ತೆಗೆದುಕೊಳ್ಳಲಾ ಗುತ್ತಿತ್ತು. ಆದರೆ ಕಳೆದ ಐದಾರು ತಿಂಗಳಿನಿಂದ ಪ್ರಕ್ರಿಯೆಯನ್ನು ವೇಗಗೊಳಿಸಲಾಗಿದ್ದು, ಗರಿಷ್ಠ 30 ರಿಂದ 45 ದಿನಗಳೊಳಗೆ ವಿಲೇವಾರಿ ಮಾಡಲು ಪ್ರಯತ್ನಿಸಲಾಗುತ್ತಿದೆ ಎಂದರು.

ಏಪ್ರಿಲ್ 1ರ ವೇಳೆಗೆ ಕೇವಲ 15 ಮೂಲ ಪ್ರಕರಣಗಳು ಮತ್ತು 221 ವಿಭಾಗೀಯ ಪ್ರಕರಣಗಳು ಬಾಕಿ ಇದ್ದವು. ಏಪ್ರಿಲ್ 25ರ ಸುಮಾರಿಗೆ ಸುಮಾರು 9,000 ಹೊಸ ಪ್ರಕರಣಗಳು ಬಂದಿದ್ದು, ಕಳೆದ ಒಂದು ತಿಂಗಳ ಅವಧಿಯಲ್ಲಿ ಒಟ್ಟು 30, 000 ಪಿಂಚಣಿ ಪ್ರಕರಣಗಳನ್ನು ಯಶ ಸ್ವಿಯಾಗಿ ಇತ್ಯರ್ಥಪಡಿಸಲಾಗಿದೆ ಎಂದು ತಿಳಿಸಿದರು.

ಇಲಾಖೆಯಲ್ಲಿ ಶೇ. 50 ರಷ್ಟು ಸಿಬ್ಬಂದಿ ಕೊರತೆ ಇದ್ದರೂ ಸಹ, ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಶನಿವಾರ ಹಾಗೂ ಭಾನುವಾರಗಳ ರಜೆ ದಿನಗಳಲ್ಲಿ ಕೆಲಸ ಮಾಡುವ ಮೂಲಕ ಬಾಕಿ ಪ್ರಕರಣಗಳನ್ನು ವಿಲೇವಾರಿ ಮಾಡಿದ್ದಾರೆ. ಮುಂದಿನ 2-3 ತಿಂಗಳುಗಳಲ್ಲಿ ಇಡೀ ವ್ಯವಸ್ಥೆಯನ್ನು ಸಂಪೂರ್ಣ ಡಿಜಿಟಲೀ ಕರಣ ಮಾಡುವ ಗುರಿ ಹೊಂದ ಲಾಗಿದೆ. ಇದರಿಂದ ಪಿಂಚಣಿದಾರರು ತಮ್ಮ ಪಿಪಿಒ ಅನ್ನು ಆನ್‌ಲೈನ್ ಮೂಲಕವೇ ಡೌನ್‌ಲೋಡ್ ಮಾಡಿ ಕೊಳ್ಳಬಹುದು ಮತ್ತು ಪಾವತಿಗಾಗಿ ಖಜಾನೆಗೆ ನೇರವಾಗಿ ಸಲ್ಲಿಸಬಹುದು. ಈ ಪ್ರಕ್ರಿಯೆಯಿಂದಾಗಿ ಸ್ಪೀಡ್ ಪೋಸ್ಟ್ ಮೂಲಕ ಕಳುಹಿ ಸುವ ವಿಳಂಬ ತಪ್ಪಲಿದೆ ಎಂದರು.

ಬಳ್ಳಾರಿ ಮತ್ತು ಕಲಬುರಗಿ ವಿಭಾಗದ ಜಿಲ್ಲೆಗಳಲ್ಲಿ ಸಾಮಾನ್ಯ ವಾಗಿ ನವೆಂಬರ್-ಡಿಸೆಂಬರ್ ಅವಧಿಯಲ್ಲಿ ನಡೆಸಲಾಗುತ್ತಿದ್ದ ಪಿಂಚಣಿ ಅದಾಲತ್‌ಗಳನ್ನು ಈ ಬಾರಿ ಬೇಸಿಗೆಯಲ್ಲೇ ಆಯೋಜಿ ಸಲಾ ಗಿದೆ. ವಿಳಂಬವಾಗುತ್ತಿರುವ ಕೆಲವು ಪ್ರಕರಣಗಳನ್ನು ಆದಷ್ಟು ಬೇಗ ಇತ್ಯರ್ಥಪಡಿಸಲು ಕನಿಷ್ಠ 15 ದಿನಗಳ ಗುರಿಯನ್ನು ಹಾಕಿಕೊಳ್ಳಲಾಗಿದೆ ಎಂದರು.

ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಮಲ್ಲೇಶಪ್ಪ ಅವರು ಮಾತನಾಡಿ, ಪಿಂಚಣಿಗಾಗಿ ಅರ್ಜಿ ಸಲ್ಲಿಸಿದರೂ ಆರು ತಿಂಗಳಿಂದ ಒಂದು ವರ್ಷದವರೆಗೆ ವಿಳಂಬವಾಗುತ್ತಿದೆ. ಇದು ತಾಂತ್ರಿಕ ಸಮಸ್ಯೆ ಯೋ ಅಥವಾ ಸರ್ಕಾರದ ಮಟ್ಟದ ವಿಳಂಬವೋ ತಿಳಿಯುತ್ತಿಲ್ಲ. ಅರ್ಜಿ ಸಲ್ಲಿಸಿದ 1 ರಿಂದ 3 ತಿಂಗಳೊಳಗೆ ಪ್ರಕ್ರಿಯೆ ಪೂರ್ಣಗೊಳ್ಳಬೇಕು. ಜೀವಿತ ಪ್ರಮಾಣಪತ್ರ ಸಲ್ಲಿಸುವ ಪ್ರಕ್ರಿಯೆಯನ್ನು ಸರಳಗೊಳಿಸ ಬೇಕು. ಬ್ಯಾಂಕ್ ಮತ್ತು ಇಲಾಖೆಗಳ ನಡುವೆ ಅಲೆದಾಡುವುದನ್ನು ತಪ್ಪಿಸಿ, ನೇರವಾಗಿ ಬ್ಯಾಂಕ್ ಮಟ್ಟದಲ್ಲೇ ಕೆಲಸಗಳು ಸುಗಮವಾಗಿ ನಡೆಯುವಂತಾಗಬೇಕು ಎಂದರು.

ಬ್ಯಾಂಕ್ ಗಳಲ್ಲಿ ವಯಸ್ಸಾ ದ ಪಿಂಚಣಿದಾರರು ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಇದೆ. ಹಾಗಾಗಿ, ಪಿಂಚಣಿದಾರರಿಗಾಗಿಯೇ ಬ್ಯಾಂಕಿನಲ್ಲಿ ಪ್ರತ್ಯೇಕ ಕೌಂಟರ್ ವ್ಯವಸ್ಥೆ ಮಾಡಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ನಿವೃತ್ತ ಪಿಂಚಣಿ ದಾರರು ತಮ್ಮ ಸಮಸ್ಯೆಗಳನ್ನು ಅಹವಾಲುಗಳ ಮೂಲಕ ಸಲ್ಲಿಸಿದರು. ಕಾಲಮಿತಿಯಲ್ಲಿ ಇತ್ಯರ್ಥಗೊಳಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಹಾಲೇ ಖಪಾಲರ ಕಚೇರಿಯ ಸೀನಿಯರ್ ಡಿ.ಎ.ಜಿ ಯಶೋದಾ, ಬೆಂಗಳೂರು ಮಹಾಲೇಖಪಾಲರ ಕಚೇರಿಯ ಸೀನಿಯರ್ ಅಕೌಂಟ್ಸ್ ಆಫೀಸರ್ ನಾಗಜ್ಯೋತಿ, ಅಕೌಂಟ್ಸ್ ಆಫೀಸರ್ ಶ್ರೀಕಾಂತ್ ಎಂ.ಜೆ., ಜಿಲ್ಲಾ ಖಜಾನೆ ಬಳ್ಳಾರಿಯ ಉಪ ನಿರ್ದೇಶಕ ಶೇಖರಪ್ಪ, ಸಹಾಯಕ ಖಜಾನಾಧಿಕಾರಿ ಪ್ರಭು ಮತ್ತು ಸಣ್ಣ ಉಳಿತಾಯ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಹೊನ್ನೂರಪ್ಪ ಸೇರಿದಂತೆ ವಿವಿಧ ಬ್ಯಾಂಕ್ ಗಳ ಮುಖ್ಯಸ್ಥರು, ನಿವೃತ್ತ ಪಿಂಚಣಿ ದಾರರು ಹಾಗೂ ಇತರರು ಉಪಸ್ಥಿತರಿದ್ದರು.

ಸಂವಿಧಾನದ ಅರಿವು ಮೂಡಿಸುವ ಕೆಲಸ ಅಗತ್ಯ: ಸಿದ್ಧಲಿಂಗ ಮಹಾಸ್ವಾಮಿಗಳು



ಕಲಬುರಗಿ,ಮೇ 16-

ಪುರೋಹಿತಶಾಹಿಯ ಕಪಿಮುಷ್ಠಿಯಲ್ಲಿ ಸಿಲುಕಿ ಮೂಢನಂಬಿಕೆಗಳಲ್ಲಿ ಮುಳುಗಿರುವ ಜನರಿಗೆ ಅಂಬೇಡ್ಕರ್ ಹಾಗೂ ಸಂವಿಧಾನದ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುವ ಮೂಲಕ ಸಮಾಜದಲ್ಲಿ ಪ್ರಜ್ಞೆ ಮೂಡಿಸಬೇಕು ಎಂದು ನೆಲೋಗಿ ವಿರಕ್ತಮಠದ ಸಿದ್ದಲಿಂಗ ಮಹಾಸ್ವಾಮಿಗಳು ಹೇಳಿದರು.

ಜೇವರ್ಗಿ ಪಟ್ಟಣದಲ್ಲಿ ತಥಾಗತ ಗೌತಮ ಬುದ್ಧರ ಮೂರ್ತಿ ಪ್ರತಿಷ್ಠಾಪನೆ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸ ವ ಅಂಗವಾಗಿ ಜಯಂತ್ಯೋತ್ಸ ವ ಸಮಿತಿ ವತಿಯಿಂದ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ''ಡಾ. ಅಂಬೇಡ್ಕರ್ ಅರಿವು ಉತ್ಸ ವ'' ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

800 ವರ್ಷ ಮೊಗಲರು ಹಾಗೂ 200 ವರ್ಷ ಬ್ರಿಟಿಷರು ಆಳಿದರೂ ದೇಶದಲ್ಲಿ ಜಾತೀಯತೆ, ಅಸ್ಪೃಶ್ಯತೆ ಮತ್ತು ಮೂಢನಂಬಿಕೆಗಳು ಮುಂದುವರಿದಿವೆ. ''ರಾಮಬಾಣಕ್ಕೆ ಭೀಮಬಾಣವೇ ಮದ್ದು'' ಎಂದು ಅವರು ಹೇಳಿದರು.

ಮುಖ್ಯ ಭಾಷಣಕಾರರಾಗಿದ್ದ ಚಿಂತಕ ಸುರೇಶ್ ಗೌತಮ ಮಾತನಾಡಿ, ಡಾ. ಅಂಬೇಡ್ಕರ್ ಕೇವಲ ದಲಿತರಿಗಾಗಿ ಮಾತ್ರವಲ್ಲ, ಮಹಿಳೆಯರು ಹಾಗೂ ಹಿಂದುಳಿದ ವರ್ಗಗಳ ಏಳಿಗೆಗಾಗಿ ಹೋರಾಡಿದ ಮಹಾನ್ ನಾಯಕರು ಎಂದು ಹೇಳಿದರು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ದೇಶದ ಎಲ್ಲಾ ಸಮಸ್ಯೆಗಳಿಗೆ ಬ್ರಿಟಿಷರೇ ಕಾರಣ ಎಂಬ ಭಾವನೆ ಇತ್ತಾದರೂ, ಸಮಾಜದಲ್ಲಿನ ಶ್ರೇಣೀಕೃತ ವ್ಯವಸ್ಥೆಯೂ ಶೋಷಣೆಗೆ ಪ್ರಮುಖ ಕಾರಣ ಎಂದು ಅಂಬೇಡ್ಕರ್ ಅರಿತು ಅದರ ವಿರುದ್ಧ ಹೋರಾಟ ನಡೆಸಿದರು. ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಮೂಲಕ ಸಮಾನ ಸಮಾಜ ನಿರ್ಮಿಸಬೇಕು ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ವೈದ್ಯಕೀಯ, ಸಂಗೀತ ಹಾಗೂ ಶೈಕ್ಷಣಿಕ ಕ್ಷೇತ್ರದ ಸಾಧಕರನ್ನು ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಇದಕ್ಕೂ ಮೊದಲು ಪಟ್ಟಣದ ವಿಜಯಪುರ ಕ್ರಾಸ್‌ನಿಂದ ಗೌತಮ ಬುದ್ಧರ ಮೂರ್ತಿಯನ್ನು ಮೆರವಣಿಗೆಯ ಮೂಲಕ ಕರೆತಂದು ಅಂಬೇಡ್ಕರ್ ಭವನದಲ್ಲಿ ಪ್ರತಿಷ್ಠಾಪಿಸಲಾಯಿತು. ಮೆರವಣಿಗೆಯನ್ನು ಜಿಪಂ ಮಾಜಿ ಸದಸ್ಯ ಚಂದ್ರಶೇಖರ ಹರನಾಳ ಉದ್ಘಾಟಿಸಿದರು.

ಅಣದೂರು ಬುದ್ಧ ವಿಹಾರದ ಭಂತೆ ವರಜ್ಯೋತಿ ಹಾಗೂ ಇನ್ನಿತರ ಭಂತೇಜಿಗಳು ಸಾನ್ನಿಧ್ಯ ವಹಿಸಿದ್ದರು. ಜಿಪಂ ಮಾಜಿ ಸದಸ್ಯ ಶಾಂತಪ್ಪ ಕೂಡಲಗಿ ಉದ್ಘಾಟಿಸಿದರು.

ಮುಖ್ಯ ಅತಿಥಿಯಾಗಿದ್ದ ಅಖಿಲ ಭಾರತ ವೀರಶೈವ, ಲಿಂಗಾಯತ ಸಮಾಜದ ರಾಜ್ಯ ಸದಸ್ಯ ರಾಜಶೇಖರ ಸೀರಿ ಮಾತನಾಡಿದರು. ದಸಂಸ ರಾಜ್ಯ ಸಂಚಾಲಕರಾದ ಅರ್ಜುನ ಭದ್ರೆ, ಮರೆಪ್ಪ ಹಳ್ಳಿ, ಜಿಪಂ ಮಾಜಿ ಸದಸ್ಯ ಗುರುಲಿಂಗಪ್ಪಗೌಡ ಮಾಲಿಪಾಟೀಲ ಪ್ರಮುಖರಾದ ಚನ್ನಮಲ್ಲಯ್ಯ ಹಿರೇಮಠ, ಬಾಪೂಗೌಡ ಪಾಟೀಲ ಬಿರಾಳ, ವಸಂತ ನರಿಬೋಳ, ಕೆರೆಪ್ಪ ಹಿಪ್ಪರಗಿ, ಸುಭಾಷ ಚನ್ನೂರ, ಭೀಮರಾಯ ಜನಿವಾರ ಮತ್ತಿತರರು ವೇದಿಕೆಯಲ್ಲಿದ್ದರು. ಜಯಂತ್ಯುತ್ಸ ವ ಸಮಿತಿ ಅಧ್ಯಕ್ಷ ಪುಂಡಲೀಕ ಗಾಯಕವಾಡ ಅಧ್ಯಕ್ಷತೆ ವಹಿಸಿದ್ದರು. ಪಂಡಿತ ಮದಗುಣಕಿ, ಅನಿಲ್ ಟೆಂಗಳಿ, ಡಾ. ಅಶೋಕ ದೊಡ್ಡಮನಿ, ನಿಜಲಿಂಗ ದೊಡ್ಡಮನಿ, ವಿಠಲ್ ಚಿಕಣಿ, ಮರೆಪ್ಪ ಬೇಗಾರ ಸೇರಿದಂತೆ ನೂರಾರು ಜನ ಭಾಗವಹಿಸಿದ್ದರು.

ಶಾಂತಿ, ಕರುಣೆ, ಸಮಾನತೆ ಸಾರಿದ ಮಹನೀಯರು

ಪತ್ರಕರ್ತ ಹಾಗೂ ಸಾಹಿತಿ ಡಾ. ಶಿವರಂಜನ ಸತ್ಯಂಪೇಟೆ ಮಾತನಾಡಿ, ಬುದ್ಧ, ಬಸವ ಹಾಗೂ ಅಂಬೇಡ್ಕರ್ ಅವರಿಗೆ ಸಾವಿರಾರು ವರ್ಷಗಳ ಅಂತರವಿದ್ದರೂ, ಶಾಂತಿ, ಕರುಣೆ, ಸಮಾನತೆ ಹಾಗೂ ಸ್ವಾತಂತ್ರ್ಯದ ಕನಸನ್ನು ಮೂವರು ಮಹನೀಯರೂ ಸಮಾಜಕ್ಕೆ ನೀಡಿದ್ದಾರೆ. ''ಆಸೆಯೇ ದುಃಖಕ್ಕೆ ಮೂಲ'' ಎಂದು ಬುದ್ಧ ಹೇಳಿದರೆ, ''ಮಾನವ ನಿರ್ಮಿತ ಸಾಮಾಜಿಕ ವ್ಯವಸ್ಥೆಯೇ ದುಃಖಕ್ಕೆ ಕಾರಣ'' ಎಂದು ಬಸವಣ್ಣ ಹೇಳಿದ್ದಾರೆ. ಈ ಎಲ್ಲ ಅನ್ಯಾಯಗಳಿಗೆ ಶಿಕ್ಷಣವೇ ಶಕ್ತಿಯುತ ಅಸ್ತ್ರ ಎಂದು ಅಂಬೇಡ್ಕರ್ ಬೋಧಿಸಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟರು.

ಒಂದನೇಯ ಪುಟದಿಂದ

ರಾಜ್ಯಗಳು ತಮ್ಮದೇ ಆದ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಲು ಅವಕಾಶ ನೀಡುವಂತೆ ಕೇಂದ್ರಕ್ಕೆ ಮನವಿ

ಮತ್ತು ಕನಸುಗಳನ್ನು ಪರೀಕ್ಷಾ ಅವ್ಯವಸ್ಥೆಗಳ ಕಾರಣಕ್ಕೆ ಹಾಳುಮಾಡಲು ಅವಕಾಶ ನೀಡಲಾಗುವುದಿಲ್ಲ. ಪ್ರತಿಭಾವಂತ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ರಕ್ಷಿಸುವ ಅಗತ್ಯ ಇದೆ ಎಂದು ಅವರು ಹೇಳಿದ್ದಾರೆ.

ಎಂಬಿಬಿಎಸ್ ಸೀಟ್‌ಗಳ ಹೆಚ್ಚಳ:

ವೈದ್ಯಕೀಯ ಶಿಕ್ಷಣದಲ್ಲಿ 11 ಸರ್ಕಾರಿ ಎಂಬಿಬಿಎಸ್ ಕಾಲೇಜುಗಳಲ್ಲಿ 550 ಎಂಬಿಬಿಎಸ್ ಸೀಟ್‌ಗಳನ್ನು ಹಾಗೂ 23 ಶಿಕ್ಷಣ ಸಂಸ್ಥೆಗಳಲ್ಲಿ 572 ಸ್ನಾತಕೋತ್ತರ ಕೋರ್ಸ್‌ಗಳ ಸೀಟ್‌ಗಳನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಈ ಮೊದಲು 1,700 ಸೀಟ್‌ಗಳು ಲಭ್ಯವಿದ್ದವು. 550 ಸೇರ್ಪಡೆಯಿಂದ 2,250 ಸೀಟುಗಳಾಗಿವೆ. ಇದಕ್ಕಾಗಿ ಕೇಂದ್ರ ಸರ್ಕಾರ 495, ರಾಜ್ಯ ಸರ್ಕಾರ 330 ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದೆ. ಸ್ನಾತಕೋತ್ತರ ಕೋರ್ಸ್‌ಗಳಲ್ಲಿ 1,673 ಸೀಟ್‌ಗಳ ಜೊತೆಗೆ 572 ಸೇರಿ ಒಟ್ಟು 2,245 ಸೀಟ್‌ಗಳಾಗಲಿದ್ದು ಇದಕ್ಕಾಗಿ ಕೇಂದ್ರ ಸರ್ಕಾರ 541, ರಾಜ್ಯ ಸರ್ಕಾರ 316 ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದೆ ಎಂದು ಹೇಳಿದರು.

ಖಾಸಗಿ ಹಾಗೂ ಇತರ ಸಂಸ್ಥೆಗಳ ಅಧೀನದಲ್ಲಿರುವ ಕಾಲೇಜುಗಳಲ್ಲಿ 450 ಸೀಟ್‌ಗಳನ್ನು ಹೆಚ್ಚಿಸಲಾಗಿದ್ದು, ಈ ಮೊದಲಿದ್ದ 3,800 ಸೀಟ್‌ಗಳನ್ನು ಒಳಗೊಂಡಂತೆ ಒಟ್ಟು 4,250 ವೈದ್ಯಕೀಯ ಸೀಟ್‌ಗಳು ಲಭ್ಯವಾಗುತ್ತಿದೆ ಎಂದು ವಿವರಿಸಿದರು.

ರಾಜ್ಯದಲ್ಲಿ ಒಟ್ಟು 72 ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಂದ 13,945 ಹಾಗೂ ಸ್ನಾತಕೋತ್ತರದಲ್ಲಿ 7,727 ಸೀಟ್‌ಗಳು ಲಭ್ಯವಾದಂತಾಗಲಿವೆ ಎಂದು ತಿಳಿಸಿದ್ದಾರೆ.

ಡೆಂಗಿ ನಿಯಂತ್ರಣಕ್ಕಾಗಿ ಸಮುದಾಯದ ಸಹಭಾಗಿತ್ವ ಅತ್ಯಗತ್ಯ - ಡಾ.ಸುರೇದ್ರಬಾಬು

ಆವರಣದಲ್ಲಿ ನೀರು ನಿಲ್ಲದಂತೆ ನಿಗಾ ವಹಿಸಬೇಕಿದೆ. ಅಲ್ಲದೆ ಡೆಂಗ್ಯು ರೋಗಕ್ಕೆ ನೇರವಾದ ಚಿಕಿತ್ಸೆ ಇಲ್ಲ, ಲಕ್ಷಣಗಳಾಧರಿಸಿ ಚಿಕಿತ್ಸೆ ನೀಡಲಾಗುವುದು. ನಿರ್ಲಕ್ಷ್ಯಿಸಿದರೆ ಗಂಭೀರ ಆರೋಗ್ಯ ಸಮಸ್ಯೆ ಉಂಟಾಗುವ ಸಾಧ್ಯತೆಗಳು ಇರುವುದರಿಂದ ಚಿಕ್ಕ ಮಕ್ಕಳು, ವಯೊವೃದ್ದರು, ಗರ್ಭಿಣ , ಬಾಣಂತಿಯರ ಆರೋಗ್ಯದ ಸುರಕ್ಷತೆ ವಹಿಸಲು ಸೂಚಿಸಿ ಮಲಗುವಾಗ ಸೊಳ್ಳೆ ಪರದೆ, ಕಿಡಕಿಗಳಿಗೆ ಜಾಲರಿ ಅಳವಡಿಕೆ ಸೊಳ್ಳೆ ಬತ್ತಿ ಬಳಕೆ, ಹಾಗೂ ಶಾಸ್ವತ ನೀರು ನೀಲ್ಲುವ ಸ್ಥಳಗಳಿದ್ದಲ್ಲಿ ಲಾರ್ವಾಹಾರಿ ಗಪ್ಪಿ ಹಾಗೂ ಗಂಬೋಷಿಯಾ ಮೀನು ಬಿಡುವುದರ ಸದುಪಯೋಗಕ್ಕೆ ಹೆಚ್ಚು ಜಾಗೃತಿಗಾಗಿ ತಿಳಿಸಿದರು.ಸೊಳ್ಳೆಯ ಉತ್ಪತ್ತಿ ತಾಣ ಕಂಡು ಬಂದರೆ ದಂಡ ಸೊಳ್ಳೆ ಉತ್ಪತ್ತಿ ತಡೆಯಲು ಕರ್ನಾಟಕ ಸರಕಾರವು ಜಾಗೃತಿಯ ಜೊತೆಜೊತೆಗೆ ನಿರ್ಲಕ್ಷ್ಯ ವಹಿಸುವುದನ್ನು ತಡೆಯಲು ರಾಜ್ಯಾದ್ಯಂತ ದಂಡ ವಿಧಿಸಲು ಸೂಚಿಸಿದೆ. ಮನೆಗಳಿಗೆ ಗ್ರಾಮೀಣ ಭಾಗದಲ್ಲಿ ರೂ 400/- ನಗರ ಪ್ರದೇಶಗಳಲ್ಲಿ ರೂ 800/- ವಾಣ ಜ್ಯ ಮಳಿಗೆ ಗ್ರಾಮೀಣ ಭಾಗದಲ್ಲಿ ರೂ 1000/- ನಗರ ಪ್ರದೇಶಗಳಲ್ಲಿ ರೂ 2000/- ಕಟ್ಟಡ ನಿರ್ಮಾಣ, ಗ್ರಾಮೀಣ ಭಾಗದಲ್ಲಿ ರೂ 2000/- ನಗರ ಪ್ರದೇಶಗಳಲ್ಲಿ ರೂ 4000/- ದಂಡ ವಿಧಿಸಬಹುದಾಗಿದ್ದು, ಸಾರ್ವಜನಿಕರು, ವ್ಯಾಪ್ಯಾರಸ್ಥರು, ಕೈಗಾರಿಕೋದ್ಯಮಿಗಳು ಸೊಳ್ಳೆ ಉತ್ಪತ್ತಿ ತಡೆಯಲು ಕೊರಿದರು.ಈ ಸಂದರ್ಭದಲ್ಲಿ ಜಿಲ್ಲಾ ಅರ್‌ಸಿಹೆಚ್ ಅಧಿಕಾರಿ ಡಾ. ನಂದಿತಾ ಎಮ್ ಎನ್, ಜಿಲ್ಲಾ ಎನ್‌ಪೊರ್ಸ್ಮೆಂಟ್ ಅಧಿಕಾರಿ ಡಾ.ಶಿವಕುಮಾರ್ ನಾರಾ, ತಾಲೂಕಾ ಆರೋಗ್ಯಾಧಿಕಾರಿ ಡಾ. ಅಮೃತ್ ಹುಕ್ಕೇರಿ, ವೈದ್ಯಾಧಿಕಾರಿ ಡಾ.ರಾಕೇಶ್, ವಿಭಾಗೀಯ ಕೀಟ ಶಾಸ್ತ್ರಜ್ಞೆ ಗಂಗೋತ್ರಿ, ರೆಡ್ ಕ್ರಾಸ್ ಜಿಲ್ಲಾ ಸಂಚಾಲಕ, ಡಾ ದಂಡಪ್ಪ ಬಿರಾದಾರ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಡಿವೈಹೆಚ್‌ಇಓ ಬಸಯ್ಯ, ವೈದ್ಯರಾದ ಡಾ ಪರ್ಹಾನ್ ನಸ್ರತ್ ಖಾಜಿ, ಡಾ ಸುನೀಲ್, ಡಾ ಗುಂಡಮ್ಮ, ಡಾ ಅಸ್ಪಾಕ್ ಹುಸೇನ್, ಡಾ ಶ್ವೇತಾಂಬರಿ, ಮಲೇರಿಯಾ ವಿಭಾಗದ ಅಡಿವೆಪ್ಪ, ತಾಯಪ್ಪ, ಶರಣಬಸವ ಪಾಟೀಲ್, ಸುರೇಶ್, ಬಿಹೆಚ್‌ಇಓ ನಾಗರಾಜ್, ಸರೋಜಾ, ಎಮ್‌ಟಿಎಸ್ ಸಂಧ್ಯಾ, ಮಹೇಶ್, ಸೇರಿದಂತೆ ಹೆಚ್‌ಐಓ, ಪಿಹೆಚ್‌ಸಿಓ, ಡಿಎಸ್‌ಯು ಸಿಬ್ಬಂದಿಯವರು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಗುಡದನಾಳ ಗ್ರಾಮದಲ್ಲಿ ತೀವ್ರ ಕುಡಿಯುವ ನೀರಿನ ಸಂಕಷ್ಟ ಸಮಸ್ಯೆ ಬಗೆಹರಿಸುವಂತೆ ಅಧಿಕಾರಿಗಳಿಗೆ ಗ್ರಾಮಸ್ಥರ ಮನವಿ

ನಿವಾರಿಸುವಂತೆ ಆಗ್ರಹಿಸಿದರು.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಅಮರೇಶ ರಾಗೇರಿ, ಶಿವಾನಂದ ದೇವಿಕೇರಿ, ಅಮರಯ್ಯ, ಗುಂಡಪ್ಪ ದ್ಯಾಪೂರ, ದೇವಪ್ಪ ಮಜ್ಜಿಗೆ, ಸಿದ್ದಯ್ಯ, ಮಹಾಂತೇಶ, ಶಿವಕುಮಾರ, ಸ್ವಾಮಿ, ಪ್ರದೀಪ, ಶರಣಬಸವ, ಬಸವರಾಜ, ಅಮರೇಶ ಹಾಗೂ ರಮೇಶ್ ಉಪಸ್ಥಿತರಿದ್ದರು.

ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದಲ್ಲಿ ಪ್ರವೇಶ ಆರಂಭ ಉಚಿತ ಶಿಕ್ಷಣದೊಂದಿಗೆ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಸುವರ್ಣಾವಕಾಶ

ನಮ್ಮ ಉದ್ದೇಶ ಎಂದು ಡಾಣಣ ಎನ್. ವಾದಿರಾಜಾಚಾರ್ಯ ತಿಳಿಸಿದರು.

ಜೂನ್ 15ರಿಂದ ತರಗತಿಗಳು ಪುನರಾರಂಭವಾಗಲಿದ್ದು, ಆಸಕ್ತ ವಿದ್ಯಾರ್ಥಿಗಳು ಹಾಗೂ ಪೋಷಕರು ಶೀಘ್ರದಲ್ಲೇ ಪ್ರವೇಶ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಹೆಚ್ಚಿನ ಮಾಹಿತಿಗಾಗಿ ಡಾಣಣ ಎನ್. ವಾದಿರಾಜಾಚಾರ್ಯ (9492570190), ರಾಮಚಂದ್ರಾಚಾರ್ಯ ರಿತ್ತಿ (9900507154), ವಿ.ಎನ್.ಆರ್. ದ್ವಾರಕನಾಥಾಚಾರ್ಯ (7892697223) ಹಾಗೂ ಪವನಾಚಾರ್ಯ (7019717706) ಅವರನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ಮೇ 30ರೊಳಗೆ ರಾಜ್ಯ ಸಂಪುಟ ಪುನರ್ ರಚನೆ

ಸರಿಯಲ್ಲ, ಈ ಬೆಲೆ ಏರಿಕೆ ಇಷ್ಟಕ್ಕೆ ನಿಲ್ಲುವುದಿಲ್ಲ ಇನ್ನೂ ಹೆಚ್ಚಾಗುತ್ತೇ 115 ರೂಪಾಯಿ ದಾಟುತ್ತದೆ. ಇದಕ್ಕೆ ಪ್ರಧಾನಿಯವರ ಆರ್ಥಿಕ ನೀತಿಗಳೇ ಕಾರಣ. ಆದ್ದರಿಂದ ಸಿದ್ದರಾಮಯ್ಯ ಹೇಳಿದಹಾಗೆ ಪ್ರಧಾನಿ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು.

ದಿ. ಮನಮೋಹನ್ ಸಿಂಗ್ ಪ್ರಧಾನಿ ಆಗಿದ್ದಾಗ ಕಚ್ಚಾತೈಲದ ಬೆಲೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಅಂದ್ರೆ ಪ್ರತಿ ಬ್ಯಾರಲ್ ಗೆ 145 ಡಾಲರ್ ಇತ್ತು. ಆ ವೇಳೆ ನಮ್ಮ ದೇಶದಲ್ಲಿ ಪೆಟ್ರೋಲ್ ಬೆಲೆ 53 ರೂ. ಇತ್ತು, ಆದ್ರೆ ಇದೀಗ ಕಚ್ಚಾ ತೈಲದ ಬೆಲೆ 119 ಡಾಲರ್ ಇದೆ. ಇದಕ್ಕೆ ಕಾರಣ ಪ್ರಧಾನಿಯವರು ಟ್ರಂಪ್ ಗೆ ಹೆದರಿ ರಷ್ಯಾದಿಂದ ತೈಲ ಖರೀದಿ ಮಾಡದಿರುವುದು ಎಂದು ಹೇಳಿದರು.

ರೂಪಾಯಿ ಮೌಲ್ಯ ಕುಸಿದಿದೆ, ರಪ್ತು ಕಡಿಮೆ ಆಗುತ್ತಿದೆ ಆಮದು ಹೆಚ್ಚಾಗುತ್ತಿದೆ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ರೂಪಾಯಿ ಬೇಡಿಕೆ ಕುಸಿಯುತ್ತಿದೆ ಇದನ್ನೆಲ್ಲ ಸರಿ ಪಡಿಸಬೇಕೆಂದರೆ ಪ್ರಧಾನಿ ರಾಜೀನಾಮೆ ನೀಡಿ ಆರ್ಥಿಕ ತಜ್ಞ ರನ್ನು ಪ್ರಧಾನಿ ಮಾಡಬೇಕು ಎಂದು ಆಗ್ರಹಿಸಿದರು.

ಕಳಪೆ ಬಿತ್ತನೆ ಬೀಜ ವಿತರಿಸಿದರೆ ಕ್ರಮ- ಸಿದ್ರಾಮಯ್ಯ ಸ್ವಾಮಿ



ಬೀದರ,ಮೇ 16-

ಜಿಲ್ಲೆಯ ರೈತರಿಗೆ ವಿತರಿಸಲಾಗುವ ಬಿತ್ತನೆ ಬೀಜಗಳ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು. ಕೇವಲ ಉತ್ತಮ ಮೊಳಕೆ ಬರುವ ಗುಣಮಟ್ಟದ ಬೀಜಗಳನ್ನು ಮಾತ್ರ ವಿತರಿಸಬೇಕು ಎಂದು ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಸಿದ್ರಾಮಯ್ಯ ಸ್ವಾಮಿ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಅವರು ಗುರುವಾರ ಬೀದರ ಜಂಟಿ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಕರ್ನಾಟಕ ಪ್ರದೇಶ ಕೃಷಿ ಸಮಾಜ ಜಿಲ್ಲಾ ಘಟಕ ಬೀದರ ಜಿಲ್ಲೆಯ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರೈತ ಸಂಪರ್ಕ ಕೇಂದ್ರಗಳಿಗೆ ಬರುವ ಬಿತ್ತನೆ ಬೀಜಗಳನ್ನು ಮೊದಲಿಗೆ ಸ್ಯಾಂಪಲ್ ಡ್ರಾ ಮಾಡಿ ಪರೀಕ್ಷಿಸಬೇಕು. ಉತ್ತಮವಾಗಿ ಮೊಳಕೆ ಬರುವ ಬೀಜಗಳನ್ನು ಮಾತ್ರ ರೈತರಿಗೆ ನೀಡಬೇಕು. ಗುಣಮಟ್ಟವಿಲ್ಲದ ಅಥವಾ ಕಳಪೆ ಎಂದು ಕಂಡುಬರುವ ಬಿತ್ತನೆ ಬೀಜಗಳನ್ನು ತಕ್ಷಣವೇ ವಾಪಸ ಕಳುಹಿಸಬೇಕು. ಬೀಜ ವಿತರಣೆ ಸಮಯದಲ್ಲಿ ರೈತರಿಗೆ ಯಾವದೇ ರೀತಿಯ ತೊಂದರೆ ಅಥವಾ ಗೊಂದಲ ಉಂಟಾಗದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಿದರು.

ಬೀದರ ಜಂಟಿ ಕೃಷಿ ನಿರ್ದೇಶಕರು ಮಾತನಾಡಿ, ಜಿಲ್ಲೆಯಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ಸಂಗ್ರಹ ಪ್ರಕ್ರಿಯೆ ಶುರುವಾಗಿದೆ. ರೈತರು ಅವಸರ ಮಾಡಿ ಬಿತ್ತನೆ ಮಾಡಬಾರದು. ಕನಿಷ್ಠ 60 ರಿಂದ 70 ಮಿ.ಮೀ ಮಳೆಯಾಗಿ ಮಣ್ಣಿನಲ್ಲಿ ತೇವಾಂಶ ಹದವಾಗಿದ್ದಾಗ ಮಾತ್ರ ಬಿತ್ತನೆ ಮಾಡಬೇಕು. ಅಧಿಕೃತ ರೈತ ಸಂಪರ್ಕ ಕೇಂದ್ರಗಳಿಂದಲೇ ಬೀಜ ಮತ್ತು ರಸಗೊಬ್ಬರ ಖರೀದಿಸಿ ರಸೀದಿ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಸಾಕಷ್ಟು ರಸಗೊಬ್ಬರ ಲಭ್ಯವಿದೆ. ರೈತರು ಒಂದೇ ಬಾರಿ ದೊಡ್ಡ ಪ್ರಮಾಣದಲ್ಲಿ ಗೊಬ್ಬರ ಖರೀದಿಸಿ ಮನೆಯಲ್ಲಿ ಸಂಗ್ರಹಿಸಿಡುವ ಅಗತ್ಯವಿಲ್ಲ. ಎಫ್.ಐ.ಡಿ ಮಾಡಿದ ರೈತರು ಮಾತ್ರ ಯುರಿಯಾ ಗೊಬ್ಬರ ಖರೀದಿ ಮಾಡಬಹುದು. ರೈತರು ಮಾತ್ರ ಬಿತ್ತನೆಯ ಹಂತಕ್ಕೆ ಅನು ಗುಣವಾಗಿ ಗೊಬ್ಬರ ಪಡೆಯಬೇಕು. ಡಿ.ಎ.ಪಿ ಗೊಬ್ಬರದ ಬದಲಿಗೆ ಲಭ್ಯವಿರುವ ಕಾಂಪ್ಲೆಕ್ಸ್ ಗೊಬ್ಬರಗಳನ್ನು ಬಳಸುವಂತೆ ತಾಂತ್ರಿಕ ಸಲಹೆ ನೀಡಲಾಗುತ್ತಿದೆ ಎಂದು ಸಲಹೆ ನೀಡಿದರು.

ಸಭೆಯಲ್ಲಿ ಹಾಜರಿದ್ದ ತೋಟಗಾರಿಕೆ, ಮೀನುಗಾರಿಕೆ, ರೇಷ್ಮೆ, ಪಶು ಸಂಗೋಪನಾ ಇಲಾಖೆಯ ಅಧಿಕಾರಿಗಳು ರೈತರಿಗಾಗಿ ಇರುವ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಮೇ.31 ರಿಂದ ಜೂನ್ 2 ರ ನಡುವೆ ಮಳೆಯಾಗುವ ಸಾಧ್ಯತೆಯಿದ್ದು, ಜೂನ್.8 ರ ಸುಮಾರಿಗೆ ಜಿಲ್ಲೆಗೆ ಮುಂಗಾರು ಪ್ರವೇಶಿಸುವ ನಿರೀಕ್ಷೆಯಿದೆ ಎಂದು ಕೃಷಿ ಸಂಶೋಧನ ಕೇಂದ್ರದ ಅಧಿಕಾರಿ ತಿಳಿಸಿದರು.

ಈ ಸಂದರ್ಭದಲ್ಲಿ ಗೋವಿಂದ ರೆಡ್ಡಿ ವಿಠಲರೆಡ್ಡಿ, ಸಂಗಮೇಶ ಬಸವರಾಜ ವಾಲೆ, ವಿಶ್ವನಾಥ ಮಾಣಿಕರಾವ ಮಾಲಿ ಪಾಟೀಲ್, ಬಾಬುರೆಡ್ಡಿ ವಿಠಲರೆಡ್ಡಿ, ಸಂತೋಷ ರಾಜಕುಮಾರ ಹಜಾರಿ, ವಿಠಲಸಿಂಗ ದೌಲತ ಸಿಂಗ್, ರಮೇಶ ವೆಂಕಟರಾವ ಪಾಟೀಲ್, ಗೀರಿಶ ಮಾಧವರಾವ ಪಾಟೀಲ್, ಪ್ರಭುರಾವ ಭೀಮರಾವ, ಬಸವರಾಜ ವಿಶ್ವನಾಥ ಪಾಟೀಲ್ ಸೇರಿದಂತೆ ಕೃಷಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು. ಶಿವಕುಮಾರ ಸಕ್ಕನಿ (ಕೇಂದ್ರ ಸ್ಥಾನ) ಜಂಟಿ ಕೃಷಿ ನಿರ್ದೇಶಕರ ಕಚೇರಿ, ಬೀದರ ಅವರು ಸಭೆಯಲ್ಲಿದ್ದ ಜಿಲ್ಲಾ ಕೃಷಿ ಸಮಾಜ ಬೀದರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೋಳಿಸಿದರು.

ಯುವನಿಧಿ ಯೋಜನೆಗೆ ನೋಂದಣಿ ಆರಂಭ

ಬೀದರ, ಮೇ.15 ಕರ್ನಾನಟಕ ಸರ್ಕಾರದ ಪಂಚಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆಯಡಿ ನಿರುದ್ಯೋಗ ಭತ್ಯೆ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ನೋಂದಣಿ ಆಹ್ವಾನಿಸಲಾಗಿದೆ.

ಪದವಿ ಪಾಸಾದ ಅಭ್ಯರ್ಥಿಗಳಿಗೆ 3000 ರೂ. ಡಿಪ್ಲೋಮಾ ಮುಗಿಸಿದ ಅಭ್ಯರ್ಥಿಗಳಿಗೆ 1500 ರೂ. ಭತ್ಯೆ ನೀಡಲಾಗುತ್ತದೆ. ಪದವಿ ಮತ್ತು ಡಿಪ್ಲೋಮಾ ಮುಗಿಸಿ ಉದ್ಯೋಗ ವಿಲ್ಲದೆ ಇರುವ ಯುವಕ/ಯುವತಿಯರಿಗೆ ಆರ್ಥಿಕ ನೆರವು ನೀಡುವ ಉದ್ದೇಶದಿಂದ ಈ ಯೋಜನೆ ಯನ್ನು ಜಾರಿಗೆ ತರಲಾಗಿದೆ. ಅಭ್ಯರ್ಥಿಗಳು ಕನಿಷ್ಠ 6 ವರ್ಷ ಗಳ ವರಗೆ ಕರ್ನಾಟಕದಲ್ಲಿ ವಾಸವಾ ಗಿರಬೇಕು. ಪದವಿ/ ಡಿಪ್ಲೋ ಮಾ ಮುಗಿಸಿ ಕನಿಷ್ಠ 180 ದಿನಗಳ ನಂತರ ವೂ ಉದ್ಯೋಗ ದೊರಕದೆ, ಉನ್ನತ ವ್ಯಾಸಂಗಕ್ಕೆ ದಾಖಲಾಗದೆ ಇರುವ ಅಭ್ಯರ್ಥಿಗಳು ಈ ಯೋಜನೆಗೆ ಅರ್ಹರಾಗಿರುತ್ತಾರೆ. ಸ್ವಯಂ ಉದ್ಯೋಗ ಹೊಂದಿಲ್ಲದ ಅಭ್ಯ ರ್ಥಿಗಳು, ಉನ್ನತ ವಿದ್ಯಾ ಭ್ಯಾಸ ಮುಂದುವರಿಸದೇ ಇರುವ ಅಭ್ಯರ್ಥಿಗಳು, 2023-24ರಿಂದ ಪಾಸಾದ ಅಭ್ಯರ್ಥಿ ಗಳು ಯುವ ನಿಧಿ ಯೋಜನೆಯಲ್ಲಿ ನೋಂದಣಿ ಮಾಡಿಕೊಂಡು ಇದರ ಉಪಯೋಗ ಪಡೆದುಕೊಳ್ಳಬೇಕು. ಅಭ್ಯರ್ಥಿ ಗಳು ನೋಂದಣಿಯನ್ನು ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಬಾಪೂಜಿ ಕೇಂದ್ರಗಳಲ್ಲಿ ಸಲ್ಲಿಸಬ ಹುದಾಗಿದೆ ಎಂದು ಬೀದರ ಜಿಲ್ಲಾ ಉದ್ಯೋಗಾಧಿಕಾರಿಗಳು ತಿಳಿಸಿದ್ದಾರೆ.

ಮೌಲ್ಯಾಧಾರಿತ ಚಿಂತನಗಳು ಬಾಳಿನ ಆಶಾ ಕಿರಣ



ಶಿವಮೊಗ್ಗ,ಮೇ 16-

ಪ್ರಗತಿಪರವಾದ ಧ್ಯೇಯೋದ್ದೇಶಗಳು ಮಾನವನ ಶ್ರೇಯಸ್ಸಿಗೆ ಮೂಲ. ಸತ್ಯಾನ್ವೇಷಣೆಯ ದಾರಿಯಲ್ಲಿ ನಡೆದಾಗ ಜೀವನ ಮೌಲ್ಯ ಸಮೃದ್ಧಿಗೊಳ್ಳಲು ಸಾಧ್ಯ. ಪೂರ್ವಜರ ಮೌಲ್ಯಾಧಾರಿತ ಚಿಂತನಗಳು ಬಾಳಿನ ವಿಕಾಸಕ್ಕೆ ಆಶಾ ಕಿರಣ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ಶ್ರೀ ಜಗದ್ಗುರು ಪಂಚಾಚಾರ್ಯ ಕೈಗಾರಿಕಾ ತರಬೇತಿ ಕೇಂದ್ರದ ಆವರಣದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಹಾಗೂ ಎಸ್.ಜೆ.ಪಿ. ಐಟಿಐ 32ನೇ ವಾರ್ಷಿಕೋತ್ಸವದ ಅಂಗವಾಗಿ ಜರುಗಿದ ಜನ ಜಾಗೃತಿ ಧರ್ಮ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಕೆಡಕುಗಳನ್ನು ಮೆಟ್ಟಿ ನಿಂತು ಒಳಿತಿನತ್ತ ಹೆಜ್ಜೆ ಹಾಕುವುದೇ ಮಾನವನ ಗುರಿಯಾಗಬೇಕು. ಕಾಯಿಸಿದ ಚಿನ್ನ ಒಡವೆಯಾಗುತ್ತದೆ. ಬಡಿದ ತಾಮ್ರ ತಂತಿಯಾಗುತ್ತದೆ. ಕೆತ್ತಿದ ಕಲ್ಲು ಸುಂದರ ಮೂರ್ತಿಯಾಗುತ್ತದೆ. ಅದರಂತೆ ಸಂಸ್ಕಾರ ಸಚ್ಚಾರಿತ್ರ್ಯದಿಂದ ಬದುಕು ಉಜ್ವಲಗೊಳ್ಳುತ್ತದೆ. ಮನುಷ್ಯನಲ್ಲಿ ಬುದ್ಧಿ ಮತ್ತು ಸದ್ವಿಚಾರಗಳು ಬೆಳೆದು ಬಂದಾಗ ಜೀವನದಲ್ಲಿ ಶ್ರೇಯಸ್ಸು ಪಡೆಯಲು ಸಾಧ್ಯವಾಗುತ್ತದೆ. ಜ್ಞಾನದ ಕಣ್ಣು ಶ್ರೀ ಗುರು. ಸೂರ್ಯ ಕಿರಣದಿಂದ ಹೂವು ಅರಳಿದರೆ ಗುರು ಕಾರುಣ್ಯದಿಂದ ಆತ್ಮ ಅರಳುತ್ತದೆ. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಸಕಲರಿಗೂ ಒಳಿತಾದ ಸಾಧನೆಗೆ ನಿಲುಕುವ ಶಿವಾದ್ವೈತ ಸಿದ್ಧಾಂತಗಳನ್ನು ಬೋಧಿಸಿ ಉದ್ಧರಿಸಿದ್ದನ್ನು ಕಾಣಬಹುದು. ಬುದ್ಧಿ ಶಕ್ತಿ ಬೆಳೆದಂತೆ ಮನೋಭಾವನೆಗಳು ಬೆಳೆಯುತ್ತಿಲ್ಲವಾದ್ದರಿಂದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಸ್ವಧರ್ಮ ನಿಷ್ಠೆ ಪರಧರ್ಮ ಸಹಿಷ್ಣುತೆ ಬೆಳೆದಾಗ ಆರೋಗ್ಯಪೂರ್ಣ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ವಿಘ್ನೇಶ್ವರಯ್ಯ ಸೋಲಾಪುರ ಬಡತನದಲ್ಲಿ ಬೆಳೆದು ಬಂದು ಬಹಳ ಶ್ರಮವಹಿಸಿ ಶ್ರೀ ಜಗದ್ಗುರು ಪಂಚಾಚಾರ್ಯ ನಾಮಾಂಕಿತದಲ್ಲಿ ಕೈಗಾರಿಕಾ ತರಬೇತಿ ಕೇಂದ್ರ ಹುಟ್ಟು ಹಾಕಿರುವುದು ಅವರಲ್ಲಿರುವ ಸ್ವಾಭಿಮಾನ ಧರ್ಮ ಶ್ರದ್ಧೆಗೆ ಸಾಕ್ಷಿಯಾಗಿದೆ. ಸಂಸ್ಥೆಯಲ್ಲಿ ಓದಿದ ನೂರಾರು ಜನರ ಬಾಳಿಗೆ ಬೆಳಕಾಗಿರುವುದು ಸಂತೋಷದ ಸಂಗತಿ ಎಂದು ಹರುಷ ವ್ಯಕ್ತಪಡಿಸಿದರು.

ಜ್ಯೋತಿ ಬೆಳಗಿಸಿ ಸಮಾರಂಭ ಉದ್ಘಾಟಿಸಿದ ಮಳಲಿ ಸಂಸ್ಥಾನ ಮಠದ ಡಾ. ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಮನುಷ್ಯ ತಿಳಿದಿರುವುದಕ್ಕಿಂತ ತಿಳಿಯಬೇಕಾದದ್ದು ಬಹಳಷ್ಟಿದೆ. ಜೀವನದ ಜಂಜಡದಲ್ಲಿ ಸಿಲುಕಿರುವ ಜೀವಾತ್ಮರಿಗೆ ಗುರು ಜ್ಞಾನ ಬೋಧಾಮೃತ ಮತ್ತು ಕ್ರಿಯಾಶೀಲ ಜೀವನ ಅಭಿವೃದ್ಧಿಯತ್ತ ಸಾಗಲು ಸಾಧ್ಯವಾಗುತ್ತದೆ. ತರಬೇತಿ ಕೇಂದ್ರದ ವಾರ್ಷಿಕೋತ್ಸವ ಜೊತೆಗೆ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಹಮ್ಮಿಕೊಂಡಿರುವುದು ಅವರಲ್ಲಿರುವ ಧಾರ್ಮಿಕ ಪ್ರಜ್ಞೆಗೆ ಸಾಕ್ಷಿಯಾಗಿದೆ ಎಂದು ಸಂತೋಷ ವ್ಯಕ್ತಪಡಿಸಿದರು.

ಮಾಚೇನಹಳ್ಳಿಯ ಟೆಕ್ನೋರಿಂಗ್ಸ್ ಮತ್ತು ಶಶಿ ಭಾರತ ಇಂಡಸ್ಟ್ರಿ ಎಮ್.ಡಿ. ಬಿ.ಎಸ್.ಸಂಗೀತಾ ಕಲಿಯುವ ವಿದ್ಯಾರ್ಥಿಗಳಲ್ಲಿ ಕಲಿಯುವ ಛಲ ಬೇಕು ಜೊತೆಗೆ ಕೌಶಲ್ಯ ಬೇಕು. ವಿಕಸಿತ ಭಾರತದಲ್ಲಿ ಸಾಕಷ್ಟು ಅವಕಾಶಗಳಿದ್ದು ಅವುಗಳ ಸದುಪಯೋಗಪಡೆಯಬೇಕು. ಕನಸುಗಳು ದೊಡ್ಡದಾಗಿರಬೇಕು. ಅಂದಾಗ ಅವರ ಭವಿಷ್ಯತ್ತು ಉಜ್ವಲವಾಗಲಿದೆ ಎಂದರು. ಸೋಮಶೇಖರ ಜಿ., ರಾಕೇಶ ಆರಾಧ್ಯ, ಹೆಚ್.ಪಿ.ರವೀಶ್ ವಿಶೇಷ ಆಹ್ವಾನಿತರಾಗಿ ಪಾಲ್ಗೊಂಡು ಮಾತನಾಡಿದರು. ರುಕ್ಷಿಣಿ ವೇದವ್ಯಾಸ, ಡಾ.ರುದ್ರಾಂಬಿಕಾ ಎಸ್. ಬಿರಾದಾರ, ಬಿ.ಟಿ. ಶೇಖರಪ್ಪ, ಮೋಹನಕುಮಾರ, ಲಿಂಗಸುಗೂರಿನ ಸರ್ವೇಶ್ವರಿ ಅವರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆಯಿತ್ತು ಶುಭ ಹಾರೈಸಿದರು.

ಸಮಾರಂಭದ ಸಮ್ಮುಖ ವಹಿಸಿದ ಚನ್ನಗಿರಿ ಹಿರೇಮಠದ ಕೇದಾರ ಶಿವಶಾಂತವೀರ ಶಿವಾಚಾರ್ಯ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಸ್ವಾಮಿಗಳು ಹಾರನಹಳ್ಳಿ ವಿಘ್ನೇಶ್ವರಯ್ಯನವರ ಜೀವನದ ಸಿದ್ಧಿ ಸಾಧನೆ ಹಾಗೂ ಧರ್ಮ ಪೀಠಗಳ ಮೇಲೆ ಇಟ್ಟಿರುವ ಶ್ರದ್ಧಾ ಅಭಿಮಾನ ಕಂಡು ಸಂತಸ ವ್ಯಕ್ತಪಡಿಸಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ 5 ಪ್ರತಿಭಾನ್ವಿತರಿಗೆ ಹಾಗೂ ಉನ್ನತ ಶ್ರೇಣಿಯಲ್ಲಿ ಅಂಕ ಪಡೆದ ಎಸ್‌ಜೆಪಿ ಐಟಿಐ ಸಿಬ್ಬಂದಿಯವರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಉಚಿತ ಆರೋಗ್ಯ ತಪಾಸಣೆ-ನೇತ್ರ ತಪಾಸಣೆ ಮತ್ತು ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ವಿಘ್ನೇಶ್ವರಯ್ಯ ಸೋಲಾಪುರ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ ಈ ಸಂಸ್ಥೆಯ ಮೇಲೆ ಶ್ರೀ ರಂಭಾಪುರಿ ಜಗದ್ಗುರುಗಳವರ ಸಂಪೂರ್ಣ ಆಶೀರ್ವಾದವಿದೆ. ಸಂಸ್ಥೆಯ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸುವ ಯೋಜನೆ ಹೊಂದಿರುವುದಾಗಿ ತಿಳಿಸಿದರು. ಬಾಳೆಹೊನ್ನೂರು ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ ಸಾಧಕರಿಂದ ವೇದ ಘೋಷ, ಜಂಗಮ ಮಹಿಳಾ ಸಮಾಜದಿಂದ ಪ್ರಾರ್ಥನೆ ಜರುಗಿತು. ಪ್ರಾಚಾರ್ಯ ಡಿ.ಎನ್. ಪರಮೇಶ್ವರಪ್ಪ ಸ್ವಾಗತಿಸಿದರು. ಶಾಂತಾ ಆನಂದ ನಿರೂಪಿಸಿದರು.

ಸಮಾರಂಭಕ್ಕೂ ಮುನ್ನ ಶ್ರೀ ರಂಭಾಪುರಿ ಜಗದ್ಗುರುಗಳವರನ್ನು ಎಂ.ಆರ್.ಎಸ್.ಸರ್ಕಲ್ಲಿನಿಂದ ಎಸ್.ಜೆ.ಪಿ.ಐಟಿಐ ವರೆಗೆ ವಿವಿಧ ವಾದ್ಯ ವೈಭವಗಳೊಂದಿಗೆ ವೇದ ಘೋಷ, ಕಳಶ, ಪೂರ್ಣಕುಂಭ ದೊಂದಿಗೆ ಬರಮಾಡಿಕೊಳ್ಳಲಾಯಿತು. ಸಮಾರಂಭದ ನಂತರ ಪ್ರಸಾದ ವಿತರಣೆ ಜರುಗಿತು. ಧರ್ಮ ಸಭೆಯ ನಂತರ ವೀರಶೈವ ಲಿಂಗಾಯತ ವಧು-ವರರ ಸಮಾವೇಶ ಜರುಗಿತು.

ತುಂಗಭದ್ರಾ ಅಣೆಕಟ್ಟೆ: ಚೈನ್ ಅಳವಡಿಕೆ ಆರಂಭ

ಹೊಸಪೇಟೆ ,ಮೇ 16-

ತುಂಗಭದ್ರಾ ಅಣೆಕಟ್ಟೆಯ ಹೊಸ ಕ್ರೆಸ್ಟ್‌ಗೇಟ್‌ಗಳಿಗೆ ಹೊಸ ಚೈನ್‌ಲಿಂಕ್ ಅಳವಡಿಸುವ ಕಾರ್ಯ 33ನೇ ಕ್ರೆಸ್ಟ್‌ಗೇಟ್‌ನಿಂದ ಆರಂಭಿಸಲಾಯಿತು.

ಒಂದು ಕ್ರೆಸ್ಟ್‌ಗೇಟ್‌ಗೆ ಎರಡು ಚೈನ್‌ಗಳು ಬೇಕಿದ್ದು, ಚೆನ್ನೈಯಿಂದ ಬುಧವಾರ ಸಂಜೆ ಒಂದು ಸೆಟ್ ಚೈನ್ ಬಂದಿತ್ತು 'ಈ ತಿಂಗಳಲ್ಲಿ ಎಲ್ಲಾ 33 ಸೆಟ್ ಚೈನ್‌ಗಳ (ಒಟ್ಟು 66) ಅಳವಡಿಕೆ ಪೂರ್ಣಗೊಳ್ಳಲಿದೆ. ಕಳೆದ ವರ್ಷ ಡಿ.24ರಿಂದ ಕ್ರೆಸ್ಟ್‌ಗೇಟ್ ಅಳವಡಿಕೆ ಆರಂಭವಾಗಿ, ಈ ವರ್ಷ ಏ.25ರಂದು ಪೂರ್ಣಗೊಂಡಿತ್ತು. ಈಗ ಎಲ್ಲವೂ ಅಂತಿಮ ಹಂತಕ್ಕೆ ಬಂದಿದೆ' ಎಂದು ತುಂಗಭದ್ರಾ ಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.

18 ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ-2



ಬಾಗಲಕೋಟೆ,ಮೇ 16-

ಜಿಲ್ಲೆಯಲ್ಲಿ ಮೇ 18 ರಿಂದ 25 ವರೆಗೆ ನಡೆಯಲಿರುವ ಎಸ್.ಎಸ್.ಎಲ್.ಸಿ ಪರೀಕ್ಷೆ-2ರಲ್ಲಿ ಒಟ್ಟು 3233 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆಂದು ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿಂದು ಎಸ್.ಎಸ್.ಎಲ್.ಸಿ ಪರೀಕ್ಷೆ-2 ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪ್ರತಿ ತಾಲೂಕಿಗೆ ಒಂದರಂತೆ ಒಟ್ಟು 7 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪರೀಕ್ಷಾ ಕೇಂದ್ರಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಭೇಟಿ ನೀಡಿ ಮೂಲಭೂತ ಸೌಲಭ್ಯಗಳ ಬಗ್ಗೆ ಪರಿಶೀಲನೆ ನಡೆಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ನಡೆಯುವ ಪರೀಕ್ಷಾ ಕಾರ್ಯವನ್ನು ವೀಕ್ಷಿಸಲು ಜಿಲ್ಲಾ ಕೇಂದ್ರದಲ್ಲಿ ವೆಬ್‌ಕಾಸ್ಟಿಂಗ್ ಸೌಲಭ್ಯ ಮಾಡಲಾಗಿದೆ ಎಂದು ತಿಳಿಸಿದರು.

ಪರೀಕ್ಷಾ ಕಾರ್ಯಕ್ಕೆ 7 ಜನ ಮುಖ್ಯ ಅಧೀಕ್ಷಕರು 7 ಜನ ಅಭಿರಕ್ಷಕರು, 6 ಜನ ಪರೀಕ್ಷಾ ವೀಕ್ಷಕರು, 8 ಜನ ವೆಬ್‌ಕಾಸ್ಟಿಂಗ್ ಸಿಬ್ಬಂದಿ, 7 ಜನ ಮೊಬೈಲ್ ಸ್ವಾಧೀನಾಧಿಕಾರಿಗಳು, 7 ಜನ ಸ್ಥಾನಿಕ ಜಾಗೃತ ದಳದವರು, 6 ಮಾರ್ಗಾಧಿಕಾರಿಗಳು ಹಾಗೂ 135 ಕೊಠಡಿ ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ. ಒಟ್ಟು 3233 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದು, ಬಾದಾಮಿ ತಾಲೂಕಿನಲ್ಲಿ 357, ಬಾಗಲಕೋಟೆಯಲ್ಲಿ 510, ಬೀಳಗಿ 606, ಹುನಗುಂದ 325, ಜಮಖಂಡಿ 801 ಹಾಗೂ ಮುಧೋಳ 634 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಬಾದಾಮಿ ವೀರಪುಲಕೇಶಿ ಹೈಯರ್ ಸೆಕೆಂಡರಿ ಸ್ಕೂಲ, ನವನಗರದ ಆದರ್ಶ ವಿದ್ಯಾಲಯ ಆರ್.ಎಂ.ಎಸ್, ಬೀಳಗಿ ಆದರ್ಶ ವಿದ್ಯಾಲಯ, ಹುನಗುಂದ ವಿಜಯ ಮಹಾಂತೇಶ ಬಾಲಕರ ಪ್ರೌಢಶಾಲೆ, ಜಮಖಂಡಿ ಸರಕಾರಿ ಪ.ಭಾ.ಸಂ. ಪ.ಪೂ ಕಾಲೇಜ (ಪ್ರೌಢಶಾಲಾ ವಿಭಾಗ), ಬನಹಟ್ಟಿ ಸರಕಾರಿ ಪದವಿ ಪೂರ್ವ ಕಾಲೇಜ ಹಾಗೂ ಮುಧೋ ಳ ಆರ್.ಎಂ.ಜಿ ಪ್ರೌಢಶಾಲೆಯಲ್ಲಿ ಪರೀಕ್ಷಾ ಕೇಂದ್ರಗಳನ್ನು ತೆರೆಯ ಲಾಗಿದೆ. ಅಲ್ಲದೇ ಪರೀಕ್ಷಾ ಕೇಂದ್ರ ಗಳ ಸುತ್ತ ಮುತ್ತ 200 ಮೀಟರ ಪ್ರದೇಶವನ್ನು ನಿಷೇಧಿಸಿ ಜಿಲ್ಲಾ ಧಿಕಾರಿಗಳು ಆದೇಶ ಹೊರಡಿಸಿ ದ್ದಾರೆ ಎಂದು ತಿಳಿಸಿದರು.

ಸಭೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಜಿ.ಮನ್ನಿಕೇರಿ ಸೇರಿದಂತೆ ಆಯಾ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕೇಂದ್ರ ಸರ್ಕಾರದಿಂದ ಅಡುಗೆ ಅನಿಲ, ಡೀಸೆಲ್, ಪೆಟ್ರೋಲ್ ದರ ಏರಿಕೆ ಖಂಡನಿಯ



ಯಾದಗಿರಿ,ಮೇ.16-

ಕೇಂದ್ರ ಸರ್ಕಾರ ಅಡುಗೆ ಅನಿಲ ದರ ಬಂಗಾರ ಖರೀದಿಯ ಸುಂಕದ ತೆರಿಗೆ ಹಾಗೂ ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚಳ ಮಾಡಿರುವ ಕೇಂದ್ರ ಸರ್ಕಾರದ ಕ್ರಮವನ್ನು ಕರ್ನಾಟಕ ರಾಜ್ಯ ರೈತೂದಯ ಹಸಿರು ಸೇನೆ ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ರುದ್ರಾಂಬಿಕ.ಆರ್.ಪಾಟೀಲ್ ಚಟ್ನಳ್ಳಿ ತೀವ್ರವಾಗಿ ಖಂಡಿಸಿದ್ದಾರೆ.ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಜನಸಾಮಾನ್ಯರು ಬಳಕೆ ಮಾಡುವ ಪ್ರತಿಯೊಂದು ವಸ್ತುಗಳ ಬೆಲೆ ಏರಿಕೆ ಮಾಡುವ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬಡವರ ಜೇಬಿಗೆ ಕತ್ತರಿಯಾಕಿ ಹಗಲುದರೋಡೆಗೆ ನಿಂತಿವೆ ಎಂದು ಅವರು ಆರೋಪಿಸಿದ್ದಾರೆ.ಅಡುಗೆ ಅನಿಲ ದರ ಹಾಗೂ ಅಕ್ಕಿ ಬೇಳೆ ಇನ್ನಿತರ ದಿನಸಿ ವಸ್ತುಗಳು ಬೆಲೆ ಏಕಾಏಕಿ ಹೆಚ್ಚಿಸಿರುವುದು ಇದು ಮಹಿಳೆಯರಿಗೆ ತುಂಬಾ ಹೊರೆಯಾಗುತ್ತದೆ ಒಂದೆಡೆ ದೇಶದ ಪ್ರಧಾನ ಮಂತ್ರಿಗಳು ಉಚಿತವಾಗಿ ಸಿಲಿಂಡರ್ ನೀಡಿದಂತೆ ಮಾಡಿ ಮತ್ತೊಂದೆಡೆ ಜನರಿಂದ ಹಣ ವಸೂಲಿಗೆ ಮುಂದಾಗಿರುವುದು ಸರಿಯಲ್ಲ ಬಂಗಾರ ಖರೀದಿಸಬೇಡಿ ಪೆಟ್ರೋಲ್ ಡೀಸೆಲ್ ಹೆಚ್ಚು ಬಳಸಬೇಡಿ ಹೊರದೇಶಗಳಿಗೆ ಪ್ರವಾಸ ಹೊಗಬೇಡಿ ಎಂಬ ಹೇಳಿಕೆಗಳು ಬಾಲಿಶತನದಿಂದ ಕೂಡಿವೆ ಡೀಸೆಲ್ ಪೆಟ್ರೋಲ್ ದರಗಳ ಏರಿಕೆಯಿಂದ ಎಲ್ಲಾ ವಸ್ತುಗಳ ಬೆಲೆ ಗಗನಕ್ಕೆ ಏರಿವೆ ಮಧ್ಯಮ ವರ್ಗದ ಜನ ಕೇಂದ್ರ ಸರ್ಕಾರದ ವಿರುದ್ಧ ಹಿಡಿ ಶಾಪ ಹಾಕುತ್ತಿದ್ದಾರೆ.ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಮತ್ತೊಮ್ಮೆ ದರಗಳನ್ನು ಪರಿಶೀಲಿಸಿ ದಿನಬಳಕೆಯ ವಸ್ತುಗಳು ಮತ್ತು ಪೆಟ್ರೋಲ್ ಡೀಸೆಲ್ ಬೆಲೆ ಹಾಗೂ ಅಡುಗೆ ಅನಿಲ ದರವನ್ನು ಇಳಿಕೆ ಮಾಡುವಂತೆ ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ಮಹಿಳಾ ಘಟಕದ ಯಾದಗಿರಿ ಜಿಲ್ಲಾಧ್ಯಕ್ಷೆ ರುದ್ರಾಂಬಿಕ.ಆರ್.ಪಾಟೀಲ್ ಚಟ್ನಳ್ಳಿ ಒತ್ತಾಯಿಸಿದ್ದಾರೆ

ನಿಮ್ಮೂರು ಸುದ್ದಿ

ಸಂಪಾದಕೀಯ

ಮೋದಿ ಸರ್ಕಾರದ ಎಡಬಿಡಂಗಿ ನೀತಿಗಳಿಗೆ ದಂಡ ತೆರುತ್ತಿರುವ ಭಾರತೀಯರು



ಮೋದಿ ಮತ್ತು ಅವರ ಸರ್ಕಾರವು ಪ್ರಸ್ತುತ ಇಂಧನ ಮತ್ತು ಆರ್ಥಿಕ ಬಿಕ್ಕಟ್ಟಿಗೆ ದೂರದ ಗುಮ್ಮನನ್ನು ತೋರಿಸಿ, ಸಮಸ್ಯೆಗಳಿಗೆ ಬೆನ್ನು ಹಾಕಿ ಪರಾರಿಯಾಗುವ ಪ್ರವೃತ್ತಿಯನ್ನು ಬಿಡಬೇಕು. ಜನರಿಗೆ ಮಿತವ್ಯಯದ ಪಾಠ ಹೇಳುವ ಮುನ್ನ ಸರ್ಕಾರಿ ವೆಚ್ಚಗಳು ಮತ್ತು ಅದ್ದೂರಿ ರಾಜಕೀಯ ಪ್ರಚಾರಗಳನ್ನು ತಗ್ಗಿಸಿ, ಜನರೊಂದಿಗೆ ನಿಲ್ಲುವಂತಾಗಬೇಕು.

ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಉದ್ವಿಗ್ನತೆಯಿಂದಾಗಿ ಭಾರತವು ತೈಲ ಬಿಕ್ಕಟ್ಟು ಮತ್ತು ಆರ್ಥಿಕ ಪರಿಣಾಮಗಳನ್ನು ಎದುರಿಸುತ್ತಿದೆ. ಇದೇ ಸಮಯದಲ್ಲಿ, ಪ್ರಧಾನಿ ಮೋದಿ ಅವರು ದೇಶದ ನಾಗರಿಕರು ಆರ್ಥಿಕ ಶಿಸ್ತು ಅನುಸರಿಸಬೇಕು, ಅಡುಗೆ ಎಣ್ಣೆ, ಎಲ್‌ಪಿಜಿ ಹಾಗೂ ಇಂಧನವನ್ನು ಮಿತವಾಗಿ ಬಳಸಬೇಕು ಎಂದು ಕರೆ ಕೊಟ್ಟಿದ್ದಾರೆ. ಚಿನ್ನ, ವಿದೇಶಿ ಪ್ರವಾಸ ಹಾಗೂ ರಸಗೊಬ್ಬರಗಳ ಮೇಲಿನ ವೆಚ್ಚವನ್ನು ಕಡಿತಗೊಳಿಸುವಂತೆಯೂ, ಉದ್ಯೋಗಿಗಳು ಸಾಧ್ಯವಾದಷ್ಟು ಮನೆಯಿಂದಲೇ ಕೆಲಸ (ವರ್ಕ್ ಫ್ರಮ್ ಹೋಮ್) ಮಾಡಬೇಕೆಂದೂ ಮನವಿ ಮಾಡಿಕೊಂಡಿದ್ದಾರೆ.

ಆದರೆ, ವಿಶ್ವಗುರು ಮೋದಿ ಅವರ ಮಿತವ್ಯಯದ ಮನವಿ ದೇಶದಲ್ಲಿನ ಬೃಹತ್ ಆರ್ಥಿಕ ವೈಫಲ್ಯದ ಒತ್ತಡವನ್ನು ಜನರ ಮೇಲೆ ಹೇರುವ ಪ್ರಯತ್ನವಾಗಿ ಕಾಣುತ್ತಿದೆ. ಅವರು ಜನರ ದೈನಂದಿನ ಚಟುವಟಿಕೆಗಳು ಮತ್ತು ನಡವಳಿಕೆಗಳನ್ನು ನಿಯಂತ್ರಿಸಿ, ತಮ್ಮ ವೈಫಲ್ಯವನ್ನು ಮುಚ್ಚಿಟ್ಟುಕೊಳ್ಳಲು ಬಯಸಿದಂತೆ ತೋರುತ್ತಿದೆ.

ಆದರೆ, ಈ ಪರಿಸ್ಥಿತಿಗೆ ನಿಜಕ್ಕೂ ಹೊಣೆ ಯಾರು? ಅಮೆರಿಕವೇ? ಇಸ್ರೇಲೇ? ಅಥವಾ ಈ ಎರಡೂ ದೇಶಗಳ ದಾಳಿಗಳನ್ನು ದಿಟ್ಟತನದಿಂದ ಎದುರಿಸುತ್ತಿರುವ ಇರಾನೇ? ಈ ಮೂರು ರಾಷ್ಟ್ರಗಳ ಯುದ್ಧದ ಪ್ರಭಾವವು ದೇಶದ ಆರ್ಥಿಕತೆಯ ಮೇಲೆ ಪರಿಣಾಮ ಬೀರಿರುವುದನ್ನು ಅಲ್ಲಗಳೆಯಲಾಗದು. ಆದರೆ, ಅದಷ್ಟೇ ಕಾರಣವಲ್ಲ. ಅದಕ್ಕಿಂತಲೂ ಮುಖ್ಯವಾಗಿ ಮೋದಿ ಸರ್ಕಾರದ ನೀತಿ-ನಿಲುವು-ಧೋರಣೆಗಳು.

ಬಿಜೆಪಿ ಸರ್ಕಾರದ ತಪ್ಪು ಆರ್ಥಿಕ ಮತ್ತು ಕಳಪೆ ವಿದೇಶಾಂಗ ನೀತಿಗಳ ನಿರ್ವಹಣೆಯಿಂದ ದೇಶದಲ್ಲಿ ಇಂಧನ ಮತ್ತು ಹಣಕಾಸಿನ ಬಿಕ್ಕಟ್ಟು ಸೃಷ್ಟಿಯಾಗಿದೆ. ಇದೊಂದು ರಚನಾತ್ಮಕ ದೌರ್ಬಲ್ಯ. ಈ ವೈಫಲ್ಯವನ್ನು ಸರಿಯಾದ ನೀತಿಗಳು ಮತ್ತು ಪರಿಹಾರ ಕ್ರಮಗಳನ್ನು ಅನುಸರಿಸುವ ಮೂಲಕ ಸರಿಪಡಿಸಬೇಕಿತ್ತು. ಆದರೆ, ಮೋದಿ ಸರ್ಕಾರದ ಧೋರಣೆಯು ತದ್ವಿರುದ್ಧವಾಗಿದೆ. ಪ್ರಧಾನಿಯವರು ದೇಶದ ಸ್ಥಿರತೆಯ ಜವಾಬ್ದಾರಿಯ ಸಂಪೂರ್ಣ ಹೊರೆಯನ್ನು ಭಾರತೀಯರ ಹೆಗಲಿಗೆ ವರ್ಗಾಯಿಸುತ್ತಿದ್ದಾರೆ.

ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಆರಂಭದಲ್ಲಿ, ಮೋದಿ ಸರ್ಕಾರವು ಭಾರತದ ಕಚ್ಚಾ ತೈಲ ಆಮದಿನಲ್ಲಿ 70% ಭಾಗವು ಹಾರ್ಮುಜ್ ಜಲಸಂಧಿಯನ್ನು ಅವಲಂಬಿಸಿಲ್ಲ. ಈ ಬೃಹತ್ ಪ್ರಮಾಣದ ತೈಲ ಇತರ ಮಾರ್ಗಗಳಿಂದ ಬರುತ್ತಿದೆ ಎಂದು ಹೇಳಿಕೊಂಡಿತ್ತು. ಭಾರತದಲ್ಲಿ ಇಂಧನ ಕೊರತೆ ಎದುರಾಗುವುದಿಲ್ಲವೆಂದು ಭಾರತೀಯರಿಗೆ ಭರವಸೆ ನೀಡಿತ್ತು. ಆದರೆ, ಈ ಭರವಸೆಗಳು ಈಗ ಸುಳ್ಳಾಗಿವೆ. ಮೋದಿ ಸರ್ಕಾರದ ಎಡಬಿಡಂಗಿ ನೀತಿಗಳು ಇದಕ್ಕೆ ಪ್ರಮುಖ ಕಾರಣವಾಗಿದೆ.

ಈ ಹಿಂದೆ, ಇರಾನ್ ಮತ್ತು ವೆನೆಜುವೆಲಾದಿಂದ ಭಾರತೀಯ ರೂಪಾಯಿಗಳಲ್ಲೇ ರಿಯಾಯಿತಿ ದರದಲ್ಲಿ ಭಾರತವು ತೈಲವನ್ನು ಖರೀದಿಸುತ್ತಿತ್ತು. ಅಂತೆಯೇ, ಭಾರತದ ಒಟ್ಟು ಕಚ್ಚಾ ತೈಲ ಆಮದಿನಲ್ಲಿ ಸುಮಾರು 40%ರಷ್ಟು ತೈಲವನ್ನು ರಿಯಾಯತಿ ದರದಲ್ಲಿ ರಷ್ಯಾ ಕೂಡ ಪೂರೈಕೆ ಮಾಡುತ್ತಿತ್ತು. ಆದರೆ, ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ದಾಳಿ ನಡೆಸಿದ ಬಳಿಕ, ಇಸ್ರೇಲ್ ಪರವಾಗಿ ಭಾರತ ನಿಲುವು ತಳೆಯಿತು. ಇರಾನ್-ವೆನೆಜುವೆಲಾದಿಂದ ಭಾರತೀಯ ರೂಪಾಯಿ ಮತ್ತು ರಿಯಾಯತಿಯಲ್ಲಿ ತೈಲ ಖರೀದಿಸುವ ಅವಕಾಶವನ್ನು ಮೋದಿ ಸರ್ಕಾರವೇ ಹಾಳುಮಾಡಿತು. ಅದೇ ರೀತಿ, ಅಮೆರಿಕ ಸರ್ಕಾರ ಸುಂಕ ವಿಧಿಸಿದ ತಕ್ಷಣವೇ ಟ್ರಂಪ್‌ಗೆ ಹೆದರಿದ ಮೋದಿ ಸರ್ಕಾರ, ರಷ್ಯಾದಿಂದ ರಿಯಾಯಿತಿ ದರದಲ್ಲಿ ಪಡೆಯುತ್ತಿದ್ದ ತೈಲ ಆಮದನ್ನು ಗಣನೀಯವಾಗಿ ಕಡಿತಗೊಳಿಸಿತು. ಇದರೊಂದಿಗೆ, ಭಾರತದ ಇಂಧನ ಸಾರ್ವಭೌಮತ್ವ ಮತ್ತು ಭದ್ರತೆಯನ್ನು ಸ್ವತಃ ಮೋದಿ ಸರ್ಕಾರವು ಮುಂದೆ ನಿಂತು ಹಾಳುಮಾಡಿತು.

ಪ್ರಸ್ತುತ, ಭಾರತದಲ್ಲಿ ಎಲ್‌ಪಿಜಿ ಮತ್ತು ಇಂಧನ ಬಿಕ್ಕಟ್ಟು ಎದುರಾಗಿದೆ. ಐದು ರಾಜ್ಯಗಳ ಚುನಾವಣೆಯೂ ಇದೇ ಸಮಯದಲ್ಲಿ ನಡೆಯುತ್ತಿದ್ದರಿಂದ, ಯಾವುದೇ ಬೆಲೆ ಏರಿಕೆಗೆ ಮುಂದಾಗದೆ ಮೋದಿ ಸರ್ಕಾರ ಮೌನವಾಗಿತ್ತು. ಈಗ ಚುನಾವಣೆಗಳು ಮುಗಿದು, ಸರ್ಕಾರಗಳು ರಚನೆಯಾಗುತ್ತಿದ್ದಂತೆ ಜನರ ಮೇಲೆ ಬೆಲೆ ಏರಿಕೆ ಹೊರೆ ಹೇರಿದೆ. ಪೆಟ್ರೋಲ್-ಡೀಸೆಲ್ ಬೆಲೆಗಳನ್ನು 3 ರೂ. ಏರಿಕೆ ಮಾಡಿದೆ. ಎಲ್‌ಪಿಜಿ ಬೆಲೆಯಂತೂ ದಿನದಿಂದ ದಿನಕ್ಕೆ ಗಗಕ್ಕೇರುತ್ತಿದೆ. ಕಾಳಸಂತೆಯಲ್ಲಂತೂ ಎಲ್‌ಪಿಜಿ ಬೆಲೆಗೆ ಯಾವುದೇ ಲಗಾಮುಗಳಿಲ್ಲ.

ಮಧ್ಯಪ್ರಾಚ್ಯದ ಯುದ್ಧದಿಂದ ಉಂಟಾಗಿರುವ ಬಿಕ್ಕಟ್ಟನ್ನು ಭಾರತ ನಿಭಾಯಿಸಲು ಭಾರತೀಯರು ಈ ಹೊರೆ ಹೊರಬೇಕು ಎಂದು ಜನರಲ್ಲಿ ಮನೋಭೂಮಿಕೆಯನ್ನು ಮೋದಿ ಸರ್ಕಾರ ಸಜ್ಜುಗೊಳಿಸಿದೆ. ಆದರೆ, ಈ ಹಿಂದೆ, ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಗಳು ತೀವ್ರವಾಗಿ ಕುಸಿದಿದ್ದಾಗಲೂ ಸಹ ಮೋದಿ ಸರ್ಕಾರವು ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು ಕೇವಲ ಹದಿನೈದು ತಿಂಗಳ ಅವಧಿಯಲ್ಲಿ ಒಂಬತ್ತು ಬಾರಿ ಹೆಚ್ಚಿಸಿತ್ತು. ಆ ಲಾಭವನ್ನು ಭಾರತೀಯ ಗ್ರಾಹಕರಿಗೆ ವರ್ಗಾಯಿಸುವ ಬದಲಿಗೆ ಸರ್ಕಾರ ಮತ್ತು ಕಾರ್ಪೊರೇಟ್ ಕುಳಗಳು ತಮ್ಮ ಜೇಬಿಗೆ ಇಳಿಸಿಕೊಂಡಿದ್ದರು.

2014 ಮತ್ತು 2021ರ ನಡುವೆ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವು ಪ್ರತಿ ಲೀಟರ್‌ಗೆ 9.48 ರೂಪಾಯಿಗಳಿಂದ 32.98 ರೂ.ಗಳಿಗೆ ಏರಿಕೆಯಾಗಿದೆ. ಅಂದರೆ, 248%ರಷ್ಟು ಹೆಚ್ಚಾಗಿದೆ. ಇದರಿಂದ, ಭಾರತ ಸರ್ಕಾರಕ್ಕೆ ಬರೋಬ್ಬರಿ 38.89 ಲಕ್ಷ ಕೋಟಿ ರೂ. ಲಾಭವಾಗಿದೆ. ಈ ಬೃಹತ್ ಲಾಭ ಪಡೆದಾಗಲೂ ದೇಶದ ನಾಗರಿಕರ ಮೇಲಿನ ಹೊರೆಯನ್ನು ಮೋದಿ ಸರ್ಕಾರ ತಗ್ಗಿಸಲಿಲ್ಲ. ಬೆಲೆ ಇಳಿಕೆಗೆ ಮುಂದಾಗಲಿಲ್ಲ. ಆದರೀಗ, ಬಿಕ್ಕಟ್ಟಿನ ಹೊರೆಯನ್ನು ಜನಸಾಮಾನ್ಯರ ಹೆಗಲಿಗೆ ವರ್ಗಾಯಿಸಿದ್ದಾರೆ.

ಮತ್ತೊಂದು ಅಂಶವೆಂದರೆ, ಮೋದಿ ಅವರು ಜನರಲ್ಲಿ ಮಿತವ್ಯಯದ ಮನವಿ ಮಾಡಿರುವುದು ಅವರ ದ್ವಂದ್ವ ನೀತಿಯನ್ನು ಎತ್ತಿ ತೋರಿಸುತ್ತದೆ. 2013ರಲ್ಲಿ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ, ಅಂದಿನ ಹಣಕಾಸು ಸಚಿವ ಪಿ. ಚಿದಂಬರಂ ಅವರು ದೇಶದ ಆರ್ಥಿಕ ಹಿತದೃಷ್ಟಿಯಿಂದ ಚಿನ್ನದ ಆಮದನ್ನು ನಿಯಂತ್ರಿಸುವಂತೆ ಮನವಿ ಮಾಡಿದ್ದರು. ಆಗ, ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದರು. ಚಿದಂಬರಂ ಅವರ ಮನವಿಯನ್ನು ಮೋದಿ ತೀವ್ರವಾಗಿ ಟೀಕಿಸಿದ್ದರು. ಚಿದಂಬರಂ ಅವರ ಮನವಿಯು ಭಾರತೀಯ ಮಹಿಳೆಯರ ಮಂಗಲಸೂತ್ರವನ್ನು ಕಿತ್ತುಕೊಳ್ಳುವ ಪ್ರಯತ್ನ ಎಂದು ಲೇವಡಿ ಮಾಡಿದ್ದರು. ಆದರೆ, ಇಂದು ತಾವೇ ಪ್ರಧಾನಿಯಾಗಿ, ದೇಶದ ಆರ್ಥಿಕ ನಿರ್ವಹಣೆಯ ವೈಫಲ್ಯ ಮುಚ್ಚಿಕೊಳ್ಳಲು ಜನರ ಮೇಲೆಯೇ ಮಿತವ್ಯಯದ ನಿರ್ಬಂಧಗಳನ್ನು ಹೇರುತ್ತಿದ್ದಾರೆ.

ಸರ್ಕಾರವು ಇಂಧನ ಕೊರತೆಯ ಹಾನಿಯನ್ನು ತಡೆಯಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಜನರಿಗೆ ಭರವಸೆ ನೀಡುವ ಬದಲಾಗಿ, ಪ್ರತಿಯೊಬ್ಬ ನಾಗರಿಕನೂ ಎಲ್ಲೆಲ್ಲಿ ವೆಚ್ಚ ಕಡಿತಗೊಳಿಸಬೇಕು ಎಂಬ ಪಟ್ಟಿಯನ್ನು ಮೋದಿ ಸರ್ಕಾರ ನೀಡುತ್ತಿದೆ. ಇದು ದೇಶದ ಜಿಡಿಪಿ ಮೌಲ್ಯವು ಮತ್ತಷ್ಟು-ಮೊಗದಷ್ಟು ಕುಸಿಯುವಂತೆ ಮಾಡುತ್ತಿದೆ.

ಮೋದಿ ಅವರು ಪ್ರಸ್ತುತ ಪರಿಸ್ಥಿತಿಯನ್ನು ಕೋವಿಡ್ ಮಾದರಿಯಲ್ಲಿ ನಿರ್ವಹಿಸುವಂತೆ ಮಾತನಾಡುತ್ತಿದ್ದಾರೆ. ಅವರ ಹೇಳಿಕೆಗಳಿಂದಾಗಿ ಷೇರು ಮಾರುಕಟ್ಟೆ ಏರುಪೇರಾಗಿ, ರೂಪಾಯಿ ಮೌಲ್ಯ ಮತ್ತಷ್ಟು ಕುಸಿದಿದೆ. ಏಷ್ಯಾದಲ್ಲಿಯೇ ಅತ್ಯಂತ ಕಳಪೆ ಕರೆನ್ಸಿ ಯಾಗಿ ರೂಪಾಯಿ ಗುರುತಿಸಿಕೊಂಡಿದೆ.

ಮತ್ತೊಂದು ಹಾಸ್ಯಾಸ್ಪದವೆಂದರೆ, ಜನಸಾಮಾನ್ಯರಿಗೆ ಇಂಧನ ಬಳಕೆಯನ್ನು ಕಡಿಮೆ ಮಾಡಲು, ಸಾರ್ವಜನಿಕ ಸಾರಿಗೆ ಬಳಸಲು ಮತ್ತು ವರ್ಚುವಲ್ ಸಭೆಗಳನ್ನು ನಡೆಸಲು ಕರೆ ಕೊಟ್ಟಿರುವ ಮೋದಿ, ತಾವೇ ಸ್ವತಃ ಸತತವಾಗಿ ವಿಮಾನಗಳು, ಹೆಲಿಕಾಪ್ಟರ್‌ಗಳು ಹಾಗೂ ಬೆಂಗಾವಲು ವಾಹನಗಳ ದೊಡ್ಡ ದಂಡಿನೊಂದಿಗೆ ವಿವಿಧ ರಾಜ್ಯಗಳಲ್ಲಿ ಬೃಹತ್ ರಾಜಕೀಯ ರ್‍ಯಾಲಿಗಳು, ರೋಡ್‌ಶೋಗಳು ಹಾಗೂ ವಿದೇಶಿ ಪ್ರವಾಸಗಳನ್ನು ನಡೆಸುತ್ತಿದ್ದಾರೆ. ಮೋದಿ ಮನವಿಗೆ ಮೋದಿಯೇ ಡಿಕ್ಕಿ ಹೊಡೆಯುತ್ತಿದ್ದಾರೆ.

ಮೋದಿ ಮತ್ತು ಅವರ ಸರ್ಕಾರವು ಪ್ರಸ್ತುತ ಇಂಧನ ಮತ್ತು ಆರ್ಥಿಕ ಬಿಕ್ಕಟ್ಟಿಗೆ ದೂರದ ಗುಮ್ಮನನ್ನು ತೋರಿಸಿ, ಸಮಸ್ಯೆಗಳಿಗೆ ಬೆನ್ನು ಹಾಕಿ ಪರಾರಿಯಾಗುವ ಪ್ರವೃತ್ತಿಯನ್ನು ಬಿಡಬೇಕು. ಬಿಕ್ಕಟ್ಟಿನ ಹೊರೆಯನ್ನು ಜನಸಾಮಾನ್ಯರ ಮೇಲೆ ಹೇರದೆ, ತಕ್ಷಣವೇ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಬಕಾರಿ ಸುಂಕವನ್ನು ಕಡಿತಗೊಳಿಸಬೇಕು. ದಿನಬಳಕೆ ವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು. ಪಾಶ್ಚಿಮಾತ್ಯ ದೇಶಗಳ ಒತ್ತಡಕ್ಕೆ ಮಣಿಯದೆ ಇರಾನ್, ರಷ್ಯಾದಂತಹ ರಾಷ್ಟ್ರಗಳಿಂದ ರೂಪಾಯಿ ಆಧರಿತ ವ್ಯಾಪಾರ ಅಥವಾ ರಿಯಾಯಿತಿ ದರದಲ್ಲಿ ಕಚ್ಚಾ ತೈಲ ಆಮದನ್ನು ಹೆಚ್ಚಿಸಿ ಇಂಧನ ಭದ್ರತೆ ಕಾಪಾಡಬೇಕು. ಜನರಿಗೆ ಮಿತವ್ಯಯದ ಪಾಠ ಹೇಳುವ ಮುನ್ನ ಸರ್ಕಾರಿ ವೆಚ್ಚಗಳು ಮತ್ತು ಅದ್ದೂರಿ ರಾಜಕೀಯ ಪ್ರಚಾರಗಳನ್ನು ತಗ್ಗಿಸಿ, ಜನರೊಂದಿಗೆ ನಿಲ್ಲುವಂತಾಗಬೇಕು.

ಯುಎಇ - ಭಾರತ ಆರ್ಥಿಕ ಬಾಂಧವ್ಯ: ಪ್ರಚಾರದ ಭರಾಟೆ, ಅನುಷ್ಠಾನ ಮರೀಚಿಕೆ

ಭಾರತದ ಆರ್ಥಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯಲ್ಲಿರುವ ಮೂಲಭೂತ ದೋಷಗಳನ್ನು ಸರಿಪಡಿಸದೆ, ಕೇವಲ ಅಂತಾರಾಷ್ಟ್ರೀಯ ವೇದಿಕೆಗಳ ಮೇಲೆ ವಿದೇಶಿ ಬಂಡವಾಳದ ಗುಣಗಾನ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಹೂಡಿಕೆದಾರರಿಗೆ ಪೂರಕವಾದ, ಮುಕ್ತ ಮತ್ತು ವಿಶ್ವಾಸಾರ್ಹ ವಾತಾವರಣ ಕಲ್ಪಿಸುವಲ್ಲಿ ಕೇಂದ್ರ ವ್ಯವಸ್ಥೆ ಸಂಪೂರ್ಣ ವಿಫಲವಾಗಿದೆ.

ಜಾಗತಿಕ ಆರ್ಥಿಕತೆಯಲ್ಲಿ ಭಾರತ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ನಡುವಿನ ವಾಣಿಜ್ಯ ಬಾಂಧವ್ಯದ ಬಗ್ಗೆ ಇತ್ತೀಚಿನ ದಿನಗಳಲ್ಲಿ ಬಹುದೊಡ್ಡ ಮಟ್ಟದ ಪ್ರಚಾರ ನೀಡಲಾಗುತ್ತಿದೆ. ಯುಎಇಯಿಂದ ಭಾರಿ ಪ್ರಮಾಣದ ಬಂಡವಾಳ ಭಾರತದತ್ತ ಸುಲಭವಾಗಿ ಹರಿದು ಬರುತ್ತಿದೆ ಎಂಬ ಭ್ರಮೆಯನ್ನು ವ್ಯವಸ್ಥಿತವಾಗಿ ಸೃಷ್ಟಿಸಲಾಗುತ್ತಿದೆ. ಆದರೆ, ವಾಸ್ತವದ ಕಠೋರ ನೆಲೆಗಟ್ಟಿನಲ್ಲಿ ಪರಿಶೀಲಿಸಿದಾಗ, ಬೃಹತ್ ಶೃಂಗಸಭೆಗಳಲ್ಲಿ ಅತ್ಯಂತ ಸಂಭ್ರಮದಿಂದ ಘೋಷಣೆಯಾಗುವ ಕೋಟ್ಯಂತರ ಡಾಲರ್ ಮೌಲ್ಯದ ಕರಾರು ಒಪ್ಪಂದಗಳು ಕೇವಲ ರಾಜಕೀಯ ಪ್ರಚಾರಕ್ಕೆ ಮಾತ್ರ ಸೀಮಿತವಾಗಿವೆ. ತಳಮಟ್ಟದಲ್ಲಿ ನೈಜ ಬಂಡವಾಳ ಹರಿವು ಅತ್ಯಂತ ನಿರಾಶಾದಾಯಕವಾಗಿದೆ ಎಂಬುದು ಆರ್ಥಿಕ ತಜ್ಞರ ಸ್ಪಷ್ಟ ಅಭಿಪ್ರಾಯವಾಗಿದೆ.

ಭಾರತ ಮತ್ತು ಯುಎಇ ನಡುವಿನ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ () ಜಾರಿಗೆ ಬಂದ ನಂತರ ವ್ಯಾಪಾರ ವಹಿವಾಟು ಗಣನೀಯವಾಗಿ ಹೆಚ್ಚಾಗಿದೆ ಎಂದು ಬಿಂಬಿಸಲಾಗುತ್ತಿದೆ. ಆದರೆ, ಈ ವಹಿವಾಟಿನ ಅಂಕಿ-ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಇದು ಪ್ರಧಾನವಾಗಿ ಕೇವಲ ತೈಲ ಆಮದಿನ ಮೇಲಿನ ಅವಲಂಬನೆ ಹಾಗೂ ಕಡಿಮೆ ಮೌಲ್ಯದ ಸರಕುಗಳ ವಿನಿಮಯವಷ್ಟೇ ಆಗಿದೆ. ಯುಎಇಯಿಂದ ಭಾರತದ ಉತ್ಪಾದನಾ ವಲಯ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಹರಿದು ಬರಬೇಕಿದ್ದ ನೈಜ ವಿದೇಶಿ ನೇರ ಹೂಡಿಕೆ () ನಿರೀಕ್ಷಿತ ಮಟ್ಟದಲ್ಲಿಲ್ಲ ಎಂಬುದು ಭಾರತದ ಆರ್ಥಿಕ ನೀತಿಗಳ ಸಂಪೂರ್ಣ ವೈಫಲ್ಯವನ್ನು ಎತ್ತಿತೋರಿಸುತ್ತದೆ. ಕೇವಲ ಒಪ್ಪಂದಗಳ ಸಂಖ್ಯೆ ಹೆಚ್ಚಾಗಿದೆ ವಿನಃ ಗುಣಮಟ್ಟದ ಬಂಡವಾಳವಿಲ್ಲ.

ಅರಬ್ ಬಂಡವಾಳಶಾಹಿಗಳು ಭಾರತದಲ್ಲಿ ಹೂಡಿಕೆ ಮಾಡಲು ಇಂದಿಗೂ ಹಿಂದೇಟು ಹಾಕಲು ಪ್ರಮುಖ ಕಾರಣವೆಂದರೆ ಇಲ್ಲಿನ ಆಡಳಿತ ವ್ಯವಸ್ಥೆಯಲ್ಲಿ ಬೇರುಬಿಟ್ಟಿರುವ ಭ್ರಷ್ಟಾಚಾರ ಮತ್ತು ವಿಪರೀತ ಆಡಳಿತಾತ್ಮಕ ವಿಳಂಬ. ಕೆಂಪುಪಟ್ಟಿಯ ( ) ಸಂಸ್ಕೃತಿಯಿಂದಾಗಿ, ಯಾವುದೇ ಹೊಸ ಯೋಜನೆಗೆ ಎಲ್ಲ ಇಲಾಖೆಗಳ ಅನುಮೋದನೆ ಪಡೆಯಲು ವರ್ಷಗಳೇ ಬೇಕಾಗುತ್ತವೆ. ಒಂದೆಡೆ ಹೂಡಿಕೆದಾರರನ್ನು ಆಕರ್ಷಿಸಲು ಕೆಂಪು ಹಾಸು ಹಾಸುತ್ತೇವೆ ಎಂದು ಕೇಂದ್ರ ಸರ್ಕಾರ ಹೇಳುತ್ತದೆಯಾದರೂ, ವಾಸ್ತವದಲ್ಲಿ ಹೂಡಿಕೆದಾರರು ಸರ್ಕಾರಿ ಕಚೇರಿಗಳ ಅಲೆದಾಟದಲ್ಲಿಯೇ ಹೈರಾಣಾಗುತ್ತಿದ್ದಾರೆ. ಇಲಾಖೆಗಳ ನಡುವಿನ ಸಮನ್ವಯದ ಕೊರತೆಯು ವಿದೇಶಿ ಕಂಪನಿಗಳಿಗೆ ಭಾರತದ ಮೇಲಿನ ಆಸಕ್ತಿಯನ್ನು ಕೊಲ್ಲುತ್ತಿದೆ.

ಭಾರತದಲ್ಲಿ ಕೈಗಾರಿಕೆ ಸ್ಥಾಪನೆಗೆ ಅತಿ ದೊಡ್ಡ ಅಡಚಣೆಯಾಗಿರುವುದು ಅತ್ಯಂತ ಜಟಿಲವಾದ ಭೂಸ್ವಾಧೀನ



ಪ್ರಕ್ರಿಯೆ. ಯುಎಇಯ ಮುಬಾದಲಾ ಸೇರಿದಂತೆ ಪ್ರಮುಖ ಸಾವರಿನ್ ವೆಲ್ತ್ ಫಂಡ್‌ಗಳು ಬೃಹತ್ ಯೋಜನೆಗಳಿಗೆ ಹಣ ಒದಗಿಸಲು ಸಿದ್ಧವಿದ್ದರೂ, ವಿವಾದಿತ ಭೂಸ್ವಾಧೀನ ಕಾಯ್ದೆಗಳು ಮತ್ತು ಸ್ಥಳೀಯ ಮಟ್ಟದ ರಾಜಕೀಯ ಪ್ರೇರಿತ ಪ್ರತಿಭಟನೆಗಳು ಯೋಜನೆಗಳನ್ನು ಹಳ್ಳ ಹಿಡಿಸುತ್ತಿವೆ. ಇದರ ಜೊತೆಗೆ, ಇಲ್ಲಿನ ಅತ್ಯಂತ ಸಂಕೀರ್ಣವಾದ ಮತ್ತು ಗೊಂದಲಮಯ ಕಾರ್ಮಿಕ ಕಾಯ್ದೆಗಳು ವಿದೇಶಿ ಕಂಪನಿಗಳಿಗೆ ನಿರಂತರ ತಲೆನೋವಾಗಿ ಪರಿಣಮಿಸಿವೆ. ಹೀಗಾಗಿ, ಸುಲಭವಾಗಿ ಉದ್ಯಮ ಸ್ಥಾಪಿಸುವ ವಾತಾವರಣ ಭಾರತದಲ್ಲಿ ಮರೀಚಿಕೆಯಾಗಿದೆ.

ಇವೆಲ್ಲದಕ್ಕೂ ಮಿಗಿಲಾಗಿ, ಭಾರತದ ತೆರಿಗೆ ನೀತಿಗಳಲ್ಲಿನ ತೀವ್ರ ಅಸ್ಥಿರತೆ ಯುಎಇ ಹೂಡಿಕೆದಾರರಲ್ಲಿ ಅಭದ್ರತೆ ಸೃಷ್ಟಿಸಿದೆ. ಆಗಿಂದಾಗ್ಗೆ ಏಕಾಏಕಿ ಬದಲಾಗುವ ನಿಯಮಾವಳಿಗಳು, ಹಿಂದಿನ ದಿನಾಂಕದಿಂದ ಅನ್ವಯವಾಗುವಂತೆ ವಿಧಿಸುವ ತೆರಿಗೆಗಳ ಭೀತಿ ಮತ್ತು ಆಮದು ಸುಂಕದ ಏರಿಳಿತಗಳು ಹೂಡಿಕೆದಾರರ ವಿಶ್ವಾಸವನ್ನು ಸಂಪೂರ್ಣವಾಗಿ ಕಸಿದುಕೊಂಡಿವೆ. ದೀರ್ಘಾವಧಿಯ ಲಾಭದ ನಿರೀಕ್ಷೆಯಲ್ಲಿ ಬರುವ ಅರಬ್ ಉದ್ಯಮಿಗಳಿಗೆ ಭಾರತದ ಈ ಅನಿಶ್ಚಿತ ಹಾಗೂ ಅಪಾರದರ್ಶಕ ನೀತಿಗಳು ಭಾರಿ ಆತಂಕದ ವಾತಾವರಣವನ್ನು ನಿರ್ಮಿಸಿದ್ದು, ಆರ್ಥಿಕ ವ್ಯವಸ್ಥೆಯ ಮೇಲಿನ ನಂಬಿಕೆ ಹುಸಿಯಾಗಿದೆ.

ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಭಾರತವು ಇಂದಿಗೂ ದಶಕಗಳಷ್ಟು ಹಿಂದಿದೆ ಎಂಬುದು ವಿದೇಶಿ ಬಂಡವಾಳಿಗರಿಗೆ ಅರಗಿಸಿಕೊಳ್ಳಲಾಗದ ಕಟುಸತ್ಯ. ಯುಎಇಯ ಡಿಪಿ ವರ್ಲ್ಡ್ ( ) ನಂತಹ ಜಾಗತಿಕ ಸಂಸ್ಥೆಗಳು ಭಾರತದ ಬಂದರು ನಿರ್ವಹಣೆ ಮತ್ತು ಸರಕು ಸಾಗಣೆ ವಲಯದಲ್ಲಿ ಹೂಡಿಕೆ ಮಾಡಲು ಮುಂದಾದರೂ, ಭಾರತದ ಕಳಪೆ ರಸ್ತೆ ಜಾಲ, ರೈಲು ಸಂಪರ್ಕದ ಕೊರತೆ ಮತ್ತು ವಿಳಂಬ ಗತಿಯ ಲಾಜಿಸ್ಟಿಕ್ಸ್ ವ್ಯವಸ್ಥೆಯು ಅವರ ಕಾರ್ಯಾಚರಣೆಗೆ ಬಹುದೊಡ್ಡ ತೊಡಕಾಗಿದೆ. ಈ ಕಳಪೆ ಮೂಲಸೌಕರ್ಯದಿಂದಾಗಿ ಉತ್ಪಾದನಾ ಹಾಗೂ ಸಾರಿಗೆ ವೆಚ್ಚ ವಿಪರೀತವಾಗಿ ಹೆಚ್ಚಾಗುತ್ತಿದೆ. ಇದು ಜಾಗತಿಕ ಮಾರುಕಟ್ಟೆಯಲ್ಲಿ ಹೂಡಿಕೆದಾರರ ಲಾಭಾಂಶವನ್ನು ಕಡಿತಗೊಳಿಸುತ್ತಿದೆ.

ಉಭಯ ದೇಶಗಳ ನಡುವಿನ ಬೃಹತ್ ಯೋಜನೆಗಳು ಕೇವಲ ಘೋಷಣೆಗಳಾಗಿ ಮಾತ್ರ ಉಳಿದಿರುವುದಕ್ಕೆ ಐಟುಯುಟು (22) ಉಪಕ್ರಮವೇ ಅತ್ಯಂತ ಸ್ಪಷ್ಟ ನಿದರ್ಶನ. ಈ ಮಹತ್ವಾಕಾಂಕ್ಷಿ ಯೋಜನೆಯಡಿ ಭಾರತದಲ್ಲಿ ಬೃಹತ್ ಆಹಾರ ಪಾರ್ಕ್‌ಗಳನ್ನು ( ) ನಿರ್ಮಿಸಲು ಯುಎಇ ಎರಡು ಶತಕೋಟಿ ಡಾಲರ್ ಹೂಡಿಕೆ ಮಾಡುವುದಾಗಿ ಘೋಷಿಸಿತ್ತು. ಆದರೆ, ಆಡಳಿತಾತ್ಮಕ ದಿವ್ಯ ನಿರ್ಲಕ್ಷ್ಯ, ನಿಗದಿತ ಸ್ಥಳಗಳಲ್ಲಿ ಸೂಕ್ತ ಭೂಮಿಯ ಲಭ್ಯತೆಯ ಕೊರತೆ ಮತ್ತು ವಿಭಿನ್ನ ಏಜೆನ್ಸಿ ಗಳ ನಡುವಿನ ಕಳಪೆ ಸಮನ್ವಯದಿಂದಾಗಿ ಈ ಯೋಜನೆಗಳು ಇಂದಿಗೂ ಕಾಗದದ ಮೇಲೆಯೇ ಧೂಳು ತಿನ್ನುತ್ತಿವೆ. ಯೋಜನೆಗಳ ಅನುಷ್ಠಾನದಲ್ಲಿನ ಈ ಆಮೆಗತಿಯು ಭಾರತದ ಆಡಳಿತಾತ್ಮಕ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸುವಂತೆ ಮಾಡಿದೆ. ಭಾರತದ ಆರ್ಥಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯಲ್ಲಿರುವ ಮೂಲಭೂತ ದೋಷಗಳನ್ನು ಸರಿಪಡಿಸದೆ, ಕೇವಲ ಅಂತಾರಾಷ್ಟ್ರೀಯ ವೇದಿಕೆಗಳ ಮೇಲೆ ವಿದೇಶಿ ಬಂಡವಾಳದ ಗುಣಗಾನ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಹೂಡಿಕೆದಾರರಿಗೆ ಪೂರಕವಾದ, ಮುಕ್ತ ಮತ್ತು ವಿಶ್ವಾಸಾರ್ಹ ವಾತಾವರಣ ಕಲ್ಪಿಸುವಲ್ಲಿ ಕೇಂದ್ರ ವ್ಯವಸ್ಥೆ ಸಂಪೂರ್ಣ ವಿಫಲವಾಗಿದೆ. ಈ ದುರಾಡಳಿತ, ಆರ್ಥಿಕ ನೀತಿಗಳ ಅನಿಶ್ಚಿತತೆ ಹಾಗೂ ಕನಿಷ್ಠ ಮೂಲಸೌಕರ್ಯಗಳ ಕೊರತೆ ಇದೇ ರೀತಿ ಮುಂದುವರಿದರೆ, ಯುಎಇಯಿಂದ ನಿರೀಕ್ಷಿಸುತ್ತಿರುವ ಬೃಹತ್ ಬಂಡವಾಳ ಹರಿವು ಕೇವಲ ಬರೀ ಮಾತಾಗಿಯೇ ಉಳಿಯಲಿದ್ದು, ದೇಶದ ಆರ್ಥಿಕ ಪ್ರಗತಿಗೆ ಇದು ಭಾರಿ ಹಿನ್ನಡೆಯಾಗಲಿದೆ.

ಸಂಗೀತಪ್ರೇಮಿಗಳ ಎದೆತಣಿಸಿದ ಅಸಲಿ ಪ್ರತಿಭೆ ಆಶಾ ಭೋಸ್ಲೆ

ಆಶಾ ಭೋಸ್ಲೆ ಇಂದು ನಮ್ಮ ನಡುವೆ ಇಲ್ಲದಿದ್ದರೂ, ಅರವತ್ತು ವರ್ಷಗಳ ಕಾಲ ತಮ್ಮ ಸಿರಿಕಂಠದಿಂದ ಸಂಗೀತಪ್ರೇಮಿಗಳ ಎದೆತಣಿಸಿದ ಅವರ ಹಾಡುಗಳು ನಮ್ಮೊಂದಿಗಿವೆ. ಅವರ ವೈವಿಧ್ಯತೆ, ವಿಭಿನ್ನತೆ ಮತ್ತು ಸಂಗೀತದೊಂದಿಗಿನ ತಲ್ಲೀನತೆ ಅವರನ್ನು ಜೀವಂತ ದಂತಕಥೆಯನ್ನಾಗಿಸಿದೆ.

ಪತ್ರಕರ್ತ ರಾಜದೀಪ್ ಸರ್ದೇಸಾಯಿ, ತಮ್ಮ ಎಕ್ಸ್‌ನಲ್ಲಿ ಸಣ್ಣ ಹಾಡಿನ ವಿಡಿಯೋ ತುಣುಕೊಂದನ್ನು ಹಂಚಿಕೊಂಡಿದ್ದಾರೆ. ಅದು ಸಂಗೀತ ನಿರ್ದೇಶಕ ಆರ್.ಡಿ. ಬರ್ಮನ್ ಮತ್ತು ಗಾಯಕಿ ಆಶಾ ಭೋಸ್ಲೆಯವರು ಹಾಡಿರುವ ಒಂದು ಹಾಡಿನ ದೃಶ್ಯ. 1972ರಲ್ಲಿ ಬಿಡುಗಡೆಯಾದ ರಾಜೇಶ್ ಖನ್ನಾ ಮತ್ತು ಮುಮ್ತಾಜ್ ನಟಿಸಿರುವ ಅಪ್ನಾ ದೇಶ್ ಚಿತ್ರದ ದುನಿಯಾ ಮೇ ಲೋಗೋ ಕೋ ಹದಿಹರೆಯದವರನ್ನು ಹುಚ್ಚೆಬ್ಬಿಸಿದ ಹಾಡಿನ ದೃಶ್ಯ.

ಆ ಕಾಲಕ್ಕೆ ಅದು ಭಾರೀ ಕ್ರೇಜ್ ಹುಟ್ಟಿಸಿದ ಜನಪ್ರಿಯ ಚಿತ್ರಗೀತೆಯಾಗಿತ್ತು. ಅದಕ್ಕೆ ತಕ್ಕಂತೆ ವೆಸ್ಟರ್ನ್ ಸಂಗೀತ ಸಂಯೋಜನೆಯಿತ್ತು. ಪಾಪ್ ಶೈಲಿಯ ಗಡುಸು ಧ್ವನಿಗೆ ಸ್ವತಃ ಬರ್ಮನ್ ದನಿಗೂಡಿಸಿದ್ದರೆ, ಅದಕ್ಕೆ ವಿರುದ್ಧವಾದ ತಣ್ಣನೆಯ ಫೀಮೇಲ್ ಸಿಂಗರ್ ಆಗಿ ಆಶಾ ಭೋಸ್ಲೆ ಹಾಡಿದ್ದರು.


ಅದೇ ಹಾಡನ್ನು ಖಾಸಗಿ ಸಮಾರಂಭವೊಂದರಲ್ಲಿ ಆರ್.ಡಿ. ಬರ್ಮನ್ ಮತ್ತು ಆಶಾ ಭೋಸ್ಲೆ ಮತ್ತೊಮ್ಮೆ ಹಾಡಿದ್ದರು. ಹಾಡುವಾಗಿನ ಅವರ ಹಾವಭಾವ, ಸಂಗೀತದ ವಾದ್ಯಗಳನ್ನು ನುಡಿಸುವ ನಟನೆ, ಅದಕ್ಕೆ ತಕ್ಕ ಬರ್ಮನ್ ನೃತ್ಯ. ಪಕ್ಕದಲ್ಲಿ ಅದಕ್ಕೆ ತದ್ವಿರುದ್ಧವಾಗಿ ಸೌಮ್ಯವಾಗಿ ನಿಂತು ಹಾಡುತ್ತಿರುವ ಆಶಾ ಭೋಸ್ಲೆ- ನಿಜಕ್ಕೂ ಅದೊಂದು ಅಪರೂಪದ ವಿಡಿಯೋ ತುಣುಕು.

ಸಂಗೀತ ನಿರ್ದೇಶಕ ಆರ್.ಡಿ. ಬರ್ಮನ್ ಮತ್ತು ಗಾಯಕಿ ಆಶಾ ಭೋಸ್ಲೆಯ ಜೋಡಿಯೇ, ಹೇಳಿಮಾಡಿಸಿದ ಅಪರೂಪದ ಅಪೂರ್ವ ಜೋಡಿ. ಅದರಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ಗಾಯನ ಹದವರಿತು ಮಿಳಿತಗೊಂಡಿತ್ತು. ಭಾರತೀಯ ಸಿನಿಪ್ರಿಯರಿಗೆ ಬೇಕಾದ ಸಂಗೀತ ಧಾರೆಯನ್ನು ಎದೆಗೆ ದಾಟಿಸಿತ್ತು.

ಆ ಜೋಡಿ ಹಕ್ಕಿಯಲ್ಲಿ ಒಂದಾದ ಹಾಡುವ ಹಕ್ಕಿ ಆಶಾ ಭೋಸ್ಲೆ ನಿನ್ನೆ ಭಾನುವಾರ, ತಮ್ಮ 92ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಈ ಮಹಾನ್ ಗಾಯಕಿ ಭಾರತೀಯ ಸಂಗೀತ ಲೋಕದಲ್ಲಿ, 6 ದಶಕಗಳ ಕಾಲ 12 ಸಾವಿರಕ್ಕೂ ಅಧಿಕ ಹಾಡುಗಳನ್ನು ಹಾಡಿ ದಾಖಲೆ ನಿರ್ಮಿಸಿದ್ದಾರೆ. ಹಿಂದಿ ಸೇರಿದಂತೆ 20ಕ್ಕೂ ಹೆಚ್ಚು ಭಾರತೀಯ ಭಾಷೆಗಳಲ್ಲಿ(ಕನ್ನಡದ ಮೂರು ಚಿತ್ರಗಳಿಗೂ ಹಾಡಿದ್ದಾರೆ) ತಮ್ಮದೇ ಆದ ಛಾಪು ಮೂಡಿಸಿದ ಮರೆಯಲಾರದ ಗಾಯಕಿ ಎನಿಸಿಕೊಂಡಿದ್ದಾರೆ.

ಆಶಾ ಭೋಸ್ಲೆ 1933ರ ಸೆಪ್ಟೆಂಬರ್ 8ರಂದು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಜನಿಸಿದರು. ಕೊಂಕಣ ಮೂಲದ ರಂಗಭೂಮಿ ಹಿನ್ನೆಲೆಯಿಂದ ಬಂದ ಅವರ ಕುಟುಂಬ ಕಲಾ ಕುಟುಂಬವಾಗಿತ್ತು. ಸಂಗೀತ ಮತ್ತು ಹಿಂದೂಸ್ಥಾನಿ ಗಾಯಕರಾಗಿದ್ದ ತಂದೆ ಪಂಡಿತ್ ದೀನಾನಾಥ್ ಮಂಗೇಶ್ಕರ್, ಬಾಲ್ಯದಲ್ಲಿಯೇ ಸಂಗೀತದ ಪಾಠಗಳನ್ನು ಕಲಿಸಿದರು. ಪ್ರಸಿದ್ಧ ಗಾಯಕಿ ಲತಾ ಮಂಗೇಶ್ಕರ್ ಅವರ ಸಹೋದರಿಯಾಗಿದ್ದರು. ಆದರೆ, ತಂದೆಯ ಅಕಾಲಿಕ ನಿಧನದಿಂದ ಕುಟುಂಬ ಸಂಕಷ್ಟಕ್ಕೆ ನಿಲುಕಿತು. ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕಾಗಿ ಬಹಳ ಚಿಕ್ಕ ವಯಸ್ಸಿನಲ್ಲಿ, ಸಹೋದರಿಯರು ಹಾಡಲು ಆರಂಭಿಸಿದರು.

ಆಶಾ ಭೋಸ್ಲೆ ಅವರು ತುಂಬಾ ಕಿರಿಯ ವಯಸ್ಸಿನಲ್ಲಿಯೇ, ಹದಿನಾರರ ಹರೆಯದಲ್ಲಿ ಮನೆಯವರ ವಿರೋಧದ ನಡುವೆಯೇ ಪ್ರೇಮ ವಿವಾಹವಾಗಿದ್ದರು. ಲೋಕ ತಿಳಿಯುವ ಮುನ್ನವೇ ಮೂರು ಮಕ್ಕಳ ತಾಯಿಯಾಗಿದ್ದರು. ಈ ನಿರ್ಧಾರ ಮೊದಲೇ ಸಂಕಷ್ಟದಲ್ಲಿದ್ದ ಕುಟುಂಬದಲ್ಲಿ ಬಿರುಗಾಳಿ ಎಬ್ಬಿಸಿತು. ಇದರಿಂದ ಸಹೋದರಿ ಲತಾ



ಅವರೊಂದಿಗೆ ಮಾತು ಬಿಡಲು ಕೂಡ ಕಾರಣವಾಯಿತು. ಕುಟುಂಬದಿಂದ ದೂರವಾದ ಆಶಾ, ಪ್ರೇಮಿಸಿ ಮದುವೆಯಾಗಿದ್ದರೂ, ಅಲ್ಲಿಯೂ ಅವರಿಗೆ ನೆಮ್ಮದಿ ಇಲ್ಲವಾಗಿತ್ತು. ಕೌಟುಂಬಿಕ ಕಲಹ, ವಿಚ್ಛೇದನದಿಂದ ನೊಂದು ಬೆಂದುಹೋಗಿದ್ದರು. ಆ ಬೆಂದ ಜೀವಕ್ಕೆ ಗಾಯನ ಸಂಜೀವಿನಿಯಾಗಿ ಒದಗಿಬಂದಿತ್ತು. ಅದರಿಂದ ಸಿಕ್ಕ ಜನಪ್ರಿಯತೆ, ಖ್ಯಾತಿ, ಹಣ ಎಲ್ಲವನ್ನು ಮರೆಸಿತ್ತು.

ಲತಾ ಮತ್ತು ಆಶಾ- ಇಬ್ಬರೂ ಒಂದೇ ಕುಟುಂಬದ ಕುಡಿಗಳಾದರೂ, ಇಬ್ಬರೂ ಸಹ ಅತ್ಯುತ್ತಮ ಗಾಯಕಿಯರಾಗಿ ಹೆಸರು ಮಾಡಿದ್ದರೂ, ಭಾರತೀಯ ಚಿತ್ರರಂಗದಲ್ಲಿ ಇಬ್ಬರೂ ತಮ್ಮದೇ ಆದ ಸ್ಥಾನ ಪಡೆದಿದ್ದರು. ಲತಾ ಭಾವಪೂರ್ಣ ಗೀತೆಗಳಿಗೆ ಪ್ರಸಿದ್ಧರಾದರೆ; ಆಶಾ ಪಾಶ್ಚಾತ್ಯ ಶೈಲಿಯ ಹಾಡುಗಳಿಗೆ ಜನಪ್ರಿಯರಾಗಿದ್ದರು. ಈ ರೀತಿಯ ಪ್ರತ್ಯೇಕ ಗುರುತು ಇದ್ದರೂ, ಕೆಲವೊಮ್ಮೆ ಅವಕಾಶಗಳ ವಿಷಯದಲ್ಲಿ ಇಬ್ಬರ ನಡುವೆ ಸ್ಪರ್ಧೆಯೂ ಇತ್ತು. ಸಂಗೀತ ನಿರ್ದೇಶಕರ ಆಯ್ಕೆಯಿಂದಾಗಿ ಇಬ್ಬರ ನಡುವೆ ವೈಮನಸ್ಸಿಗೂ ಕಾರಣವಾಗಿತ್ತು.

ಲತಾ ಮತ್ತು ಆಶಾರ ಪ್ರತಿಭೆಯನ್ನು ಸೀಳಿ ನೋಡುವ ಸಮಾಜ ಮತ್ತು ಮಾಧ್ಯಮಗಳಿಂದ, ಅತಿ ಹೆಚ್ಚು ನೊಂದವರು ಆಶಾ ಭೋಸ್ಲೆಯವರು. ಏಕೆಂದರೆ, ಅವಕಾಶಗಳು ಅರಸಿ ಬರುತ್ತಿದ್ದುದು ಹೆಚ್ಚಾಗಿ ಅಕ್ಕನಿಗೆ. ಆಶಾ ಎಂದಾಕ್ಷಣ ಕ್ಯಾಬರೆ ಎಂದು ಬ್ರ್ಯಾಂಡ್ ಮಾಡಲಾಗಿತ್ತು. ಅದರಲ್ಲೂ ಮಾಧ್ಯಮಗಳು ಬೇಕೆಂದೇ ಇಬ್ಬರ ನಡುವೆ ಗೆರೆ ಕೊರೆದು, ಯಾರು ಶ್ರೇಷ್ಠ ಎಂಬ ಪ್ರಶ್ನೆ ಎತ್ತುತ್ತಿದ್ದವು. ಆ ಪ್ರಶ್ನೆ ಎದುರಾದಾಗಲೆಲ್ಲ ಆಶಾ ಭಾರೀ ಮುಜುಗರಕ್ಕೆ ಒಳಗಾಗುತ್ತಿದ್ದರು. ತಾನು ಅಕ್ಕನಿಗಿಂತ ಭಿನ್ನ ಎಂದು ತಮ್ಮ ಹಾಡುಗಳ ಮೂಲಕ ತೋರಿದರೂ, ಚಿತ್ರರಂಗ ಇಬ್ಬರ ಪ್ರತಿಭೆಯನ್ನು ಸಮಾನವಾಗಿ ದುಡಿಸಿಕೊಂಡರೂ, ಅಲ್ಲೊಂದು ತಾರತಮ್ಯ ಅವರಿಗೇ ಗೊತ್ತಿಲ್ಲದಂತೆ ನೆಲೆಯಾಗಿತ್ತು.

ಹಾಗೆ ನೋಡಿದರೆ, ಆಶಾ ಮತ್ತು ಲತಾ ನಡುವಿನ ಮುನಿಸು ಒಂದು ಶಾಶ್ವತ ವೈಮನಸ್ಯವಲ್ಲ. ಅದು ಜೀವನದ ಕೆಲವು ಹಂತಗಳಲ್ಲಿ ಉಂಟಾದ ಭಿನ್ನಾಭಿಪ್ರಾಯಗಳು ಮತ್ತು ಪರಿಸ್ಥಿತಿಯ ಪರಿಣಾಮಗಳು ಮಾತ್ರ. ಲತಾ ಮಂಗೇಶ್ಕರ್ ಹೆಚ್ಚು ಸಂಯಮಿತ ಮತ್ತು ಸಂಪ್ರದಾಯಬದ್ಧ ಶೈಲಿಯನ್ನು ಅನುಸರಿಸಿದರೆ; ಆಶಾ ಭೋಸ್ಲೆ ಹೆಚ್ಚು ಮುಕ್ತ ಮನಸ್ಸಿನ, ಪ್ರಯೋಗಶೀಲ ವ್ಯಕ್ತಿತ್ವ ಹೊಂದಿದವರು. ಈ ವ್ಯತ್ಯಾಸವೂ ಅವರ ನಡುವಿನ ಅಂತರಕ್ಕೆ ಕಾರಣವಾಯಿತು. ವಯಸ್ಸಾದಂತೆ, ಮಾಗಿದಂತೆ ಒಂದಾಗಿದ್ದವರು, ಮತ್ತೆ ಒಂದಾದರು. ಪರಸ್ಪರ ಗೌರವ ಮತ್ತು ಸ್ನೇಹವನ್ನು ಕಾಪಾಡಿಕೊಂಡರು. ಹಲವಾರು ಸಂದರ್ಭಗಳಲ್ಲಿ ಒಬ್ಬರಿಗೊಬ್ಬರು ಪ್ರಶಂಸಿಸಿಕೊಂಡರು. ಕೊನೆಯಲ್ಲಿ ಅವರ ಸಂಬಂಧದಲ್ಲಿ ಪ್ರೀತಿ ಮತ್ತು ಗೌರವವೇ ಮುಖ್ಯವಾಗಿ ಉಳಿಯಿತು.

ಇಷ್ಟಾದರೂ, ಈ ಇಬ್ಬರು ಸಹೋದರಿಯರ ಮೇಲಿನ ಅಪವಾದವೊಂದು ಹಾಗೇ ಉಳಿಯಿತು. ಅದು ಹೊಸ ತಲೆಮಾರಿನ ಅನೇಕ ಗಾಯಕಿಯರ ಅವಕಾಶಗಳನ್ನು ಕಿತ್ತುಕೊಂಡರೆಂಬ ಅಪವಾದ. ಹಿಂದಿ ಚಿತ್ರರಂಗದಲ್ಲಿ ಅತ್ಯಂತ ಬೇಡಿಕೆಯಿದ್ದ ಸಂದರ್ಭದಲ್ಲಿ; ಅನೇಕ ಸಂಗೀತ ನಿರ್ದೇಶಕರು, ನಿರ್ಮಾಪಕರು ಇವರ ಮಾತು ಕೇಳುತ್ತಿದ್ದ ಸಮಯದಲ್ಲಿ ಪ್ರತಿಭಾವಂತ ಹೊಸ ಗಾಯಕಿಯರಿಗೆ ಅಡ್ಡಗಾಲು ಹಾಕಿದರು, ಅವರ ಅವಕಾಶಗಳನ್ನು ಕಿತ್ತುಕೊಂಡು ಏಕಸ್ವಾಮ್ಯ ಮೆರೆದರು ಎಂಬ ದೂರು ಇದೆ, ಇರಲಿ.

ಆದರೆ ಆಶಾ ಭೋಸ್ಲೆ ಅವರ ಆರಂಭದ ಸಂಗೀತ ಜೀವನವು ಕೂಡ ಸವಾಲಿನಿಂದ ಕೂಡಿತ್ತು. ಆರಂಭದಲ್ಲಿ ಸಣ್ಣಮಟ್ಟದ ಹಾಡುಗಳಿಂದ ಆರಂಭವಾದ ಅವರ ಪ್ರಯಾಣ, ಶ್ರಮ ಮತ್ತು ಪ್ರತಿಭೆಯಿಂದ ಹಂತ ಹಂತವಾಗಿ ಮೇಲೇರಿ ಸಂಗೀತಲೋಕದ ಶಿಖರವಾದರು. ಆರಂಭದಲ್ಲಿ ಸಂಗೀತ ನಿರ್ದೇಶಕ ಒ.ಪಿ. ನಯ್ಯರ್ ಅವಕಾಶ ನೀಡಿ ಬೆಳೆಸಿದರೆ; ಮುಂದೆ ಆರ್.ಡಿ. ಬರ್ಮನ್, ಆಶಾರನ್ನು ಜೀವನಸಂಗಾತಿಯನ್ನಾಗಿ ಸ್ವೀಕರಿಸಿದ್ದೂ ಅಲ್ಲದೆ, ಅವರ ಕಂಠಸಿರಿಯನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ದರು.

ಆಶಾ ಭೋಸ್ಲೆ ಅವರು, ಒಂದೇ ರೀತಿಯ ಹಾಡುಗಳಿಗೆ ಸೀಮಿತವಾಗದವರು. ಕ್ಯಾಬರೆ, ಗಝಲ್, ಪಾಪ್, ಫೋಕ್, ಭಜನ್, ಕ್ಲಾಸಿಕಲ್ ಸೇರಿದಂತೆ ಎಲ್ಲಾ ಶೈಲಿಗಳಲ್ಲಿಯೂ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದರು. ಅವರ ಧ್ವನಿಯ ಏರಿಳಿತ, ಲವಲವಿಕೆ ಮತ್ತು ಪ್ರಯೋಗಶೀಲತೆ ಅವರನ್ನು ಇತರರಿಗಿಂತ ಭಿನ್ನವಾಗಿಸಿದೆ. ಅವರ ಕಂಠಕ್ಕೆ ತಕ್ಕಂತೆ ಅವರಿಗೆ ಸಿಕ್ಕ ಆರ್.ಡಿ. ಬರ್ಮನ್ ಅವರ ವಿಶಿಷ್ಟ ಬಗೆಯ ಸಂಗೀತ, ಬೇರೆಯದೇ ಸಂಗೀತ ನಾದವನ್ನು ಭಾರತೀಯರಿಗೆ ಉಣಬಡಿಸಿದವು. ಪಿಯಾ ತೋ ಅಬ್ ತೋ ಆಜಾ, ದಮ್ ಮಾರೋ ದಮ್, ಚುರಾಲಿಯ ಹೈ ತುಮ್‌ನೆ ಜೋ ದಿಲ್ ಕೋದಂತಹ ಆ ಹಸ್ಕಿ ವಾಯ್ಸ್‌ಗೆ ಹದಿಹರೆಯದವರು ಹುಚ್ಚೆದ್ದು ಕುಣಿದರು.

ಇಂತಹ ಆಶಾರಿಗೆ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ, ಫಿಲ್ಮ್‌ಫೇರ್ ಪ್ರಶಸ್ತಿಗಳು ಮತ್ತು ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಸೇರಿದಂತೆ ಅನೇಕ ಗೌರವಗಳು ಲಭಿಸಿವೆ. ಅವರು ಭಾರತ ಮಾತ್ರವಲ್ಲದೆ ವಿಶ್ವದ ಹಲವೆಡೆ ಸಂಗೀತ ಕಾರ್ಯಕ್ರಮಗಳನ್ನು ನಡೆಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಖ್ಯಾತಿ ಗಳಿಸಿದ್ದಾರೆ. ಜೀವನದ ಸಂಕಷ್ಟಗಳನ್ನು ಎದುರಿಸಿ, ತಮ್ಮ ಪರಿಶ್ರಮದಿಂದಲೇ ಉನ್ನತ ಸ್ಥಾನಕ್ಕೆ ಏರಿದ ಅವರು ಅನೇಕ ಯುವ ಗಾಯಕರಿಗೆ ಪ್ರೇರಣೆಯಾಗಿದ್ದಾರೆ. ಅವರು ಇಂದು ನಮ್ಮ ನಡುವೆ ಇಲ್ಲದಿದ್ದರೂ, ಅರವತ್ತು ವರ್ಷಗಳ ಕಾಲ ತಮ್ಮ ಸಿರಿಕಂಠದಿಂದ ಸಂಗೀತಪ್ರೇಮಿಗಳ ಎದೆತಣಿಸಿದ ಅವರ ಹಾಡುಗಳು ನಮ್ಮೊಂದಿಗಿವೆ. ಅವರ ವೈವಿಧ್ಯತೆ, ವಿಭಿನ್ನತೆ ಮತ್ತು ಸಂಗೀತದೊಂದಿಗಿನ ತಲ್ಲೀನತೆ ಅವರನ್ನು ಜೀವಂತ ದಂತಕಥೆಯನ್ನಾಗಿಸಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR

ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 128 RNI Number : KNKAN/25/A2770 17-05-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :128 ರಾಯಚೂರು 17-05-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಸಾಧನಾ ಸಮಾವೇಶಕ್ಕೆ ಸಾರಿಗೆ ಗ್ರಹಣ

ಬೆಂಗಳೂರು, ಮೇ 16- ತುಮಕೂರಿನಲ್ಲಿ ನಡೆಯುವ ರಾಜ್ಯಸರ್ಕಾರದ ಮೂರನೇ ವರ್ಷದ ಸಾಧನಾ ಸಮಾವೇಶಕ್ಕೆ ಸಾರಿಗೆ ನೌಕರರು ಕಪ್ಪು ಬಾವುಟ ಪ್ರದರ್ಶಿಸಲು ಮುಂದಾಗಿದ್ದಾರೆ. ಸಾರಿಗೆ ನೌಕರರ ಮುಷ್ಕರಕ್ಕೆ 21 ದಿನಗಳ ಮೊದಲೇ ನೋಟೀಸ್‌ನೀಡಲಾಗಿದೆ. ಆದರಂತೆ ಮೇ 20 ರಿಂದ ಅನಿರ್ಧಿಷ್ಠಾವಧಿ ಮುಷ್ಕರ ಶುರುವಾಗಲಿದೆ ಎಂದು ಕೆಎಸ್‌ಆರ್‌ಟಿಸಿ ನೌಕರರ ಮತ್ತು ಸಿಬ್ಬಂದಿಗಳ ಸಂಘದ ಪ್ರಧಾನ ಕಾರ್ಯದರ್ಶಿ ವಿಜಯ್‌ಭಾಸ್ಕರ್ ತಿಳಿಸಿದ್ದಾರೆ.

ಕೆಲವರು ಹಿಂದಿನ ದಿನವೇ ಕೆಲಸ ಸ್ಥಗಿತಗೊಳಿಸುವ ಸಾಧ್ಯತೆ ಇದೆ. ತಡರಾತ್ರಿ ತಂಗುವ ಬಸ್‌ಗಳು ಮತ್ತು ದೂರದೂರಿಗೆ ರಾತ್ರಿ ಪ್ರಯಾಣ ಆರಂಭಿಸುವ ಚಾಲಕರು ಮತ್ತು ಸಿಬ್ಬಂದಿಗಳು ಹಿಂದಿನ ದಿನವೇ ತಮ ಮುಷ್ಕರವನ್ನು ಆರಂಭಿಸಲಿದ್ದಾರೆ. ಉಳಿದಂತೆ ಮೇ 20 ರಂದು ಬೆಳಗ್ಗೆ 6 ಗಂಟೆಯಿಂದಲೇ ಎಲ್ಲಾ ಸಾರಿಗೆ ಬಸ್‌ಗಳು ಸ್ಥಗಿತಗೊಳ್ಳಲಿದೆ ಎಂದು ವಿಜಯ್ ಭಾಸ್ಕರ್ ತಿಳಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಸಾರಿಗೆ ನೌಕರರ ಮುಷ್ಕರಕ್ಕೆ ಹೆದರಿ ಮೇ 20ರಂದು ತುಮಕೂರಿನಲ್ಲಿ ನಡೆಯಬೇಕಿದ್ದ ಸಾಧನಾ ಸಮಾವೇಶವನ್ನು ಒಂದು ದಿನ ಮುಂಚಿತವಾಗಿ ಅಂದರೆ, ಮೇ 19ರಂದೇ ನಡೆಸುತ್ತಿದೆ. ಅಂದು ತುಮಕೂರಿನಲ್ಲಿ ಸಾರಿಗೆ ನಿಗಮಗಳ ನೌಕರರು ಸಾಧನಾ ಸಮಾವೇಶಕ್ಕೆ ಕಪ್ಪು ಬಾವುಟ ಪ್ರದರ್ಶಿಸಲಿದ್ದಾರೆ.

ಕಾರ್ಯಕ್ರಮಕ್ಕೆ ಅಡ್ಡಿಪಡಿಸುವುದಿಲ್ಲ, ಬದಲಾಗಿ ತುಮಕೂರಿನ ಟೌನ್‌ಹಾಲ್ ಸರ್ಕಲ್‌ನಲ್ಲಿ ಸುಮಾರು ಒಂದು ಸಾವಿರ ಜನ ಸಮಾವೇಶಗೊಂಡು ಕಪ್ಪು ಬಾವುಟ ಪ್ರದರ್ಶಿಸುತ್ತೇವೆ ಎಂದು ವಿಜಯ್ ಭಾ ಸ್ಕರ್ ತಿಳಿಸಿದ್ದಾರೆ. ವೇತನ ಪರಿಷ್ಕರಣೆ ಹಾಗೂ ಇತರ ಬೇಡಿಕೆಗಳ ಈಡೇರಿಕೆಗೆ ನಮ ಒತ್ತಾಯ ನ್ಯಾಯ ಬದ್ಧವಾಗಿದೆ. ಹಲವು ಬಾರಿ ಚರ್ಚೆ ನಡೆಸಿದರೂ ಸರ್ಕಾರ ಸ್ಪಂದಿಸುತ್ತಿಲ್ಲ, ಕೊನೆಗೆ ಏಕಪಕ್ಷೀಯವಾಗಿ ಶೇ. 12.5ರಷ್ಟು ವೇತನ ಹೆಚ್ಚಿಸಿ, ಆದೇಶ ಹೊರಡಿಸಲಾಗಿದೆ. ಇದು ಒಪ್ಪಿತವಲ್ಲ ಎಂದು ಹೇಳಿದರು.

ಮೇ 30ರೊಳಗೆ ರಾಜ್ಯ ಸಂಪುಟ ಪುನರ್ ರಚನೆ

ಕೊಪ್ಪಳ: ಈ ತಿಂಗಳ 30ರ ಒಳಗಾಗಿ ಸಂಪುಟ ಪುನರ್ ರಚನೆ ಆಗುತ್ತದೆ, ಇಲ್ಲವೇ ವಿಸ್ತರಣೆ ಆಗುತ್ತದೆ ಎಂದು ಶಾಸಕ ಮತ್ತು ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಹೇಳಿದ್ದಾರೆ.



ಕೊಪ್ಪಳದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಎರಡು ವರ್ಷ ಮುಖ್ಯಮಂತ್ರಿಗಳಾಗಿ ಮುಂದುವರಿಯುತ್ತಾರೆ. ಒಂದು ವೇಳೆ ಪಕ್ಷದ ವರಿಷ್ಠರು ಬದಲಾವಣೆ ಬಯಸಿದರೆ ಸಿದ್ದರಾಮಯ್ಯರ ಮಟ್ಟದ ಅನುಭವಿಯಾಗಿರುವ ಮಲ್ಲಿಕಾರ್ಜುನ ಖರ್ಗೆಯವರನ್ನು ಮುಖ್ಯಮಂತ್ರಿ ಮಾಡಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಆದರೆ ಮುಖ್ಯಮಂತ್ರಿ ಬದಲಾವಣೆ ಮಾಡುವುದು ಸರಿಯಲ್ಲ ಎಂದರು.

ಸಂಪುಟ ಪುನರ್ ರಚನೆಯಾಗಬೇಕು. ಏಕೆಂದರೆ ಮೂರು ವರ್ಷ ಕಳೆದಿರುವುದರಿಂದ ಹೊಸ ಮುಖಗಳನ್ನು ತಂದರೆ ಉತ್ತಮ ಆಡಳಿತ ಕೊಡಲು ಸಾಧ್ಯ. ಉತ್ತಮ ಆಡಳಿತ ಕೊಟ್ಟರೆ ಮುಂದಿನ ಚುನಾವಣೆಯಲ್ಲಿ ಮತ್ತೆ ಪಕ್ಷ ಅಧಿಕಾರಕ್ಕೆ ತರಲು ಅನುಕೂಲ ಆಗುತ್ತದೆ ಎಂದು ರಾಯರೆಡ್ಡಿ ಹೇಳಿದರು.

ಪ್ರಧಾನಿ ರಾಜೀನಾಮೆ ನೀಡಲಿ

ಪೆಟ್ರೋಲ್ ಡೀಸೆಲ್ ನ ಬೆಲೆ ಏರಿಕೆ ಮಾಡಿರುವುದು

3ನೇ ಪುಟಕ್ಕೆ

ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದಲ್ಲಿ ಪ್ರವೇಶ ಆರಂಭ

ಉಚಿತ ಶಿಕ್ಷಣದೊಂದಿಗೆ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಸುವರ್ಣಾವಕಾಶ



ರಾಯಚೂರು,ಮೇ.16- ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದಲ್ಲಿ 2026 27ನೇ ಸಾಲಿನ ಪ್ರವೇಶ ಪ್ರಕ್ರಿಯೆ ಆರಂಭಗೊಂಡಿದ್ದು, ಉಚಿತ ಶಿಕ್ಷಣದೊಂದಿಗೆ ಸಂಸ್ಕೃತ ಹಾಗೂ ವೈದಿಕ ವಿದ್ಯಾಭ್ಯಾಸಕ್ಕೆ ಸುವರ್ಣಾವಕಾಶ ಕಲ್ಪಿಸಲಾಗಿದೆ ಎಂದು ಡಾಣಣ ಎನ್. ವಾದಿರಾಜಾಚಾರ್ಯ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಆಶ್ರಯದಲ್ಲಿ ಮಂತ್ರಾಲಯ ಹಾಗೂ ರಾಯಚೂರಿನ ಜವಾರನಗರ ರಾಘವೇಂದ್ರ ಮಠದಲ್ಲಿ ವಿದ್ಯಾಪೀಠ ಕಾರ್ಯನಿರ್ವಹಿಸುತ್ತಿದೆ ಎಂದರು.

ಜಗದ್ಗುರು ಶ್ರೀಮನ್ಮಧ್ವಾಚಾರ್ಯರು ಅವರ ಮೂಲ ಮಹಾಸಂಸ್ಥಾನದ ಪರಮಪೂಜ್ಯ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು ಅವರ ಪರಮಾನುಗ್ರಹದಿಂದ ವಿದ್ಯಾಪೀಠ ಕಾರ್ಯನಿರ್ವಹಿಸುತ್ತಿದ್ದು, 8 ವರ್ಷ ಮೇಲ್ಪಟ್ಟ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ವಿದ್ಯಾಪೀಠದಲ್ಲಿ ಉಚಿತ ಲೌಕಿಕ ಶಿಕ್ಷಣದ ಜೊತೆಗೆ ಅನ್ನ, ವಸ್ತ್ರ, ಪುಸ್ತಕ ಹಾಗೂ ವಸತಿ ವ್ಯವಸ್ಥೆ ಸಂಪೂರ್ಣ ಉಚಿತವಾಗಿದ್ದು, ವಿದ್ಯಾರ್ಥಿಗಳಿಗೆ ಧಾರ್ಮಿಕ, ಸಾಂಸ್ಕೃತಿಕ ಹಾಗೂ ನೈತಿಕ ಶಿಕ್ಷಣಕ್ಕೂ ವಿಶೇಷ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

ಇಲ್ಲಿ ವೇದ, ಕಾವ್ಯ, ಸಾಹಿತ್ಯ, ವ್ಯಾಕರಣ, ತರ್ಕ, ವೇದಾಂತ, ಪೌರೋಹಿತ್ಯ ಹಾಗೂ ಜ್ಯೋತಿಷ್ಯ ಶಾಸ್ತ್ರಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಜೊತೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಥಮ, ಕಾವ್ಯ, ಸಾಹಿತ್ಯ, ಬಿ.ಎ., ಎಂ.ಎ. ಪರೀಕ್ಷೆಗಳನ್ನೂ ಇದೇ ವಿದ್ಯಾಪೀಠದಲ್ಲಿ ನಡೆಸಲಾಗುವುದು ಎಂದು ಮಾಹಿತಿ ನೀಡಿದರು. ?

ಓಟ್ಟಚಟಿಟುಚ ಖಚಿಳಿಳ್ಟುಜಿಠಿ ಖ್ಲಿಜಿಡಬ್ಟಿೞಜಿಠಿಫ +1

ಸುಮಾರು 100 ವರ್ಷಗಳ ಇತಿಹಾಸ ಹೊಂದಿರುವ ಈ ವಿದ್ಯಾಪೀಠಕ್ಕೆ ಭಕ್ತರು ಮಠಕ್ಕೆ ನೀಡುವ ಕಾಣಿಕೆ ಹಣದಲ್ಲಿ ಶೇಕಡಾ 20ರಷ್ಟು ಮೊತ್ತವನ್ನು ವಿದ್ಯಾಪೀಠದ ಅಭಿವೃದ್ಧಿ ಹಾಗೂ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಬಳಸಿಕೊಳ್ಳಲು ಶ್ರೀಗಳು ಅವಕಾಶ ನೀಡುತ್ತಿದ್ದಾರೆ ಎಂದು ಹೇಳಿದರು.

ಈ ವಿದ್ಯಾಪೀಠದಲ್ಲಿ ವೈದಿಕ ಮತ್ತು ಲೌಕಿಕ ಎರಡೂ ರೀತಿಯ ಬೋಧನೆಗಳನ್ನು ಸಮನ್ವಯವಾಗಿ ನೀಡಲಾಗುತ್ತಿದೆ. ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಯೇ

3ನೇ ಪುಟಕ್ಕೆ

ಸಾಧು ವೇಷದಲ್ಲಿ ಬಂದು ಕಳ್ಳತನ



ಸಿಂಧನೂರು,ಮೇ.15- ಸಿಂಧನೂರು ನಗರದಲ್ಲಿ ಸಾಧು ವೇಷದಲ್ಲಿದ್ದ ಅಪರಿಚಿತ ವ್ಯಕ್ತಿ ಯೋರ್ವ ಅಂಗಡಿ ಮಾಲೀಕರಿಗೆ ಹೂ ನೀಡಿ. ಅರ್ಧ ತೋಲೆ ಬಂಗಾರ ಹಾಗೂ ಅಂಗಡಿಯಲ್ಲಿದ್ದ 10.500.ರೂ. ಹಣ ದೋಚಿಕೊಂಡು ಪರಾರಿಯಾದ ಘಟನೆ ಸಿಂಧನೂರು ನಗರದಲ್ಲಿ ತಡವಾಗಿ ಬೆಳಕಿಗೆ ಬಂದಿದೆ.

ನಗರದ ಕುಷ್ಟಗಿ ಮುಖ್ಯರಸ್ತೆಯಲ್ಲಿರುವ ಸಾಯಿ ಮೆಡಿಕಲ್ ಮತ್ತು ಜನರಲ್ ಸ್ಟೋರ್ ಮಾಲೀಕ ವಿಷ್ಣು ದತ್ತ ಮೋಹನ್ ದತ್ತ ಅವರು ಈ ಕುರಿತು ಶಹರ್ ಪೊಲೀಸ್ ಠಾಣೆಗೆ ಲಿಖಿತ ದೂರು ನೀಡಿದ್ದಾರೆ. ಸಾಧು ವೇಷ ಧರಿಸಿಕೊಂಡು ಭಿಕ್ಷುಕನಂತೆ ಸಂಚರಿಸುತ್ತಿದ್ದ ಅಪರಿಚಿತ ವ್ಯಕ್ತಿ. ಅಂಗಡಿ ಮುಂಭಾಗದಲ್ಲಿದ್ದ ನೀರಿನ ಕ್ಯಾನ್ ಬಳಿ ಬಂದು ನೀರು ಕುಡಿಯಲು ಕೇಳಿದ್ದಾನೆ. ಮಾನವೀಯತೆಯ ದೃಷ್ಟಿಯಿಂದ ಅಂಗಡಿ ಮಾಲೀಕರು. ತಮ್ಮ ಅಂಗಡಿಯೊಳಗಿನ ಫ್ರಿಡ್ಜ್ ನಲ್ಲಿದ್ದ ತಣ್ಣನೆಯ ನೀರನ್ನು ಕುಡಿಯಲು ನೀಡಿದ್ದಾರೆ.

ಈ ವೇಳೆ ಅಪರಿಚಿತ ವ್ಯಕ್ತಿ ತನ್ನ ಬಳಿ ಇದ್ದ ಎರಡು ಹೂಗಳನ್ನು ಅಂಗಡಿ ಮಾಲಕರ ಕೈಗೆ ನೀಡಿ ಮಾತಿನ ಮಂತ್ರದಿಂದ ಅವರನ್ನು. ಮರಳು ಮಾಡಿದ್ದಾನೆ ಎನ್ನಲಾಗಿದೆ. ಬಳಿಕೆ ಆತ ಹೇಳಿದಂತೆ ನಡೆದುಕೊಂಡ ಅಂಗಡಿ ಮಾಲಕ ಕೈಯಲ್ಲಿದ್ದ ಅರ್ಧ ತೊಲೆ ಬಂಗಾರದ ಆಭರಣ. ಅಂಗಡಿಯ ಗಲ್ಲಾ ಪೆಟ್ಟಿಗೆ ಎಲ್ಲಿದ್ದ. 10.500.ರೂ ದೋಚಿಕೊಂಡು ಪರಾರಿಯಾಗಿದ್ದಾನೆ.

ಸ್ವಲ್ಪ ಸಮಯದ ಬಳಿಕ ಮಾಲಕನಿಗೆ ಈ ಘಟನೆಯ ಬಗ್ಗೆ ಅರಿವಿಗೆ ಬಂದಾಗ. ಆರೋಪಿಯು ಅಲ್ಲಿಂದ ಪರಾರಿಯಾಗಿದ್ದನು. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಈ ಘಟನೆಯಲ್ಲಿ ಭಾಗಿಯಾದ ಸಾಧುಗಳ ರೂಪ ಧರಿಸಿದ ವ್ಯಕ್ತಿಯ ಭಾವಚಿತ್ರ ಸಿ ಸಿ ಟಿವಿಯಲ್ಲಿ ಸೆರೆಯಾಗಿದ್ದು ಆರೋಪಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ..

ಜಿಲ್ಲಾ ಎಸ್‌ಪಿ ಅವರಿಂದ ಬಸವರಾಜ ನಾಯಕರಿಗೆ ಪ್ರಶಂಸನಾ ಪತ್ರ



ರಾಯಚೂರು,ಮೇ.15- ಜಿಲ್ಲೆಯಲ್ಲಿನ ಸಾರ್ವಜನಿಕರ ಹಿತಾಸಕ್ತಿಗೆ ಸಂಬಂಧಿಸಿದಂತೆ ನೇತಾಜಿ ನಗರ ಪೊಲೀಸ್ ಠಾಣೆಯ ಪಿಎಸ್‌ಐ ಬಸವರಾಜ ನಾಯಕ ಉತ್ತಮ ಕಾರ್ಯವನ್ನು ಮೆಚ್ಚಿ ಅವರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಸು ಗಿರಿ ಅವರು ಗೌರವ ಪೂರ್ವಕವಾಗಿ ಪ್ರಶಂಸನಾ ಪತ್ರ ನೀಡಿ ಗೌರವಿಸಿದರು.

ಪಿಎಸ್‌ಐ ಬಸವರಾಜ ನಾಯಕ ಅವರು ಮಹಿಳೆ ಕಾಣೆ ಪ್ರಕರಣಗಳಲ್ಲಿ ಪತ್ತೆ ಹಾಗೂ 41/2026 ಮನೆಗಳ್ಳತನ ಪ್ರಕರಣದಲ್ಲಿ 1,26,000/-ರೂ ಬೆಲೆ ಬಾಳುವ ಬಂಗಾರದ ಮತ್ತು ಬೆಳ್ಳಿ ಆಭರಣಗಳ ಜಪ್ತಿ ಮಾಡಿ ಆರೋಪಿತರನ್ನು ಪತ್ತೆ, ವಿವಿಧೆಡೆ ಹೇಂಡ ವಿವಿಧ ಪ್ರಕರಣವನ್ನು ಬೇಧಿಸಿ ಉತ್ತಮವಾಗಿ ಕರ್ತವ್ಯ ನಿರ್ವಹಿಸಿ ಪೊಲೀಸ್ ಇಲಾಖೆಯ ಗೌರವ ತರುವ ಕೆಲಸ ಮಾಡಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಸು ಗಿರಿ ಪ್ರಶಂಸಿಂಸಿದರು.

ನಿಮ್ಮ ಕರ್ತವ್ಯನಿಷ್ಠೆ, ಸಮಯಪ್ರಜ್ಞೆ ಮತ್ತು ಸೇವಾಮನೋಭಾವವನ್ನು ಮೆಚ್ಚುತ್ತಾ ಇಲಾಖೆಯಲ್ಲಿ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಶ್ರಮವಹಿಸಿ ಇಲಾಖೆಯಲ್ಲಿನ ಇತರರಿಗೆ ಮಾರ್ಗದರ್ಶನವಾಗುವಂತೆ ಕೆಲಸ ಕಾರ್ಯಗಳನ್ನು ನಿರ್ವಹಿಸುವಂತೆ ಈ ಪ್ರಶಂಸನೀಯ ಪತ್ರವನ್ನು ನಿಮಗೆ ನೀಡಿದ್ದು ಇರುತ್ತದೆ ಎಂದು ಜಿಲ್ಲಾ ಎಸ್‌ಪಿ ಅರುಣಾಂಗ್ಸು ಗಿರಿ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.


ಡೆಂಗಿ ನಿಯಂತ್ರಣಕ್ಕಾಗಿ ಸಮುದಾಯದ ಸಹಭಾಗಿತ್ವ ಅತ್ಯಗತ್ಯ - ಡಾ.ಸುರೇದ್ರಬಾಬು



ನೀರು ತುಂಬುವ ಪರಿಕರಗಳಲ್ಲಿ ಸೊಳ್ಳೆ ಮರಿ ಕಂಡುಬಂದಲ್ಲಿ ತಕ್ಷಣ ಸ್ವಚ್ಛಗೊಳಿಸಿ, ನೀರು ತುಂಬಿದ ನಂತರ ಸರಿಯಾಗಿ ಮುಚ್ಚಳ ಮುಚ್ಚಿ, ಡೆಂಗ್ಯು ರೋಗ ತಡೆಯಬೇಕು ಎಂದು ಜಿಲ್ಲಾ ಅರೋಗ್ಯ ಅಧಿಕಾರಿ ಡಾ. ಸುರೇಂದ್ರ ಬಾಬು ಅವರು ಹೇಳಿದರು.

ಸಾಮಾನ್ಯವಾಗಿ ಅಡುಗೆ ಮನೆಯಲ್ಲಿ ಕುಡಿಯಲು ನೀರು ತುಂಬುವ ಪರಿಕರಗಳಿಗೆ ಸರಿಯಾಗಿ ಮುಚ್ಚಳ ಮುಚ್ಚುವ ಪದ್ಧತಿಯನ್ನು ಮನೆಯ ಹೊರಗೆ ಬಳಕೆಗಾಗಿ ನೀರು ತುಂಬುವ ಡ್ರಮ್, ಬ್ಯಾರೇಲ್, ಸಿಮೆಂಟ್ ತೊಟ್ಟಿ, ಕಲ್ಲಿನ ಡೋಣ , ಕೊಡ, ಮುಂತಾದ ಪರಿಕರಗಳಿಗೆ ಅನುಸರಿಸುವ ಜೊತೆಗೆ ಮನೆಯ ಸುತ್ತಲೂ ನೀರು ನಿಲ್ಲಬಹುದಾದ ಘನ ತ್ಯಾಜ್ಯ ವಸ್ತುಗಳಾದ, ತೆಂಗಿನ ಚಿಪ್ಪು, ಒಡೆದ ಬಕೆಟ್, ಕೊಡ, ಹಳೆಯ ಟೈರು, ಟಿನ್ ಸೇರಿದಂತೆ ಇತರೆ ವಸ್ತುಗಳನ್ನು ತೆರವುಗೊಳಿಸುವ ರೂಡಿ ಹಾಕಿಕೊಂಡಲ್ಲಿ ಹಾಗೂ ಯಾವುದೇ ಪರಿಕರಗಳಲ್ಲಿ ಸೊಳ್ಳೆ ಮರಿ (ಬಾಲದ ಹುಳು) ಕಂಡುಬಂದಲ್ಲಿ ತಕ್ಷಣ ಸ್ವಚ್ಛಗೊಳಿಸಿ, ನೀರು ತುಂಬಿದ ನಂತರ ಸರಿಯಾಗಿ ಮುಚ್ಚಳ ಮುಚ್ಚಿದಲ್ಲಿ ಡೆಂಗ್ಯು ಸೇರಿದಂತೆ ಸೊಳ್ಳೆಯಿಂದ ಹರಡುವ ರೋಗ ತಡೆಗೆ ಸಹಕಾರಿಯಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸ ್ ಂ ರ ೀ ೦ ದ ್ರ ಬಾ ಬು ತಿಳಿಸಿದರು.ಜಿಲ್ಲಾಡಳಿತ ಜಿಲ್ಲಾ ಪಂಚಾಯತ, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಎನ್‌ವಿಬಿಡಿಸಿಪಿ ವಿಭಾಗದ ಸಂಯೋಗದಲ್ಲಿ ಕೃಷ್ಣ ಸಭಾಂಗಣದಲ್ಲಿ ಜರುಗಿದ ರಾಷ್ಟ್ರೀಯ ಡೆಂಗ್ಯು ದಿನದ ಅಂಗವಾಗಿ ಜರುಗಿದ ಜಿಲ್ಲಾ ಮಟ್ಟದ ಕಾ ಯ ್ ಕ ್ರ ವ ್ ಂ ದ ್ ಲ್ಲಿ ವೈ ದ್ಯಾ ಧಿ ಕಾ ರಿ ಗ ್ ಳ ್ ಂ , ಸಿಬ್ಬಂದಿಯವರನ್ನು ಉದ್ದೇಶಿಸಿ ಮಾತನಾಡುತ್ತಾ, ರಾಜ್ಯ ಸರಕಾರದ ಮಾರ್ಗಸೂಚಿಯನ್ವಯ ಗ್ರಾಮ ಪಂಚಾಯತ, ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಪ್ರತಿ ಶುಕ್ರವಾರ ಲಾರ್ವಾ ಸಮೀಕ್ಷೆಯನ್ನು ಬಲಪಡಿಸಿ ಕೇವಲ ನೀರು ಸಂಗ್ರಹಕ ಪರಿಕರಗಳಲ್ಲದೆ ಹೂವಿನ ಕುಂಡಲ, ಫ್ರೀಜ್‌ನ ಹಿಂಭಾಗ, ಎರ್ ಕೂಲ್ರ್, ಮುಂತಾದವುಗಳ ಪರಿಶೀಲಿಸಿ, ಸ್ವಚ್ಛಗೊಳಿಸಲು ಜನತೆಗೆ ನಿರಂತರ ಜಾಗೃತಿ ನೀಡುತ್ತಿರುವುದರಿಂದ ಪ್ರಕರಣಗಳ ಸಂಖ್ಯೆ ಗ ್ ಣ ನೀ ಯ ್ ಂ ವಾ ಗಿ ನಿಯಂತ್ರಣಗೊಂಡಿದ್ದು, ಕನಿಷ್ಠ ವಾರಕ್ಕೊಮ್ಮೆ ಎಲ್ಲ ನೀರಿನ ಪರಿಕರಗಳನ್ನು ಚೆನ್ನಾಗಿ ತಿಕ್ಕಿ ತೊಳೆದು ಮುಚ್ಚಳ ಮುಚ್ಚುವ ರೂಡಿ ಅಳವಡಿಸಿಕೊಳ್ಳಲು ಸಮುದಾಯದ ಸಹಕಾರ ನಿರಂತರವಾಗಿರಲಿ ಎಂದು ತಿಳಿಸಿದರು.ಡಿಎಸ್‌ಓ ಹಾಗೂ ಎನ್‌ವಿಬಿಡಿಸಿಪಿ ಅಧಿಕಾರಿ ಡಾ. ಗಣೇಶ್ ಕೆ, ಮಾತನಾಡಿ ಡೆಂಗ್ಯು ಹರಡುವ ಈಡಿಸ್ ಈಜಿಪ್ಟೆ ಸೊಳ್ಳೆ ಶುದ್ಧ ನೀರಿನಲ್ಲಿ ಸಂತತಿ ವೃದ್ಧಿ ಮಾಡುವುದರಿಂದ ಮತ್ತು ಹಗಲು ಹೊತ್ತಿನಲ್ಲಯೇ ಕಚ್ಚುವುದರಿಂದ ಮನೆಯ ಒಳ ಹಾಗೂ ಹೊರ

ಮೂರನೇಯ ಪುಟಕ್ಕೆ



ಜನರ ಸಮಸ್ಯೆಗಳನ್ನು ಬಗೆಹರಿಸಲು ಸಹಕಾರ ಅಗತ್ಯ

ರಾಯಚೂರು,ಮೇ.16. ನಗರದಲ್ಲಿ ಜನರ ಸಮಸ್ಯೆಗ ಳನ್ನು ಬಗೆಹರಿಸಲು ಎಲ್ಲರ ಸಹಕಾರ ಅಗತ್ಯ ಎಂದು ಸದರ ಬಜಾರ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್ ಪೆಕ್ಟರ್ ದಾದಾವಲಿ ಕರೆ ನೀಡಿದರು.ಅವರು ನಗರದ ಸದರ ಬಜಾರ್ ಪೊಲಿ ಸ್ ಠಾಣೆಯಲ್ಲಿ ಮಾನವ ಹಕ್ಕು ಗಳ ಸಂಘದ ಸದಸ್ಯರ ಜತೆ ನಡೆ ದ ಸಭೆಯಲ್ಲಿ ಮಾತಾನಾಡಿದ ರು,ಜನರ ಬಾವನಗಳಿಗೆ ತಕ್ಕಂತೆ ಕಲಸ ಮಾಡುವ ಮೂಲಕ ತ ಮ್ಮ ಮೊದಲ ಪ್ರಯತ್ನ ಮಾ ಡುವಂತೆ ಮಾತಾನಾಡಿದರು.ಜ ನರು ಪೊಲೀಸ್ ಠಾಣೆಗಳು ಮೆಟ್ಟಲು ಹತ್ತಲು ಹಿಂಜರಿಯದೆ ಜನರ ಅಹವಾಲನ್ನು ಸ್ವೀಕರಿ ಸುವ ಮೂಲಕ ತಮ್ಮ ಕರ್ತವ್ಯ ನಿರ್ವಹಿಸಲು ಮುಂದಾಗಲು ತಿಳಿಸಿದರು.ಈ ಸಂದರ್ಭದಲ್ಲಿ ಮಾನವ ಹಕ್ಕುಗಳ ಸಂಘದ ಅದ್ಯಕ್ಷ ಮೆಹಿದೆ.ಮಾರುತಿ.ವಿ ಜಯ್.ರಶೀದೆ.ನರೇಶ್ ಭಾಗವಹಿಸಿದ್ದರು.

ಗುಡದನಾಳ ಗ್ರಾಮದಲ್ಲಿ ತೀವ್ರ ಕುಡಿಯುವ ನೀರಿನ ಸಂಕಷ್ಟ

ಸಮಸ್ಯೆ ಬಗೆಹರಿಸುವಂತೆ ಅಧಿಕಾರಿಗಳಿಗೆ ಗ್ರಾಮಸ್ಥರ ಮನವಿ

ಲಿಂಗಸುಗೂರು ಮೇ 15 ತಾಲೂಕಿನ ಹೊನ್ನಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಡದನಾಳ ಗ್ರಾಮದಲ್ಲಿ ತೀವ್ರ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದು, ಸಮಸ್ಯೆಯನ್ನು ತಕ್ಷಣ ಬಗೆಹರಿಸುವಂತೆ ಗ್ರಾಮಸ್ಥರು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗ ್ ಳಿಗೆ ಮನವಿ ಸಲ್ಲಿಸಿದರು.



ಗ್ರಾಮದಲ್ಲಿ ಹ ್ ಲ ವ ್ ರ ವ ್ ಷ ್ ಗ ್ ಳಿಂದ ಸ ್ ವ ್ ಂ ಪ ್ ಕ ್ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ಸಾರ್ವಜನಿಕರು ಸಂಕಷ್ಟ ಅನುಭವಿಸುತ್ತಿದ್ದು, ಬೇಸಿಗೆ ತೀವ್ರಗೊಂಡ ಹಿನ್ನೆಲೆ ನೀರಿನ ಅಭಾವ ಮತ್ತಷ್ಟು ಹೆಚ್ಚಾಗಿದೆ. ಮಹಿಳೆಯರು, ಯುವಕರು ಹಾಗೂ ಮಕ್ಕಳು ದೂರದ ಕೆರೆಗಳು ಮತ್ತು ಹೊಲಗಳಿಂದ ನೀರು ತಂದು ಜೀವನ ಸಾಗಿಸುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಗ್ರಾಮಸ್ಥರು ದೂರಿದರು.

ಈ ಕುರಿತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರು ಹಾಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗ ್ ಳಿಗೆ ಅನೇಕ ಬಾರಿ ಮೌಖಿಕ ಹಾಗೂ ಲಿಖಿತ ಮನವಿಗಳನ್ನು ಸ ್ ಲ್ಲಿಸಿದ ್ ದ ್ ರೂ ಯಾವುದೇ ಶಾಶ್ವತ ಪರಿಹಾರ ದೊರೆತಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದರು. ಗ್ರಾಮದಲ್ಲಿನ ಸಾರ್ವಜನಿಕ ನಳಗಳಿಗೆ ನಿಯಮಿತವಾಗಿ ನೀರು ಪೂರೈಸಿ ಸಮಸ್ಯೆ

ಮೂರನೇಯ ಪುಟಕ್ಕೆ

ಡಿಸಿಯಂ ಹುಟ್ಟು ಹಬ್ಬ-ನಿರಾಶ್ರಿತರಿಗೆ ಹಣ್ಣು ಹಂಪಲು ವಿತರಣೆ



ರಾಯಚೂರು ಮೇ.16. ರಾಜ್ಯದ ಉಪ ಮುಖ್ಯಮಂತ್ರಿ, ಕೆ.ಪಿ.ಸಿ.ಸಿ ಅದ್ಯಕ್ಷ ಡಿ.ಕೆ.ಶಿವ ಕುಮಾರ್ ಹುಟ್ಟು ಹಬ್ಬನ್ನು ಅಬಿಮಾನ ಬಳಗದ ವತಿಯಿಂ ದ ಆಚರಿಸಲಾಯಿತು.ನಗರದ ನಿರಾಶ್ರಿತರ ಕೇಂದ್ರದಲ್ಲಿ ಅಬಿ ಮಾನ ಬಳಗ ಅದ್ಯಕ್ಷ ಸುನಿಲ್ ಸಿಂಗ್ ನಿರಾಶ್ರಿತರಿಗೆ ಹಣ್ಣು ಹಂಪಲು ವಿತರಣೆ ಮಾಡಿ ಕಾರ್ಯಕ್ರಮವನ್ನು ಕೈಗೊಳ್ಳ ಲಾಯಿತು.ನಂತರ ಅವರಿಗೆ ಉಪಹಾರ ವ್ಯವಸ್ಥೆಯ ಮೂಲ ಕ ಜನ್ಮದಿನಾಚಾರಣೆ ನಡಿಯು ತು.ಈ ಸಂದರ್ಭದಲ್ಲಿ ರವಿ,ಸ ಯ್ಯದ್ ನಾಸಿರ್ ಪಾಷಾ,ಚಂದ್ರ ಶೇಖರರಾಮಕೋಟಿ,ಶಿವಕಾಂತ,ಚೇತನ್,ಪ್ರಸಾದ್,ಎಡಿಷನ್,ಸಿರಾಜ್,ಯಾಸಿನ್,ಜಾಕಿರ್ ಪಾಷಾ,ಮೆಹಿನ್ ಸೇರಿದಂತೆ ಅನೇಕ ಭಾಗವಹಿಸಿದ್ದರು

ಪೂರಕ ಮಾಹಿತಿಯೊಂದಿಗೆ ಹಾಜರಾಗಲು ಅಧಿಕಾರಿಗಳಿಗೆ ಜಿಪಂ ಸಿಇಒ ಸೂಚನೆ



ಬಳ್ಳಾರಿ,ಮೇ 16-

ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರು ಜಿಲ್ಲಾ ಪ್ರವಾಸ ಹಾಗೂ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದು, ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಎಲ್ಲಾ ಇಲಾಖಾ ಅಧಿಕಾರಿಗಳು ಕಡ್ಡಾಯವಾಗಿ ಪೂರಕ ಮಾಹಿತಿ ಮತ್ತು ಅಂಕಿ ಅಂಶಗಳೊಂದಿಗೆ ಸಭೆಗೆ ಹಾಜರಾಗಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿ ಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮೇ 18 ರಂದು ಕರ್ನಾಟಕ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ಆಯೋಗದ ಅಧ್ಯಕ್ಷರ ಭೇಟಿ ಹಿನ್ನಲೆ ಅಂಗವಾಗಿ ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಪೂರ್ವಭಾವಿ ಸಭೆ ನಡೆಸಿ ಅವರು ಮಾತನಾಡಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳ ಅಭಿವೃದ್ಧಿಗಾಗಿ ಮೀಸಲಿಟ್ಟ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನದ ಕಳೆದ ಮೂರು ವರ್ಷಗಳ ಪ್ರಗತಿ ವರದಿ ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ಕಾಮಗಾರಿಗಳ ವಿವರಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು ಎಂದು ತಿಳಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಎಸ್ಸಿ ಎಸ್ಪಿ-ಟಿಎಸ್ಪಿ ಅನುದಾನವನ್ನು ಯಾವುದೇ ಕಾರಣಕ್ಕೂ ವಿಳಂಬ ಮಾಡದೆ, ನಿಗದಿತ ಅವಧಿಯೊಳಗೆ ಸಮರ್ಪಕವಾಗಿ ಬಳಕೆ ಮಾಡಬೇಕು. ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಮತ್ತು ವಿತರಿಸಲಾದ ಸೌಲಭ್ಯಗಳ ಬಗ್ಗೆ ನಿಖರವಾದ ಅಂಕಿಅಂಶಗಳನ್ನು ಒದಗಿಸಬೇಕು ಎಂದು ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳ ಫಲಾನುಭವಿಗಳಿಗೆ ಯಾವುದೇ ಸೌಲಭ್ಯ ನೀಡುವಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಇದಕ್ಕಾಗಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ಆನ್‌ಲೈನ್ ಮೂಲಕವೇ ಅರ್ಜಿ ಆಹ್ವಾನಿಸಬೇಕು. ಇದಕ್ಕಾಗಿ 'ಎನ್‌ಐಸಿ' ಯುನಿಟ್ ಇದ್ದು, ಆನ್‌ಲೈನ್ ಪ್ರಕ್ರಿಯೆಗೆ ಅನುವು ಮಾಡಿಕೊಡಲಿದ್ದಾರೆ ಎಂದು ತಿಳಿಸಿದರು.

ಜಿಲ್ಲೆಯ ವಿವಿಧ ನಗರ-ಸ್ಥಳೀಯ ಸಂಸ್ಥೆಗಳಲ್ಲಿ ಎಸ್ಸಿ ಎಸ್ಪಿ-ಟಿಎಸ್ಪಿ ಅನುದಾನ ಬಳಕೆಯಾಗದೇ ಇರುವುದು ಕಂಡುಬಂದಿದ್ದು, ಸಂಬಂಧಿಸಿದ ಮುಖ್ಯಾಧಿಕಾರಿಗಳಿಗೆ ಹಾಗೂ ಜಿಲ್ಲಾ ನಗರಾಭಿವೃದ್ಧಿ ಇಲಾಖೆಯ ಯೋಜನಾ ನಿರ್ದೇಶಕರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಬೇಕು ಎಂದು ನಿರ್ದೇಶನ ನೀಡಿದರು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಮಾತನಾಡಿ, ಆಯೋಗದ ಅಧ್ಯಕ್ಷರ ಭೇಟಿಯ ಸಂದರ್ಭದಲ್ಲಿ ಸ್ಥಳೀಯ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ಸಂಘಟನೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಭೇಟಿ ಮಾಡಿ ತಮ್ಮ ಕುಂದು ಕೊರತೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಈ ಕುರಿತು ಸಾಕಷ್ಟು ಪ್ರಚಾರ ಕೈಗೊಳ್ಳಬೇಕು. ಆಯೋಗದ ಅಧ್ಯಕ್ಷರ ಭೇಟಿ ಮಾಹಿತಿ ಕುರಿತು ಜನಪ್ರತಿನಿಧಿಗಳಿಗೆ ಗಮನಕ್ಕೆ ತರಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಿಗೆ ಸೂಚಿಸಿದರು.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದಪ್ಪ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಾಷು ಮೋದ್ದಿನ್, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯಕ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಬೀದರನಲ್ಲಿ ಅಗ್ನಿವೀರ ಸೇನಾ ಭರ್ತಿ ರ‍್ಯಾಲಿ



ಬೀದರ,ಮೇ 16-

ಬೀದರ್‌ನಲ್ಲಿ ಜನೇವರಿ-2027 ರಲ್ಲಿ ಬಹುವರ್ಷಗಳ ನಂತರ ಅಗ್ನಿವೀರ ಸೇನಾ ಭರ್ತಿ ರ‍್ಯಾಲಿ ಜರುಗಲಿದ್ದು, ಬೀದರ ಜಿಲ್ಲೆಯ ಉದ್ಯೋಗಾಕಾಂಕ್ಷಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಇದರ ಲಾಭ ಪಡೆಯಬೇಕೆಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ತಿಳಿಸಿದರು.

ಅವರು ಶುಕ್ರವಾರ ಬೀದರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಈ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಾ, ಕಲ್ಯಾಣ ಕರ್ನಾಟಕದ ಆರು ಜಿಲ್ಲೆಗಳ ಯುವಕರು ಈ ಸೇನಾ ಭರ್ತಿ ರ‍್ಯಾಲಿಯಲ್ಲಿ ಪಾಲ್ಗೊಳ್ಳಲು ಅವಕಾಶ ಇದ್ದು, ಬೀದರ ಜಿಲ್ಲೆಯ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಬೀದರನ ನೆಹರು ಕ್ರೀಡಾಂಗಣದಲ್ಲಿ ಸೇನಾ ಭರ್ತಿ ರ‍್ಯಾಲಿ ಜರುಗಲಿದ್ದು, ರ‍್ಯಾಲಿ ಯಶಸ್ವಿಗೊಳ್ಳಲು ಜಿಲ್ಲಾಡಳಿತದಿಂದ ಎಲ್ಲ ರೀತಿಯ ಸಹಕಾರ ನೀಡುವುದುದಾಗಿ ತಿಳಿಸಿದರು. ಅಗ್ನಿವೀರ ಸೇನಾ ಭರ್ತಿ ರ‍್ಯಾಲಿ ಬಗ್ಗೆ ಮಾತನಾಡಿದ ಕರ್ನಲ್ ಅಶ್ವಿನಿ ಅವರು ಬೀದರನಲ್ಲಿ 5 ವರ್ಷಗಳ ನಂತರ ರ‍್ಯಾಲಿ ಜರುಗಲಿದೆ. ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಯುವಕರು ವಿಶೇಷವಾಗಿ ಬೀದರ ಜಿಲ್ಲೆಯ ಯುವಕರು ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಬೀದರ ಜಿಲ್ಲೆಯ ಅಭ್ಯರ್ಥಿಗಳು ತೀರ ಕಡಿಮೆ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆ, ಯುವರಲ್ಲಿ ಸೇನಾ ಭರ್ತಿ ಬಗ್ಗೆ ಹೆಚ್ಚಿನ ಅರಿವು ಪ್ರಚಾರ ಅಗತ್ಯವಿದೆ ಎಂದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ ಪೂಜಾರಿ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.



ಉದ್ಯೋಗ ಖಾತ್ರಿ ಕಾಮಗಾರಿ ಪರಿಶೀಲಿಸಿದ ಇಓ ಬಸವರಾಜ ಸಜ್ಜನ್

ಸುರಪುರ,ಮೇ 16-

ತಾಲ್ಲೂಕಿನ ಅರಕೇರಾ (ಕೆ) ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿಜಾಸಪುರ ಗ್ರಾಮದ ಬಳಿ ನಡೆದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಅಡಿಯಲ್ಲಿ ನಡೆದ ಕೆನಾಲ್ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಸಜ್ಜನ್ ಭೇಟಿ ನೀಡಿ ಕಾಮಗಾರಿಯ ಪ್ರಗತಿ ಹಾಗೂ ಸ್ಥಳದಲ್ಲಿನ ಮೂಲಭೂತ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕೂಲಿ ಕಾರ್ಮಿಕರೊಂದಿಗೆ ಸಂವಾದ ನಡೆಸಿ ಮಾತನಾಡಿ, ನರೇಗಾ ಯೋಜನೆಯಡಿ ದೊರೆಯುವ ಸೌಲಭ್ಯಗಳು, ನಿಗದಿತ ಕೆಲಸದ ಅವಧಿ, ಕೂಲಿ ಪಾವತಿ ವಿಧಾನ ಹಾಗೂ ಕಾಮಗಾರಿಯ ಗುಣಮಟ್ಟ ಕಾಪಾಡುವ ಕುರಿತು ಮಾಹಿತಿ ನೀಡಿದರು. ಜೊತೆಗೆ ಕೆಲಸದ ಸ್ಥಳದಲ್ಲಿ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಹಾಗೂ ಪ್ರತಿದಿನ ಹಾಜರಾತಿ ದಾಖಲಿಸುವ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು.

ಕೂಲಿ ಕಾರ್ಮಿಕರ ಅನುಕೂಲಕ್ಕಾಗಿ ಕೆಲಸದ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಫಸ್ಟೆಡ್ ಕಿಟ್ ವ್ಯವಸ್ಥೆಯನ್ನು ಪರಿಶೀಲಿಸಿ, ಅವುಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸಿದರು.

ಕಾಮಗಾರಿಯಲ್ಲಿ ತೊಡಗಿಸಿಕೊಂಡಿದ್ದ ಕಾರ್ಮಿಕರಿಗೆ ಸಮಯಕ್ಕೆ ಸರಿಯಾಗಿ ಕೆಲಸ ನಿರ್ವಹಿಸುವುದು, ಕಾಮಗಾರಿಯನ್ನು ಗುಣಮಟ್ಟದೊಂದಿಗೆ ಪೂರ್ಣಗೊಳಿಸುವುದರ ಕುರಿತು ಸೂಚಿಸಲಾಯಿತು. ಸ್ಥಳದಲ್ಲಿದ್ದ ಮೇಟುಗಳೊಂದಿಗೆ ಚರ್ಚಿಸಿ ಕಾಮಗಾರಿಯ ಪ್ರಗತಿ, ಕಾರ್ಮಿಕರ ಹಾಜರಾತಿ ಹಾಗೂ ಲೇಬರ್ ಎಂಗೇಜ್ ಕುರಿತು ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ತಾಂತ್ರಿಕ ಸಂಯೋಜಕರಾದ ಶಿವಯೋಗಿ ಹಿರೇಮಠ, ತಾಂತ್ರಿಕ ಸಹಾಯಕರಾದ ಭರತ,ಐಇಸಿ ಮಲ್ಲಿಕಾರ್ಜುನ ದೇವಾಪುರ,ಮೇಟುಗಳು ಹಾಗೂ ಕೂಲಿ ಕಾರ್ಮಿಕರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಅಧ್ಯಯನ ದೇಶದ ಅಭಿವೃದ್ಧಿಗೆ ಪೂರಕವಾಗಲಿ: ಡಾ.ಶರಣಪ್ಪ ಎಸ್.ಡಿ.

ಜ್ಞಾನೋತ್ಸವ-2026 ಟೆಕ್ನೋ-ಕಲ್ಚರಲ್ ಫೆಸ್ಟ್‌ಗೆ ಚಾಲನೆ



ಕಲಬುರಗಿ,ಮೇ 16-

ವಿದ್ಯಾರ್ಥಿಗಳು ಕೇವಲ ವೈಯಕ್ತಿಕ ಸಾಧನೆಗಾಗಿ ಮಾತ್ರ ಅಧ್ಯಯನ ಮಾಡಬಾರದು. ಅವರ ಶಿಕ್ಷಣವು ಕುಟುಂಬ ಅಥವಾ ಸಮಾಜಕ್ಕೆ ಸೀಮಿತವಾಗದೇ ದೇಶದ ಅಭಿವೃದ್ಧಿಗೆ ಸಹಾಯಕವಾಗಬೇಕು ಎಂದು ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದ ಶರಣಬಸವ ವಿಶ್ವವಿದ್ಯಾಲಯ ಆವರಣದಲ್ಲಿ ಶುಕ್ರವಾರ ನಡೆದ ಎರಡು ದಿನಗಳ ಜ್ಞಾನೋತ್ಸ ವ-2026 ಟೆಕ್ನೋ-ಕಲ್ಚರಲ್ ಫೆಸ್ಟ್ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಜ್ಞಾನೋತ್ಸ ವ-2026 ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ನಾವೀನ್ಯತೆ, ಸ್ನೇಹಭಾವ ಮತ್ತು ಒಗ್ಗಟ್ಟನ್ನು ಬೆಳೆಸುವ ವೇದಿಕೆಯಾಗಿದೆ. ಇಂತಹ ಉತ್ಸ ವಗಳು ವಿದ್ಯಾರ್ಥಿಗಳಿಗೆ ಹೊಸ ಚಿಂತನೆ ಮತ್ತು ಉತ್ಸಾ ಹವನ್ನು ನೀಡುತ್ತವೆ ಎಂದು ಹೇಳಿದರು.

ಕಲೆ, ವಿಜ್ಞಾನ ಹಾಗೂ ವಾಣಿಜ್ಯ ಸೇರಿದಂತೆ ಯಾವುದೇ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಲು ವಿದ್ಯಾರ್ಥಿಗಳು ಅಸಾಧಾರಣ ದೃಷ್ಟಿಕೋನವನ್ನು ಹೊಂದಿರಬೇಕು. ತಮ್ಮ ಸಾಮರ್ಥ್ಯವನ್ನು ಅಧ್ಯಯನದ ಮೂಲಕ ಸಾಬೀತುಪಡಿಸಿ, ಕನಸುಗಳನ್ನು ನನಸಾಗಿಸಿಕೊಳ್ಳಲು ನಿರಂತರ ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸ್ಥಾಪಿಸಿದ್ದ ನಾವೀನ್ಯತೆ ಹಾಗೂ ಮಾರ್ಕೆಟಿಂಗ್ ಮಳಿಗೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ''ಯಾವಾಗಲೂ ವಿಶಾಲವಾಗಿ ಯೋಚಿಸಿ. ನಾನು ಮತ್ತು ನನ್ನ ಕುಟುಂಬ ಎಂಬ ಸೀಮಿತ ಚಿಂತನೆಯಿಂದ ಹೊರಬಂದು ಜಾಗತಿಕ ನಾಯಕರು, ಸಂಶೋಧಕರು, ಇಂಜಿನಿಯರ್‌ಗಳು, ಶಿಕ್ಷಕರು ಹಾಗೂ ವೈದ್ಯರಾಗಿ ಬೆಳೆದು ದೇಶಕ್ಕೆ ಕೊಡುಗೆ ನೀಡಬೇಕು'' ಎಂದು ಪ್ರೇರೇಪಿಸಿದರು. ಸಮಯದ ಮಹತ್ವವನ್ನು ಉಲ್ಲೇಖಿಸಿದ ಅವರು, ಸಮಯ ಅಮೂಲ್ಯವಾದುದು. ಅದನ್ನು ವ್ಯರ್ಥ ಮಾಡದೆ ಸದುಪಯೋಗಪಡಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇದೇ ವೇಳೆ ಸಂಚಾರಿ ನಿಯಮಗಳ ಪಾಲನೆ ಕುರಿತು ಜಾಗೃತಿ ಮೂಡಿಸಿದ ಆಯುಕ್ತರು, ಎಲ್ಲರೂ ತಪ್ಪದೇ ಹೆಲ್ಮೆಟ್ ಹಾಗೂ ಸೀಟ್ ಬೆಲ್ಟ್ ಧರಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಸಂಭ್ರಮ, ಸಡಗರ ಮನೆಮಾಡಿದ್ದು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉತ್ಸಾ ಹದಿಂದ ಭಾಗವಹಿಸಿದ್ದರು. ವಿಶ್ವವಿದ್ಯಾಲಯ ಆವರಣದಲ್ಲಿ ಉತ್ಸ ವದ ವಾತಾವರಣ ಕಂಗೊಳಿಸುತ್ತಿತ್ತು.

ಶರಣಬಸವೇಶ್ವರ ಸಂಸ್ಥಾನದ 9ನೇ ಮಹಾದಾಸೋಹ ಪೀಠಾಧಿಪತಿಗಳಾದ ಪೂಜ್ಯ ದೊಡ್ಡಪ್ಪ ಅಪ್ಪಾಜಿ ಜ್ಞಾನೋತ್ಸ ವ-2026 ಟೆಕ್ನೋ-ಕಲ್ಚರಲ್ ಫೆಸ್ಟ್ ಉದ್ಘಾಟಿಸಿದರು. ಕಾರ್ಯಕ್ರಮವು ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಡಾ. ದಾಕ್ಷಾಯಿಣಿ ಅವ್ವಾಜಿ ಅವರ ಘನ ಉಪಸ್ಥಿತಿಯಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ, ಉಪಕುಲಪತಿ ಪ್ರೊ. ಅನಿಲಕುಮಾರ ಬಿಡವೆ, ನಿರ್ದೇಶಕ ಪ್ರೊ. ವಿ.ಡಿ. ಮೈತ್ರಿ, ಕುಲಸಚಿವ (ಮೌಲ್ಯಮಾಪನ) ಡಾ. ಎಸ್.ಎಚ್. ಹೊನ್ನಳ್ಳಿ, ಡೀನ್ ಡಾ. ಶಿವಕುಮಾರ ಜವಳಿಗಿ, ಹಣಕಾಸು ಅಧಿಕಾರಿ ಡಾ.ಕಿರಣ ಮಾಕಾ ಸೇರಿದಂತೆ ವಿವಿಧ ವಿಭಾಗಗಳ ಡೀನರು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಕುಲಸಚಿವ ಡಾ. ಲಕ್ಷ್ಮೀ ಪಾಟೀಲ ಮಾಕಾ ಅತಿಥಿಗಳನ್ನು ಸ್ವಾಗತಿಸಿದರು. ಪ್ರೊ. ಶೃತಿ ಹಾಗೂ ಪ್ರೊ. ಚೇತನಾ ಕಾರ್ಯಕ್ರಮ ನಿರೂಪಿಸಿದರು.

ಜ್ಞಾನೋತ್ಸ ವ-2026 ಅಂಗವಾಗಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಸ್ಥಾಪಿಸಿದ್ದ ಮಳಿಗೆಗಳನ್ನು ಪೂಜ್ಯ ದೊಡ್ಡಪ್ಪ ಅಪ್ಪಾಜಿಯವರು ಉದ್ಘಾಟಿಸಿದರು.

ಪಿಂಚಣಿ ವಿಲೇವಾರಿ ವೇಗಗೊಳಿಸಲು ಕ್ರಮ; ಶೀಘ್ರದಲ್ಲೇ ಡಿಜಿಟಲೀಕರಣ ವ್ಯವಸ್ಥೆ ಜಾರಿ- ಸಚಿನ್ ಕೃಷ್ಣ ಕೌಶಿಕ್



ಬಳ್ಳಾರಿ,ಮೇ 16-

ಪಿಂಚಣಿ ವಿಲೇವಾರಿ ಪ್ರಕ್ರಿಯೆ ಯನ್ನು ಸಂಪೂರ್ಣವಾಗಿ ಡಿಜಿಟಲೀ ಕರಣಗೊಳಿಸಲು ಸಿದ್ಧತೆ ನಡೆಸಲಾ ಗುತ್ತಿದ್ದು, ಶೀಘ್ರದಲ್ಲೇ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ ಎಂದು ಡೆಪ್ಯುಟಿ ಅಕೌಂಟ್ ಜನರಲ್ (ಪಿಂಚಣಿ ವಿಭಾಗ) ಸಚಿನ್ ಕೃಷ್ಣ ಕೌಶಿಕ್ ಅವರು ಹೇಳಿದರು.

ಅಕೌಂಟೆಂಟ್ ಜನರಲ್ ಕಚೇರಿ ಬೆಂಗಳೂರು ಹಾಗೂ ಖಜಾನೆ ಇಲಾಖೆ ಬೆಂಗಳೂರು, ಖಜಾನೆ ಇಲಾಖೆ ಬಳ್ಳಾರಿ ಇವರ ಸಹಯೋ ಗದಲ್ಲಿ ನಗರದ ತಾಲ್ಲೂಕು ಆಡಳಿತ ಭವನದ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಪಿಂಚಣಿ ಅದಾ ಲತ್, ಸಾಮಾನ್ಯ ಭವಿಷ್ಯ ನಿಧಿ ಅದಾ ಲತ್ ಹಾಗೂ ಲೆಕ್ಕಪತ್ರ ಸಮಸ್ಯೆಗಳ ಕುರಿತು ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಿವೃತ್ತ ಸರ್ಕಾರಿ ನೌಕರರು ತಮ್ಮ ಪಿಂಚಣಿ ಸೌಲಭ್ಯಗಳಿಗಾಗಿ ಕಚೇರಿ ಯಿಂದ ಕಚೇರಿಗೆ ಅಲೆಯುವುದನ್ನು ತಪ್ಪಿಸಲು ಮತ್ತು ವಿಳಂಬವಿಲ್ಲದೆ ಸೌಲಭ್ಯ ಒದಗಿಸಲು ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ಈ ಹಿಂದೆ ಪಿಂಚಣಿ ಮಂಜೂರಾತಿಗೆ ದೀರ್ಘಕಾಲ ತೆಗೆದುಕೊಳ್ಳಲಾ ಗುತ್ತಿತ್ತು. ಆದರೆ ಕಳೆದ ಐದಾರು ತಿಂಗಳಿನಿಂದ ಪ್ರಕ್ರಿಯೆಯನ್ನು ವೇಗಗೊಳಿಸಲಾಗಿದ್ದು, ಗರಿಷ್ಠ 30 ರಿಂದ 45 ದಿನಗಳೊಳಗೆ ವಿಲೇವಾರಿ ಮಾಡಲು ಪ್ರಯತ್ನಿಸಲಾಗುತ್ತಿದೆ ಎಂದರು.

ಏಪ್ರಿಲ್ 1ರ ವೇಳೆಗೆ ಕೇವಲ 15 ಮೂಲ ಪ್ರಕರಣಗಳು ಮತ್ತು 221 ವಿಭಾಗೀಯ ಪ್ರಕರಣಗಳು ಬಾಕಿ ಇದ್ದವು. ಏಪ್ರಿಲ್ 25ರ ಸುಮಾರಿಗೆ ಸುಮಾರು 9,000 ಹೊಸ ಪ್ರಕರಣಗಳು ಬಂದಿದ್ದು, ಕಳೆದ ಒಂದು ತಿಂಗಳ ಅವಧಿಯಲ್ಲಿ ಒಟ್ಟು 30, 000 ಪಿಂಚಣಿ ಪ್ರಕರಣಗಳನ್ನು ಯಶ ಸ್ವಿಯಾಗಿ ಇತ್ಯರ್ಥಪಡಿಸಲಾಗಿದೆ ಎಂದು ತಿಳಿಸಿದರು.

ಇಲಾಖೆಯಲ್ಲಿ ಶೇ. 50 ರಷ್ಟು ಸಿಬ್ಬಂದಿ ಕೊರತೆ ಇದ್ದರೂ ಸಹ, ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಶನಿವಾರ ಹಾಗೂ ಭಾನುವಾರಗಳ ರಜೆ ದಿನಗಳಲ್ಲಿ ಕೆಲಸ ಮಾಡುವ ಮೂಲಕ ಬಾಕಿ ಪ್ರಕರಣಗಳನ್ನು ವಿಲೇವಾರಿ ಮಾಡಿದ್ದಾರೆ. ಮುಂದಿನ 2-3 ತಿಂಗಳುಗಳಲ್ಲಿ ಇಡೀ ವ್ಯವಸ್ಥೆಯನ್ನು ಸಂಪೂರ್ಣ ಡಿಜಿಟಲೀ ಕರಣ ಮಾಡುವ ಗುರಿ ಹೊಂದ ಲಾಗಿದೆ. ಇದರಿಂದ ಪಿಂಚಣಿದಾರರು ತಮ್ಮ ಪಿಪಿಒ ಅನ್ನು ಆನ್‌ಲೈನ್ ಮೂಲಕವೇ ಡೌನ್‌ಲೋಡ್ ಮಾಡಿ ಕೊಳ್ಳಬಹುದು ಮತ್ತು ಪಾವತಿಗಾಗಿ ಖಜಾನೆಗೆ ನೇರವಾಗಿ ಸಲ್ಲಿಸಬಹುದು. ಈ ಪ್ರಕ್ರಿಯೆಯಿಂದಾಗಿ ಸ್ಪೀಡ್ ಪೋಸ್ಟ್ ಮೂಲಕ ಕಳುಹಿ ಸುವ ವಿಳಂಬ ತಪ್ಪಲಿದೆ ಎಂದರು.

ಬಳ್ಳಾರಿ ಮತ್ತು ಕಲಬುರಗಿ ವಿಭಾಗದ ಜಿಲ್ಲೆಗಳಲ್ಲಿ ಸಾಮಾನ್ಯ ವಾಗಿ ನವೆಂಬರ್-ಡಿಸೆಂಬರ್ ಅವಧಿಯಲ್ಲಿ ನಡೆಸಲಾಗುತ್ತಿದ್ದ ಪಿಂಚಣಿ ಅದಾಲತ್‌ಗಳನ್ನು ಈ ಬಾರಿ ಬೇಸಿಗೆಯಲ್ಲೇ ಆಯೋಜಿ ಸಲಾ ಗಿದೆ. ವಿಳಂಬವಾಗುತ್ತಿರುವ ಕೆಲವು ಪ್ರಕರಣಗಳನ್ನು ಆದಷ್ಟು ಬೇಗ ಇತ್ಯರ್ಥಪಡಿಸಲು ಕನಿಷ್ಠ 15 ದಿನಗಳ ಗುರಿಯನ್ನು ಹಾಕಿಕೊಳ್ಳಲಾಗಿದೆ ಎಂದರು.

ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಮಲ್ಲೇಶಪ್ಪ ಅವರು ಮಾತನಾಡಿ, ಪಿಂಚಣಿಗಾಗಿ ಅರ್ಜಿ ಸಲ್ಲಿಸಿದರೂ ಆರು ತಿಂಗಳಿಂದ ಒಂದು ವರ್ಷದವರೆಗೆ ವಿಳಂಬವಾಗುತ್ತಿದೆ. ಇದು ತಾಂತ್ರಿಕ ಸಮಸ್ಯೆ ಯೋ ಅಥವಾ ಸರ್ಕಾರದ ಮಟ್ಟದ ವಿಳಂಬವೋ ತಿಳಿಯುತ್ತಿಲ್ಲ. ಅರ್ಜಿ ಸಲ್ಲಿಸಿದ 1 ರಿಂದ 3 ತಿಂಗಳೊಳಗೆ ಪ್ರಕ್ರಿಯೆ ಪೂರ್ಣಗೊಳ್ಳಬೇಕು. ಜೀವಿತ ಪ್ರಮಾಣಪತ್ರ ಸಲ್ಲಿಸುವ ಪ್ರಕ್ರಿಯೆಯನ್ನು ಸರಳಗೊಳಿಸ ಬೇಕು. ಬ್ಯಾಂಕ್ ಮತ್ತು ಇಲಾಖೆಗಳ ನಡುವೆ ಅಲೆದಾಡುವುದನ್ನು ತಪ್ಪಿಸಿ, ನೇರವಾಗಿ ಬ್ಯಾಂಕ್ ಮಟ್ಟದಲ್ಲೇ ಕೆಲಸಗಳು ಸುಗಮವಾಗಿ ನಡೆಯುವಂತಾಗಬೇಕು ಎಂದರು.

ಬ್ಯಾಂಕ್ ಗಳಲ್ಲಿ ವಯಸ್ಸಾ ದ ಪಿಂಚಣಿದಾರರು ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಇದೆ. ಹಾಗಾಗಿ, ಪಿಂಚಣಿದಾರರಿಗಾಗಿಯೇ ಬ್ಯಾಂಕಿನಲ್ಲಿ ಪ್ರತ್ಯೇಕ ಕೌಂಟರ್ ವ್ಯವಸ್ಥೆ ಮಾಡಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ನಿವೃತ್ತ ಪಿಂಚಣಿ ದಾರರು ತಮ್ಮ ಸಮಸ್ಯೆಗಳನ್ನು ಅಹವಾಲುಗಳ ಮೂಲಕ ಸಲ್ಲಿಸಿದರು. ಕಾಲಮಿತಿಯಲ್ಲಿ ಇತ್ಯರ್ಥಗೊಳಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಹಾಲೇ ಖಪಾಲರ ಕಚೇರಿಯ ಸೀನಿಯರ್ ಡಿ.ಎ.ಜಿ ಯಶೋದಾ, ಬೆಂಗಳೂರು ಮಹಾಲೇಖಪಾಲರ ಕಚೇರಿಯ ಸೀನಿಯರ್ ಅಕೌಂಟ್ಸ್ ಆಫೀಸರ್ ನಾಗಜ್ಯೋತಿ, ಅಕೌಂಟ್ಸ್ ಆಫೀಸರ್ ಶ್ರೀಕಾಂತ್ ಎಂ.ಜೆ., ಜಿಲ್ಲಾ ಖಜಾನೆ ಬಳ್ಳಾರಿಯ ಉಪ ನಿರ್ದೇಶಕ ಶೇಖರಪ್ಪ, ಸಹಾಯಕ ಖಜಾನಾಧಿಕಾರಿ ಪ್ರಭು ಮತ್ತು ಸಣ್ಣ ಉಳಿತಾಯ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಹೊನ್ನೂರಪ್ಪ ಸೇರಿದಂತೆ ವಿವಿಧ ಬ್ಯಾಂಕ್ ಗಳ ಮುಖ್ಯಸ್ಥರು, ನಿವೃತ್ತ ಪಿಂಚಣಿ ದಾರರು ಹಾಗೂ ಇತರರು ಉಪಸ್ಥಿತರಿದ್ದರು.

ಸಂವಿಧಾನದ ಅರಿವು ಮೂಡಿಸುವ ಕೆಲಸ ಅಗತ್ಯ: ಸಿದ್ಧಲಿಂಗ ಮಹಾಸ್ವಾಮಿಗಳು



ಕಲಬುರಗಿ,ಮೇ 16-

ಪುರೋಹಿತಶಾಹಿಯ ಕಪಿಮುಷ್ಠಿಯಲ್ಲಿ ಸಿಲುಕಿ ಮೂಢನಂಬಿಕೆಗಳಲ್ಲಿ ಮುಳುಗಿರುವ ಜನರಿಗೆ ಅಂಬೇಡ್ಕರ್ ಹಾಗೂ ಸಂವಿಧಾನದ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುವ ಮೂಲಕ ಸಮಾಜದಲ್ಲಿ ಪ್ರಜ್ಞೆ ಮೂಡಿಸಬೇಕು ಎಂದು ನೆಲೋಗಿ ವಿರಕ್ತಮಠದ ಸಿದ್ದಲಿಂಗ ಮಹಾಸ್ವಾಮಿಗಳು ಹೇಳಿದರು.

ಜೇವರ್ಗಿ ಪಟ್ಟಣದಲ್ಲಿ ತಥಾಗತ ಗೌತಮ ಬುದ್ಧರ ಮೂರ್ತಿ ಪ್ರತಿಷ್ಠಾಪನೆ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸ ವ ಅಂಗವಾಗಿ ಜಯಂತ್ಯೋತ್ಸ ವ ಸಮಿತಿ ವತಿಯಿಂದ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ''ಡಾ. ಅಂಬೇಡ್ಕರ್ ಅರಿವು ಉತ್ಸ ವ'' ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

800 ವರ್ಷ ಮೊಗಲರು ಹಾಗೂ 200 ವರ್ಷ ಬ್ರಿಟಿಷರು ಆಳಿದರೂ ದೇಶದಲ್ಲಿ ಜಾತೀಯತೆ, ಅಸ್ಪೃಶ್ಯತೆ ಮತ್ತು ಮೂಢನಂಬಿಕೆಗಳು ಮುಂದುವರಿದಿವೆ. ''ರಾಮಬಾಣಕ್ಕೆ ಭೀಮಬಾಣವೇ ಮದ್ದು'' ಎಂದು ಅವರು ಹೇಳಿದರು.

ಮುಖ್ಯ ಭಾಷಣಕಾರರಾಗಿದ್ದ ಚಿಂತಕ ಸುರೇಶ್ ಗೌತಮ ಮಾತನಾಡಿ, ಡಾ. ಅಂಬೇಡ್ಕರ್ ಕೇವಲ ದಲಿತರಿಗಾಗಿ ಮಾತ್ರವಲ್ಲ, ಮಹಿಳೆಯರು ಹಾಗೂ ಹಿಂದುಳಿದ ವರ್ಗಗಳ ಏಳಿಗೆಗಾಗಿ ಹೋರಾಡಿದ ಮಹಾನ್ ನಾಯಕರು ಎಂದು ಹೇಳಿದರು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ದೇಶದ ಎಲ್ಲಾ ಸಮಸ್ಯೆಗಳಿಗೆ ಬ್ರಿಟಿಷರೇ ಕಾರಣ ಎಂಬ ಭಾವನೆ ಇತ್ತಾದರೂ, ಸಮಾಜದಲ್ಲಿನ ಶ್ರೇಣಿಕೃತ ವ್ಯವಸ್ಥೆಯೂ ಶೋಷಣೆಗೆ ಪ್ರಮುಖ ಕಾರಣ ಎಂದು ಅಂಬೇಡ್ಕರ್ ಅರಿತು ಅದರ ವಿರುದ್ಧ ಹೋರಾಟ ನಡೆಸಿದರು. ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಮೂಲಕ ಸಮಾನ ಸಮಾಜ ನಿರ್ಮಿಸಬೇಕು ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ವೈದ್ಯಕೀಯ, ಸಂಗೀತ ಹಾಗೂ ಶೈಕ್ಷಣಿಕ ಕ್ಷೇತ್ರದ ಸಾಧಕರನ್ನು ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಇದಕ್ಕೂ ಮೊದಲು ಪಟ್ಟಣದ ವಿಜಯಪುರ ಕ್ರಾಸ್‌ನಿಂದ ಗೌತಮ ಬುದ್ಧರ ಮೂರ್ತಿಯನ್ನು ಮೆರವಣಿಗೆಯ ಮೂಲಕ ಕರೆತಂದು ಅಂಬೇಡ್ಕರ್ ಭವನದಲ್ಲಿ ಪ್ರತಿಷ್ಠಾಪಿಸಲಾಯಿತು. ಮೆರವಣಿಗೆಯನ್ನು ಜಿಪಂ ಮಾಜಿ ಸದಸ್ಯ ಚಂದ್ರಶೇಖರ ಹರನಾಳ ಉದ್ಘಾಟಿಸಿದರು.

ಅಣದೂರು ಬುದ್ಧ ವಿಹಾರದ ಭಂತೆ ವರಜ್ಯೋತಿ ಹಾಗೂ ಇನ್ನಿತರ ಭಂತೇಜಿಗಳು ಸಾನ್ನಿಧ್ಯ ವಹಿಸಿದ್ದರು. ಜಿಪಂ ಮಾಜಿ ಸದಸ್ಯ ಶಾಂತಪ್ಪ ಕೂಡಲಗಿ ಉದ್ಘಾಟಿಸಿದರು.

ಮುಖ್ಯ ಅತಿಥಿಯಾಗಿದ್ದ ಅಖಿಲ ಭಾರತ ವೀರಶೈವ, ಲಿಂಗಾಯತ ಸಮಾಜದ ರಾಜ್ಯ ಸದಸ್ಯ ರಾಜಶೇಖರ ಸೀರಿ ಮಾತನಾಡಿದರು. ದಸಂಸ ರಾಜ್ಯ ಸಂಚಾಲಕರಾದ ಅರ್ಜುನ ಭದ್ರೆ, ಮರೆಪ್ಪ ಹಳ್ಳಿ, ಜಿಪಂ ಮಾಜಿ ಸದಸ್ಯ ಗುರುಲಿಂಗಪ್ಪಗೌಡ ಮಾಲಿಪಾಟೀಲ ಪ್ರಮುಖರಾದ ಚನ್ನಮಲ್ಲಯ್ಯ ಹಿರೇಮಠ, ಬಾಪೂಗೌಡ ಪಾಟೀಲ ಬಿರಾಳ, ವಸಂತ ನರಿಬೋಳ, ಕೆರೆಪ್ಪ ಹಿಪ್ಪರಗಿ, ಸುಭಾಷ ಚನ್ನೂರ, ಭೀಮರಾಯ ಜನಿವಾರ ಮತ್ತಿತರರು ವೇದಿಕೆಯಲ್ಲಿದ್ದರು. ಜಯಂತ್ಯುತ್ಸ ವ ಸಮಿತಿ ಅಧ್ಯಕ್ಷ ಪುಂಡಲೀಕ ಗಾಯಕವಾಡ ಅಧ್ಯಕ್ಷತೆ ವಹಿಸಿದ್ದರು. ಪಂಡಿತ ಮದಗುಣಕಿ, ಅನಿಲ್ ಟೆಂಗಳಿ, ಡಾ. ಅಶೋಕ ದೊಡ್ಡಮನಿ, ನಿಜಲಿಂಗ ದೊಡ್ಡಮನಿ, ವಿಠಲ್ ಚಿಕಣಿ, ಮರೆಪ್ಪ ಬೇಗಾರ ಸೇರಿದಂತೆ ನೂರಾರು ಜನ ಭಾಗವಹಿಸಿದ್ದರು.

ಶಾಂತಿ, ಕರುಣೆ, ಸಮಾನತೆ ಸಾರಿದ ಮಹನೀಯರು

ಪತ್ರಕರ್ತ ಹಾಗೂ ಸಾಹಿತಿ ಡಾ. ಶಿವರಂಜನ ಸತ್ಯಂಪೇಟೆ ಮಾತನಾಡಿ, ಬುದ್ಧ, ಬಸವ ಹಾಗೂ ಅಂಬೇಡ್ಕರ್ ಅವರಿಗೆ ಸಾವಿರಾರು ವರ್ಷಗಳ ಅಂತರವಿದ್ದರೂ, ಶಾಂತಿ, ಕರುಣೆ, ಸಮಾನತೆ ಹಾಗೂ ಸ್ವಾತಂತ್ರ್ಯದ ಕನಸನ್ನು ಮೂವರು ಮಹನೀಯರೂ ಸಮಾಜಕ್ಕೆ ನೀಡಿದ್ದಾರೆ. ''ಆಸೆಯೇ ದುಃಖಕ್ಕೆ ಮೂಲ'' ಎಂದು ಬುದ್ಧ ಹೇಳಿದರೆ, ''ಮಾನವ ನಿರ್ಮಿತ ಸಾಮಾಜಿಕ ವ್ಯವಸ್ಥೆಯೇ ದುಃಖಕ್ಕೆ ಕಾರಣ'' ಎಂದು ಬಸವಣ್ಣ ಹೇಳಿದ್ದಾರೆ. ಈ ಎಲ್ಲ ಅನ್ಯಾಯಗಳಿಗೆ ಶಿಕ್ಷಣವೇ ಶಕ್ತಿಯುತ ಅಸ್ತ್ರ ಎಂದು ಅಂಬೇಡ್ಕರ್ ಬೋಧಿಸಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟರು.

ಒಂದನೇಯ ಪುಟದಿಂದ

ರಾಜ್ಯಗಳು ತಮ್ಮದೇ ಆದ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಲು ಅವಕಾಶ ನೀಡುವಂತೆ ಕೇಂದ್ರಕ್ಕೆ ಮನವಿ

ಮತ್ತು ಕನಸುಗಳನ್ನು ಪರೀಕ್ಷಾ ಅವ್ಯವಸ್ಥೆಗಳ ಕಾರಣಕ್ಕೆ ಹಾಳುಮಾಡಲು ಅವಕಾಶ ನೀಡಲಾಗುವುದಿಲ್ಲ. ಪ್ರತಿಭಾವಂತ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ರಕ್ಷಿಸುವ ಅಗತ್ಯ ಇದೆ ಎಂದು ಅವರು ಹೇಳಿದ್ದಾರೆ.

ಎಂಬಿಬಿಎಸ್ ಸೀಟ್‌ಗಳ ಹೆಚ್ಚಳ:

ವೈದ್ಯಕೀಯ ಶಿಕ್ಷಣದಲ್ಲಿ 11 ಸರ್ಕಾರಿ ಎಂಬಿಬಿಎಸ್ ಕಾಲೇಜುಗಳಲ್ಲಿ 550 ಎಂಬಿಬಿಎಸ್ ಸೀಟ್‌ಗಳನ್ನು ಹಾಗೂ 23 ಶಿಕ್ಷಣ ಸಂಸ್ಥೆಗಳಲ್ಲಿ 572 ಸ್ನಾತಕೋತ್ತರ ಕೋರ್ಸ್‌ಗಳ ಸೀಟ್‌ಗಳನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಈ ಮೊದಲು 1,700 ಸೀಟ್‌ಗಳು ಲಭ್ಯವಿದ್ದವು. 550 ಸೇರ್ಪಡೆಯಿಂದ 2,250 ಸೀಟುಗಳಾಗಿವೆ. ಇದಕ್ಕಾಗಿ ಕೇಂದ್ರ ಸರ್ಕಾರ 495, ರಾಜ್ಯ ಸರ್ಕಾರ 330 ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದೆ. ಸ್ನಾತಕೋತ್ತರ ಕೋರ್ಸ್‌ಗಳಲ್ಲಿ 1,673 ಸೀಟ್‌ಗಳ ಜೊತೆಗೆ 572 ಸೇರಿ ಒಟ್ಟು 2,245 ಸೀಟ್‌ಗಳಾಗಲಿದ್ದು ಇದಕ್ಕಾಗಿ ಕೇಂದ್ರ ಸರ್ಕಾರ 541, ರಾಜ್ಯ ಸರ್ಕಾರ 316 ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದೆ ಎಂದು ಹೇಳಿದರು.

ಖಾಸಗಿ ಹಾಗೂ ಇತರ ಸಂಸ್ಥೆಗಳ ಅಧೀನದಲ್ಲಿರುವ ಕಾಲೇಜುಗಳಲ್ಲಿ 450 ಸೀಟ್‌ಗಳನ್ನು ಹೆಚ್ಚಿಸಲಾಗಿದ್ದು, ಈ ಮೊದಲಿದ್ದ 3,800 ಸೀಟ್‌ಗಳನ್ನು ಒಳಗೊಂಡಂತೆ ಒಟ್ಟು 4,250 ವೈದ್ಯಕೀಯ ಸೀಟ್‌ಗಳು ಲಭ್ಯವಾಗುತ್ತಿದೆ ಎಂದು ವಿವರಿಸಿದರು.

ರಾಜ್ಯದಲ್ಲಿ ಒಟ್ಟು 72 ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಂದ 13,945 ಹಾಗೂ ಸ್ನಾತಕೋತ್ತರದಲ್ಲಿ 7,727 ಸೀಟ್‌ಗಳು ಲಭ್ಯವಾದಂತಾಗಲಿವೆ ಎಂದು ತಿಳಿಸಿದ್ದಾರೆ.

ಡೆಂಗಿ ನಿಯಂತ್ರಣಕ್ಕಾಗಿ ಸಮುದಾಯದ ಸಹಭಾಗಿತ್ವ ಅತ್ಯಗತ್ಯ - ಡಾ.ಸುರೇದ್ರಬಾಬು

ಆವರಣದಲ್ಲಿ ನೀರು ನಿಲ್ಲದಂತೆ ನಿಗಾ ವಹಿಸಬೇಕಿದೆ. ಅಲ್ಲದೆ ಡೆಂಗ್ಯು ರೋಗಕ್ಕೆ ನೇರವಾದ ಚಿಕಿತ್ಸೆ ಇಲ್ಲ, ಲಕ್ಷಣಗಳಾಧರಿಸಿ ಚಿಕಿತ್ಸೆ ನೀಡಲಾಗುವುದು. ನಿರ್ಲಕ್ಷ್ಯಿಸಿದರೆ ಗಂಭೀರ ಆರೋಗ್ಯ ಸಮಸ್ಯೆ ಉಂಟಾಗುವ ಸಾಧ್ಯತೆಗಳು ಇರುವುದರಿಂದ ಚಿಕ್ಕ ಮಕ್ಕಳು, ವಯೊವೃದ್ದರು, ಗರ್ಭಿಣ , ಬಾಣಂತಿಯರ ಆರೋಗ್ಯದ ಸುರಕ್ಷತೆ ವಹಿಸಲು ಸೂಚಿಸಿ ಮಲಗುವಾಗ ಸೊಳ್ಳೆ ಪರದೆ, ಕಿಡಕಿಗಳಿಗೆ ಜಾಲರಿ ಅಳವಡಿಕೆ ಸೊಳ್ಳೆ ಬತ್ತಿ ಬಳಕೆ, ಹಾಗೂ ಶಾಶ್ವತ ನೀರು ನೀಲ್ಲುವ ಸ್ಥಳಗಳಿದ್ದಲ್ಲಿ ಲಾರ್ವಾಹಾರಿ ಗಪ್ಪಿ ಹಾಗೂ ಗಂಬೋಷಿಯಾ ಮೀನು ಬಿಡುವುದರ ಸದುಪಯೋಗಕ್ಕೆ ಹೆಚ್ಚು ಜಾಗೃತಿಗಾಗಿ ತಿಳಿಸಿದರು.ಸೊಳ್ಳೆಯ ಉತ್ಪತ್ತಿ ತಾಣ ಕಂಡು ಬಂದರೆ ದಂಡ ಸೊಳ್ಳೆ ಉತ್ಪತ್ತಿ ತಡೆಯಲು ಕರ್ನಾಟಕ ಸರಕಾರವು ಜಾಗೃತಿಯ ಜೊತೆಜೊತೆಗೆ ನಿರ್ಲಕ್ಷ್ಯ ವಹಿಸುವುದನ್ನು ತಡೆಯಲು ರಾಜ್ಯಾದ್ಯಂತ ದಂಡ ವಿಧಿಸಲು ಸೂಚಿಸಿದೆ. ಮನೆಗಳಿಗೆ ಗ್ರಾಮೀಣ ಭಾಗದಲ್ಲಿ ರೂ 400/- ನಗರ ಪ್ರದೇಶಗಳಲ್ಲಿ ರೂ 800/- ವಾಣ ಜ್ಯ ಮಳಿಗೆ ಗ್ರಾಮೀಣ ಭಾಗದಲ್ಲಿ ರೂ 1000/- ನಗರ ಪ್ರದೇಶಗಳಲ್ಲಿ ರೂ 2000/- ಕಟ್ಟಡ ನಿರ್ಮಾಣ, ಗ್ರಾಮೀಣ ಭಾಗದಲ್ಲಿ ರೂ 2000/- ನಗರ ಪ್ರದೇಶಗಳಲ್ಲಿ ರೂ 4000/- ದಂಡ ವಿಧಿಸಬಹುದಾಗಿದ್ದು, ಸಾರ್ವಜನಿಕರು, ವ್ಯಾಪ್ಯಾರಸ್ಥರು, ಕೈಗಾರಿಕೋದ್ಯಮಿಗಳು ಸೊಳ್ಳೆ ಉತ್ಪತ್ತಿ ತಡೆಯಲು ಕೊರಿದರು.ಈ ಸಂದರ್ಭದಲ್ಲಿ ಜಿಲ್ಲಾ ಅರ್‌ಸಿಹೆಚ್ ಅಧಿಕಾರಿ ಡಾ. ನಂದಿತಾ ಎಮ್ ಎನ್, ಜಿಲ್ಲಾ ಎನ್‌ಪೊರ್ಸ್ಮೆಂಟ್ ಅಧಿಕಾರಿ ಡಾ.ಶಿವಕುಮಾರ್ ನಾರಾ, ತಾಲೂಕಾ ಆರೋಗ್ಯಾಧಿಕಾರಿ ಡಾ. ಅಮೃತ್ ಹುಕ್ಕೇರಿ, ವೈದ್ಯಾಧಿಕಾರಿ ಡಾ.ರಾಕೇಶ್, ವಿಭಾಗೀಯ ಕೀಟ ಶಾಸ್ತ್ರಜ್ಞೆ ಗಂಗೋತ್ರಿ, ರೆಡ್ ಕ್ರಾಸ್ ಜಿಲ್ಲಾ ಸಂಚಾಲಕ, ಡಾ ದಂಡಪ್ಪ ಬಿರಾದಾರ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಡಿವೈಹೆಚ್‌ಇಓ ಬಸಯ್ಯ, ವೈದ್ಯರಾದ ಡಾ ಪರ್ಹಾನ್ ನಸ್ರತ್ ಖಾಜಿ, ಡಾ ಸುನೀಲ್, ಡಾ ಗುಂಡಮ್ಮ, ಡಾ ಅಸ್ಪಾಕ್ ಹುಸೇನ್, ಡಾ ಶ್ವೇತಾಂಬರಿ, ಮಲೇರಿಯಾ ವಿಭಾಗದ ಅಡಿವೆಪ್ಪ, ತಾಯಪ್ಪ, ಶರಣಬಸವ ಪಾಟೀಲ್, ಸುರೇಶ್, ಬಿಹೆಚ್‌ಇಓ ನಾಗರಾಜ್, ಸರೋಜಾ, ಎಮ್‌ಟಿಎಸ್ ಸಂಧ್ಯಾ, ಮಹೇಶ್, ಸೇರಿದಂತೆ ಹೆಚ್‌ಐಓ, ಪಿಹೆಚ್‌ಸಿಓ, ಡಿಎಸ್‌ಯು ಸಿಬ್ಬಂದಿಯವರು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಗುಡದನಾಳ ಗ್ರಾಮದಲ್ಲಿ ತೀವ್ರ ಕುಡಿಯುವ ನೀರಿನ ಸಂಕಷ್ಟ ಸಮಸ್ಯೆ ಬಗೆಹರಿಸುವಂತೆ ಅಧಿಕಾರಿಗಳಿಗೆ ಗ್ರಾಮಸ್ಥರ ಮನವಿ

ನಿವಾರಿಸುವಂತೆ ಆಗ್ರಹಿಸಿದರು.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಅಮರೇಶ ರಾಗೇರಿ, ಶಿವಾನಂದ ದೇವಿಕೇರಿ, ಅಮರಯ್ಯ, ಗುಂಡಪ್ಪ ದ್ಯಾಪೂರ, ದೇವಪ್ಪ ಮಜ್ಜಿಗೆ, ಸಿದ್ದಯ್ಯ, ಮಹಾಂತೇಶ, ಶಿವಕುಮಾರ, ಸ್ವಾಮಿ, ಪ್ರದೀಪ, ಶರಣಬಸವ, ಬಸವರಾಜ, ಅಮರೇಶ ಹಾಗೂ ರಮೇಶ್ ಉಪಸ್ಥಿತರಿದ್ದರು.

ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದಲ್ಲಿ ಪ್ರವೇಶ ಆರಂಭ ಉಚಿತ ಶಿಕ್ಷಣದೊಂದಿಗೆ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಸುವರ್ಣಾವಕಾಶ

ನಮ್ಮ ಉದ್ದೇಶ ಎಂದು ಡಾಣಣ ಎನ್. ವಾದಿರಾಜಾಚಾರ್ಯ ತಿಳಿಸಿದರು.

ಜೂನ್ 15ರಿಂದ ತರಗತಿಗಳು ಪುನರಾರಂಭವಾಗಲಿದ್ದು, ಆಸಕ್ತ ವಿದ್ಯಾರ್ಥಿಗಳು ಹಾಗೂ ಪೋಷಕರು ಶೀಘ್ರದಲ್ಲೇ ಪ್ರವೇಶ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಹೆಚ್ಚಿನ ಮಾಹಿತಿಗಾಗಿ ಡಾಣಣ ಎನ್. ವಾದಿರಾಜಾಚಾರ್ಯ (9492570190), ರಾಮಚಂದ್ರಾಚಾರ್ಯ ರಿತ್ತಿ (9900507154), ವಿ.ಎನ್.ಆರ್. ದ್ವಾರಕನಾಥಾಚಾರ್ಯ (7892697223) ಹಾಗೂ ಪವನಾಚಾರ್ಯ (7019717706) ಅವರನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ಮೇ 30ರೊಳಗೆ ರಾಜ್ಯ ಸಂಪುಟ ಪುನರ್ ರಚನೆ

ಸರಿಯಲ್ಲ, ಈ ಬೆಲೆ ಏರಿಕೆ ಇಷ್ಟಕ್ಕೆ ನಿಲ್ಲುವುದಿಲ್ಲ ಇನ್ನೂ ಹೆಚ್ಚಾಗುತ್ತೇ 115 ರೂಪಾಯಿ ದಾಟುತ್ತದೆ. ಇದಕ್ಕೆ ಪ್ರಧಾನಿಯವರ ಆರ್ಥಿಕ ನೀತಿಗಳೇ ಕಾರಣ. ಆದ್ದರಿಂದ ಸಿದ್ದರಾಮಯ್ಯ ಹೇಳಿದಹಾಗೆ ಪ್ರಧಾನಿ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು.

ದಿ. ಮನಮೋಹನ್ ಸಿಂಗ್ ಪ್ರಧಾನಿ ಆಗಿದ್ದಾಗ ಕಚ್ಚಾತೈಲದ ಬೆಲೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಅಂದ್ರೆ ಪ್ರತಿ ಬ್ಯಾರಲ್ ಗೆ 145 ಡಾಲರ್ ಇತ್ತು. ಆ ವೇಳೆ ನಮ್ಮ ದೇಶದಲ್ಲಿ ಪೆಟ್ರೋಲ್ ಬೆಲೆ 53 ರೂ. ಇತ್ತು, ಆದ್ರೆ ಇದೀಗ ಕಚ್ಚಾ ತೈಲದ ಬೆಲೆ 119 ಡಾಲರ್ ಇದೆ. ಇದಕ್ಕೆ ಕಾರಣ ಪ್ರಧಾನಿಯವರು ಟ್ರಂಪ್ ಗೆ ಹೆದರಿ ರಷ್ಯಾದಿಂದ ತೈಲ ಖರೀದಿ ಮಾಡದಿರುವುದು ಎಂದು ಹೇಳಿದರು.

ರೂಪಾಯಿ ಮೌಲ್ಯ ಕುಸಿದಿದೆ, ರಪ್ತು ಕಡಿಮೆ ಆಗುತ್ತಿದೆ ಆಮದು ಹೆಚ್ಚಾಗುತ್ತಿದೆ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ರೂಪಾಯಿ ಬೇಡಿಕೆ ಕುಸಿಯುತ್ತಿದೆ ಇದನ್ನೆಲ್ಲ ಸರಿ ಪಡಿಸಬೇಕೆಂದರೆ ಪ್ರಧಾನಿ ರಾಜೀನಾಮೆ ನೀಡಿ ಆರ್ಥಿಕ ತಜ್ಞ ರನ್ನು ಪ್ರಧಾನಿ ಮಾಡಬೇಕು ಎಂದು ಆಗ್ರಹಿಸಿದರು.

ಕಳಪೆ ಬಿತ್ತನೆ ಬೀಜ ವಿತರಿಸಿದರೆ ಕ್ರಮ- ಸಿದ್ರಾಮಯ್ಯ ಸ್ವಾಮಿ

ಬೀದರ,ಮೇ 16-

ಜಿಲ್ಲೆಯ ರೈತರಿಗೆ ವಿತರಿಸಲಾಗುವ ಬಿತ್ತನೆ ಬೀಜಗಳ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು. ಕೇವಲ ಉತ್ತಮ ಮೊಳಕೆ ಬರುವ ಗುಣಮಟ್ಟದ ಬೀಜಗಳನ್ನು ಮಾತ್ರ ವಿತರಿಸಬೇಕು ಎಂದು ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಸಿದ್ರಾಮಯ್ಯ ಸ್ವಾಮಿ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.



ಅವರು ಗುರುವಾರ ಬೀದರ ಜಂಟಿ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಕರ್ನಾಟಕ ಪ್ರದೇಶ ಕೃಷಿ ಸಮಾಜ ಜಿಲ್ಲಾ ಘಟಕ ಬೀದರ ಜಿಲ್ಲೆಯ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರೈತ ಸಂಪರ್ಕ ಕೇಂದ್ರಗಳಿಗೆ ಬರುವ ಬಿತ್ತನೆ ಬೀಜಗಳನ್ನು ಮೊದಲಿಗೆ ಸ್ಯಾಂಪಲ್ ಡ್ರಾ ಮಾಡಿ ಪರೀಕ್ಷಿಸಬೇಕು. ಉತ್ತಮವಾಗಿ ಮೊಳಕೆ ಬರುವ ಬೀಜಗಳನ್ನು ಮಾತ್ರ ರೈತರಿಗೆ ನೀಡಬೇಕು. ಗುಣಮಟ್ಟವಿಲ್ಲದ ಅಥವಾ ಕಳಪೆ ಎಂದು ಕಂಡುಬರುವ ಬಿತ್ತನೆ ಬೀಜಗಳನ್ನು ತಕ್ಷಣವೇ ವಾಪಸ ಕಳುಹಿಸಬೇಕು. ಬೀಜ ವಿತರಣೆ ಸಮಯದಲ್ಲಿ ರೈತರಿಗೆ ಯಾವದೇ ರೀತಿಯ ತೊಂದರೆ ಅಥವಾ ಗೊಂದಲ ಉಂಟಾಗದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಿದರು.

ಬೀದರ ಜಂಟಿ ಕೃಷಿ ನಿರ್ದೇಶಕರು ಮಾತನಾಡಿ, ಜಿಲ್ಲೆಯಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ಸಂಗ್ರಹ ಪ್ರಕ್ರಿಯೆ ಶುರುವಾಗಿದೆ. ರೈತರು ಅವಸರ ಮಾಡಿ ಬಿತ್ತನೆ ಮಾಡಬಾರದು. ಕನಿಷ್ಠ 60 ರಿಂದ 70 ಮಿ.ಮೀ ಮಳೆಯಾಗಿ ಮಣ್ಣಿನಲ್ಲಿ ತೇವಾಂಶ ಹದವಾಗಿದ್ದಾಗ ಮಾತ್ರ ಬಿತ್ತನೆ ಮಾಡಬೇಕು. ಅಧಿಕೃತ ರೈತ ಸಂಪರ್ಕ ಕೇಂದ್ರಗಳಿಂದಲೇ ಬೀಜ ಮತ್ತು ರಸಗೊಬ್ಬರ ಖರೀದಿಸಿ ರಸೀದಿ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಸಾಕಷ್ಟು ರಸಗೊಬ್ಬರ ಲಭ್ಯವಿದೆ. ರೈತರು ಒಂದೇ ಬಾರಿ ದೊಡ್ಡ ಪ್ರಮಾಣದಲ್ಲಿ ಗೊಬ್ಬರ ಖರೀದಿಸಿ ಮನೆಯಲ್ಲಿ ಸಂಗ್ರಹಿಸಿಡುವ ಅಗತ್ಯವಿಲ್ಲ. ಎಫ್.ಐ.ಡಿ ಮಾಡಿದ ರೈತರು ಮಾತ್ರ ಯುರಿಯಾ ಗೊಬ್ಬರ ಖರೀದಿ ಮಾಡಬಹುದು. ರೈತರು ಮಾತ್ರ ಬಿತ್ತನೆಯ ಹಂತಕ್ಕೆ ಅನು ಗುಣವಾಗಿ ಗೊಬ್ಬರ ಪಡೆಯಬೇಕು. ಡಿ.ಎ.ಪಿ ಗೊಬ್ಬರದ ಬದಲಿಗೆ ಲಭ್ಯವಿರುವ ಕಾಂಪ್ಲೆಕ್ಸ್ ಗೊಬ್ಬರಗಳನ್ನು ಬಳಸುವಂತೆ ತಾಂತ್ರಿಕ ಸಲಹೆ ನೀಡಲಾಗುತ್ತಿದೆ ಎಂದು ಸಲಹೆ ನೀಡಿದರು.

ಸಭೆಯಲ್ಲಿ ಹಾಜರಿದ್ದ ತೋಟಗಾರಿಕೆ, ಮೀನುಗಾರಿಕೆ, ರೇಷ್ಮೆ, ಪಶು ಸಂಗೋಪನಾ ಇಲಾಖೆಯ ಅಧಿಕಾರಿಗಳು ರೈತರಿಗಾಗಿ ಇರುವ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಮೇ.31 ರಿಂದ ಜೂನ್ 2 ರ ನಡುವೆ ಮಳೆಯಾಗುವ ಸಾಧ್ಯತೆಯಿದ್ದು, ಜೂನ್.8 ರ ಸುಮಾರಿಗೆ ಜಿಲ್ಲೆಗೆ ಮುಂಗಾರು ಪ್ರವೇಶಿಸುವ ನಿರೀಕ್ಷೆಯಿದೆ ಎಂದು ಕೃಷಿ ಸಂಶೋಧನ ಕೇಂದ್ರದ ಅಧಿಕಾರಿ ತಿಳಿಸಿದರು.

ಈ ಸಂದರ್ಭದಲ್ಲಿ ಗೋವಿಂದ ರೆಡ್ಡಿ ವಿಠಲರೆಡ್ಡಿ, ಸಂಗಮೇಶ ಬಸವರಾಜ ವಾಲೆ, ವಿಶ್ವನಾಥ ಮಾಣಿಕರಾವ ಮಾಲಿ ಪಾಟೀಲ್, ಬಾಬುರೆಡ್ಡಿ ವಿಠಲರೆಡ್ಡಿ, ಸಂತೋಷ ರಾಜಕುಮಾರ ಹಜಾರಿ, ವಿಠಲಸಿಂಗ ದೌಲತ ಸಿಂಗ್, ರಮೇಶ ವೆಂಕಟರಾವ ಪಾಟೀಲ್, ಗೀರಿಶ ಮಾಧವರಾವ ಪಾಟೀಲ್, ಪ್ರಭುರಾವ ಭೀಮರಾವ, ಬಸವರಾಜ ವಿಶ್ವನಾಥ ಪಾಟೀಲ್ ಸೇರಿದಂತೆ ಕೃಷಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು. ಶಿವಕುಮಾರ ಸಕ್ಕನಿ (ಕೇಂದ್ರ ಸ್ಥಾನ) ಜಂಟಿ ಕೃಷಿ ನಿರ್ದೇಶಕರ ಕಚೇರಿ, ಬೀದರ ಅವರು ಸಭೆಯಲ್ಲಿದ್ದ ಜಿಲ್ಲಾ ಕೃಷಿ ಸಮಾಜ ಬೀದರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೋಳಿಸಿದರು.

ಯುವನಿಧಿ ಯೋಜನೆಗೆ ನೋಂದಣಿ ಆರಂಭ

ಬೀದರ, ಮೇ.15 ಕರ್ನಾನಟಕ ಸರ್ಕಾರದ ಪಂಚಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆಯಡಿ ನಿರುದ್ಯೋಗ ಭತ್ಯೆ ಪಡೆಯಲು ಅಹ್ ಅಭ್ಯರ್ಥಿಗಳಿಂದ ನೋಂದಣಿ ಆಹ್ವಾನಿಸಲಾಗಿದೆ.

ಪದವಿ ಪಾಸಾದ ಅಭ್ಯರ್ಥಿಗಳಿಗೆ 3000 ರೂ. ಡಿಪ್ಲೋಮಾ ಮುಗಿಸಿದ ಅಭ್ಯರ್ಥಿಗಳಿಗೆ 1500 ರೂ. ಭತ್ಯೆ ನೀಡಲಾಗುತ್ತದೆ. ಪದವಿ ಮತ್ತು ಡಿಪ್ಲೋಮಾ ಮುಗಿಸಿ ಉದ್ಯೋಗವಿಲ್ಲದೆ ಇರುವ ಯುವಕ/ಯುವತಿಯರಿಗೆ ಆರ್ಥಿಕ ನೆರವು ನೀಡುವ ಉದ್ದೇಶದಿಂದ ಈ ಯೋಜನೆ ಯನ್ನು ಜಾರಿಗೆ ತರಲಾಗಿದೆ. ಅಭ್ಯರ್ಥಿಗಳು ಕನಿಷ್ಟ 6 ವರ್ಷ ಗಳ ವರಗೆ ಕರ್ನಾಟಕದಲ್ಲಿ ವಾಸವಾ ಗಿರಬೇಕು. ಪದವಿ/ಡಿಪ್ಲೋ ಮಾ ಮುಗಿಸಿ ಕನಿಷ್ಠ 180 ದಿನಗಳ ನಂತರ ವೂ ಉದ್ಯೋಗ ದೊರಕದೆ, ಉನ್ನತ ವ್ಯಾಸಂಗಕ್ಕೆ ದಾಖಲಾಗದೆ ಇರುವ ಅಭ್ಯರ್ಥಿಗಳು ಈ ಯೋಜನೆಗೆ ಅರ್ಹರಾಗಿರುತ್ತಾರೆ. ಸ್ವಯಂ ಉದ್ಯೋಗ ಹೊಂದಿಲ್ಲದ ಅಭ್ಯ ರ್ಥಿಗಳು, ಉನ್ನತ ವಿದ್ಯಾ ಭ್ಯಾಸ ಮುಂದುವರಿಸದೇ ಇರುವ ಅಭ್ಯರ್ಥಿಗಳು, 2023-24ರಿಂದ ಪಾಸಾದ ಅಭ್ಯರ್ಥಿ ಗಳು ಯುವ ನಿಧಿ ಯೋಜನೆಯಲ್ಲಿ ನೋಂದಣಿ ಮಾಡಿಕೊಂಡು ಇದರ ಉಪಯೋಗ ಪಡೆದುಕೊಳ್ಳಬೇಕು. ಅಭ್ಯರ್ಥಿ ಗಳು ನೋಂದಣಿಯನ್ನು ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಬಾಪೂಜಿ ಕೇಂದ್ರಗಳಲ್ಲಿ ಸಲ್ಲಿಸಬ ಹುದಾಗಿದೆ ಎಂದು ಬೀದರ ಜಿಲ್ಲಾ ಉದ್ಯೋಗಾಧಿಕಾರಿಗಳು ತಿಳಿಸಿದ್ದಾರೆ.

ಮೌಲ್ಯಾಧಾರಿತ ಚಿಂತನಗಳು ಬಾಳಿನ ಆಶಾ ಕಿರಣ

ಶಿವಮೊಗ್ಗ,ಮೇ 16-

ಪ್ರಗತಿಪರವಾದ ಧ್ಯೇಯೋದ್ದೇಶಗಳು ಮಾನವನ ಶ್ರೇಯಸ್ಸಿಗೆ ಮೂಲ. ಸತ್ಯಾನ್ವೇಷಣೆಯ ದಾರಿಯಲ್ಲಿ ನಡೆದಾಗ ಜೀವನ ಮೌಲ್ಯ ಸಮೃದ್ಧಿಗೊಳ್ಳಲು ಸಾಧ್ಯ. ಪೂರ್ವಜರ ಮೌಲ್ಯಾಧಾರಿತ ಚಿಂತನಗಳು ಬಾಳಿನ ವಿಕಾಸಕ್ಕೆ ಆಶಾ ಕಿರಣ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.



ಅವರು ಶುಕ್ರವಾರ ಶ್ರೀ ಜಗದ್ಗುರು ಪಂಚಾಚಾರ್ಯ ಕೈಗಾರಿಕಾ ತರಬೇತಿ ಕೇಂದ್ರದ ಆವರಣದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಹಾಗೂ ಎಸ್.ಜೆ.ಪಿ. ಐಟಿಐ 32ನೇ ವಾರ್ಷಿಕೋತ್ಸವದ ಅಂಗವಾಗಿ ಜರುಗಿದ ಜನ ಜಾಗೃತಿ ಧರ್ಮ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಕೆಡಕುಗಳನ್ನು ಮೆಟ್ಟಿ ನಿಂತು ಒಳಿತಿನತ್ತ ಹೆಜ್ಜೆ ಹಾಕುವುದೇ ಮಾನವನ ಗುರಿಯಾಗಬೇಕು. ಕಾಯಿಸಿದ ಚಿನ್ನ ಒಡವೆಯಾಗುತ್ತದೆ. ಬಡಿದ ತಾಮ್ರ ತಂತಿಯಾಗುತ್ತದೆ. ಕೆತ್ತಿದ ಕಲ್ಲು ಸುಂದರ ಮೂರ್ತಿಯಾಗುತ್ತದೆ. ಅದರಂತೆ ಸಂಸ್ಕಾರ ಸಚ್ಚಾರಿತ್ರ್ಯದಿಂದ ಬದುಕು ಉಜ್ವಲಗೊಳ್ಳುತ್ತದೆ. ಮನುಷ್ಯನಲ್ಲಿ ಬುದ್ಧಿ ಮತ್ತು ಸದ್ವಿಚಾರಗಳು ಬೆಳೆದು ಬಂದಾಗ ಜೀವನದಲ್ಲಿ ಶ್ರೇಯಸ್ಸು ಪಡೆಯಲು ಸಾಧ್ಯವಾಗುತ್ತದೆ. ಜ್ಞಾನದ ಕಣ್ಣು ಶ್ರೀ ಗುರು. ಸೂರ್ಯ ಕಿರಣದಿಂದ ಹೂವು ಅರಳಿದರೆ ಗುರು ಕಾರುಣ್ಯದಿಂದ ಆತ್ಮ ಅರಳುತ್ತದೆ. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಸಕಲರಿಗೂ ಒಳಿತಾದ ಸಾಧನೆಗೆ ನಿಲುಕುವ ಶಿವಾದ್ವೈತ ಸಿದ್ಧಾಂತಗಳನ್ನು ಬೋಧಿಸಿ ಉದ್ದರಿಸಿದ್ದನ್ನು ಕಾಣಬಹುದು. ಬುದ್ಧಿ ಶಕ್ತಿ ಬೆಳೆದಂತೆ ಮನೋಭಾವನೆಗಳು ಬೆಳೆಯುತ್ತಿಲ್ಲವಾದ್ದರಿಂದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಸ್ವಧರ್ಮ ನಿಷ್ಠೆ ಪರಧರ್ಮ ಸಹಿಷ್ಣುತೆ ಬೆಳೆದಾಗ ಆರೋಗ್ಯಪೂರ್ಣ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ವಿಘ್ನೇಶ್ವರಯ್ಯ ಸೋಲಾಪುರ ಬಡತನದಲ್ಲಿ ಬೆಳೆದು ಬಂದು ಬಹಳ ಶ್ರಮವಹಿಸಿ ಶ್ರೀ ಜಗದ್ಗುರು ಪಂಚಾಚಾರ್ಯ ನಾಮಾಂಕಿತದಲ್ಲಿ ಕೈಗಾರಿಕಾ ತರಬೇತಿ ಕೇಂದ್ರ ಹುಟ್ಟು ಹಾಕಿರುವುದು ಅವರಲ್ಲಿರುವ ಸ್ವಾಭಿಮಾನ ಧರ್ಮ ಶ್ರದ್ಧೆಗೆ ಸಾಕ್ಷಿಯಾಗಿದೆ. ಸಂಸ್ಥೆಯಲ್ಲಿ ಓದಿದ ನೂರಾರು ಜನರ ಬಾಳಿಗೆ ಬೆಳಕಾಗಿರುವುದು ಸಂತೋಷದ ಸಂಗತಿ ಎಂದು ಹರುಷ ವ್ಯಕ್ತಪಡಿಸಿದರು.

ಜ್ಯೋತಿ ಬೆಳಗಿಸಿ ಸಮಾರಂಭ ಉದ್ಘಾಟಿಸಿದ ಮಳಲಿ ಸಂಸ್ಥಾನ ಮಠದ ಡಾ. ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಮನುಷ್ಯ ತಿಳಿದಿರುವುದಕ್ಕಿಂತ ತಿಳಿಯಬೇಕಾದದ್ದು ಬಹಳಷ್ಟಿದೆ. ಜೀವನದ ಜಂಜಡದಲ್ಲಿ ಸಿಲುಕಿರುವ ಜೀವಾತ್ಮರಿಗೆ ಗುರು ಜ್ಞಾನ ಬೋಧಾಮೃತ ಮತ್ತು ಕ್ರಿಯಾಶೀಲ ಜೀವನ ಅಭಿವೃದ್ಧಿಯತ್ತ ಸಾಗಲು ಸಾಧ್ಯವಾಗುತ್ತದೆ. ತರಬೇತಿ ಕೇಂದ್ರದ ವಾರ್ಷಿಕೋತ್ಸವ ಜೊತೆಗೆ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಹಮ್ಮಿಕೊಂಡಿರುವುದು ಅವರಲ್ಲಿರುವ ಧಾರ್ಮಿಕ ಪ್ರಜ್ಞೆಗೆ ಸಾಕ್ಷಿಯಾಗಿದೆ ಎಂದು ಸಂತೋಷ ವ್ಯಕ್ತಪಡಿಸಿದರು.

ಮಾಚೇನಹಳ್ಳಿಯ ಟೆಕ್ನೊರಿಂಗ್ಸ್ ಮತ್ತು ಶಶಿ ಭಾರತ ಇಂಡಸ್ಟ್ರಿ ಎಮ್.ಡಿ. ಬಿ.ಎಸ್.ಸಂಗೀತಾ ಕಲಿಯುವ ವಿದ್ಯಾರ್ಥಿಗಳಲ್ಲಿ ಕಲಿಯುವ ಛಲ ಬೇಕು ಜೊತೆಗೆ ಕೌಶಲ್ಯ ಬೇಕು. ವಿಕಸಿತ ಭಾರತದಲ್ಲಿ ಸಾಕಷ್ಟು ಅವಕಾಶಗಳಿದ್ದು ಅವುಗಳ ಸದುಪಯೋಗಪಡೆಯಬೇಕು. ಕನಸುಗಳು ದೊಡ್ಡದಾಗಿರಬೇಕು. ಅಂದಾಗ ಅವರ ಭವಿಷ್ಯತ್ತು ಉಜ್ವಲವಾಗಲಿದೆ ಎಂದರು. ಸೋಮಶೇಖರ ಜಿ., ರಾಕೇಶ ಆರಾಧ್ಯ, ಹೆಚ್.ಪಿ.ರವೀಶ್ ವಿಶೇಷ ಆಹ್ವಾನಿತರಾಗಿ ಪಾಲ್ಗೊಂಡು ಮಾತನಾಡಿದರು. ರುಕ್ಷಿಣಿ ವೇದವ್ಯಾಸ, ಡಾ.ರುದ್ರಾಂಬಿಕಾ ಎಸ್. ಬಿರಾದಾರ, ಬಿ.ಟಿ. ಶೇಖರಪ್ಪ, ಮೋಹನಕುಮಾರ, ಲಿಂಗಸುಗೂರಿನ ಸರ್ವೇಶ್ವರಿ ಅವರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆಯಿತ್ತು ಶುಭ ಹಾರೈಸಿದರು.

ಸಮಾರಂಭದ ಸಮ್ಮುಖ ವಹಿಸಿದ ಚನ್ನಗಿರಿ ಹಿರೇಮಠದ ಕೇದಾರ ಶಿವಶಾಂತವೀರ ಶಿವಾಚಾರ್ಯ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಸ್ವಾಮಿಗಳು ಹಾರನಹಳ್ಳಿ ವಿಘ್ನೇಶ್ವರಯ್ಯನವರ ಜೀವನದ ಸಿದ್ಧಿ ಸಾಧನೆ ಹಾಗೂ ಧರ್ಮ ಪೀಠಗಳ ಮೇಲೆ ಇಟ್ಟಿರುವ ಶ್ರದ್ಧಾ ಅಭಿಮಾನ ಕಂಡು ಸಂತಸ ವ್ಯಕ್ತಪಡಿಸಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ 5 ಪ್ರತಿಭಾನ್ವಿತರಿಗೆ ಹಾಗೂ ಉನ್ನತ ಶ್ರೇಣಿಯಲ್ಲಿ ಅಂಕ ಪಡೆದ ಎಸ್‌ಜೆಪಿ ಐಟಿಐ ಸಿಬ್ಬಂದಿಯವರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಉಚಿತ ಆರೋಗ್ಯ ತಪಾಸಣೆ-ನೇತ್ರ ತಪಾಸಣೆ ಮತ್ತು ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ವಿಘ್ನೇಶ್ವರಯ್ಯ ಸೋಲಾಪುರ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ ಈ ಸಂಸ್ಥೆಯ ಮೇಲೆ ಶ್ರೀ ರಂಭಾಪುರಿ ಜಗದ್ಗುರುಗಳವರ ಸಂಪೂರ್ಣ ಆಶೀರ್ವಾದವಿದೆ. ಸಂಸ್ಥೆಯ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸುವ ಯೋಜನೆ ಹೊಂದಿರುವುದಾಗಿ ತಿಳಿಸಿದರು. ಬಾಳೆಹೊನ್ನೂರು ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ ಸಾಧಕರಿಂದ ವೇದ ಘೋಷ, ಜಂಗಮ ಮಹಿಳಾ ಸಮಾಜದಿಂದ ಪ್ರಾರ್ಥನೆ ಜರುಗಿತು. ಪ್ರಾಚಾರ್ಯ ಡಿ.ಎನ್. ಪರಮೇಶ್ವರಪ್ಪ ಸ್ವಾಗತಿಸಿದರು. ಶಾಂತಾ ಆನಂದ ನಿರೂಪಿಸಿದರು.

ಸಮಾರಂಭಕ್ಕೂ ಮುನ್ನ ಶ್ರೀ ರಂಭಾಪುರಿ ಜಗದ್ಗುರುಗಳವರನ್ನು ಎಂ.ಆರ್.ಎಸ್.ಸರ್ಕಲ್ಲಿನಿಂದ ಎಸ್.ಜೆ.ಪಿ.ಐಟಿಐ ವರೆಗೆ ವಿವಿಧ ವಾದ್ಯ ವೈಭವಗಳೊಂದಿಗೆ ವೇದ ಘೋಷ, ಕಳಶ, ಪೂರ್ಣಕುಂಭದೊಂದಿಗೆ ಬರಮಾಡಿಕೊಳ್ಳಲಾಯಿತು. ಸಮಾರಂಭದ ನಂತರ ಪ್ರಸಾದ ವಿತರಣೆ ಜರುಗಿತು. ಧರ್ಮ ಸಭೆಯ ನಂತರ ವೀರಶೈವ ಲಿಂಗಾಯತ ವಧು-ವರರ ಸಮಾವೇಶ ಜರುಗಿತು.

ಕೇಂದ್ರ ಸರ್ಕಾರದಿಂದ ಅಡುಗೆ ಅನಿಲ, ಡೀಸೆಲ್, ಪೆಟ್ರೋಲ್ ದರ ಏರಿಕೆ ಖಂಡನಿಯ

ಯಾದಗಿರಿ,ಮೇ.16-

ಕೇಂದ್ರ ಸರ್ಕಾರ ಅಡುಗೆ ಅನಿಲ ದರ ಬಂಗಾರ ಖರೀದಿಯ ಸುಂಕದ ತೆರಿಗೆ ಹಾಗೂ ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚಳ ಮಾಡಿರುವ ಕೇಂದ್ರ ಸರ್ಕಾರದ ಕ್ರಮವನ್ನು ಕರ್ನಾಟಕ ರಾಜ್ಯ ರೈತೂದಯ ಹಸಿರು ಸೇನೆ ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ರುದ್ರಾಂಬಿಕ.ಆರ್.ಪಾಟೀಲ್ ಚಟ್ನಳ್ಳಿ ತೀವ್ರವಾಗಿ ಖಂಡಿಸಿದ್ದಾರೆ.ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಜನಸಾಮಾನ್ಯರು ಬಳಕೆ ಮಾಡುವ ಪ್ರತಿಯೊಂದು ವಸ್ತುಗಳ ಬೆಲೆ ಏರಿಕೆ ಮಾಡುವ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬಡವರ ಜೇಬಿಗೆ ಕತ್ತರಿಯಾಕಿ ಹಗಲುದರೋಡೆಗೆ ನಿಂತಿವೆ ಎಂದು ಅವರು ಆರೋಪಿಸಿದ್ದಾರೆ.ಅಡುಗೆ ಅನಿಲ ದರ



ಹಾಗೂ ಅಕ್ಕಿ ಬೇಳೆ ಇನ್ನಿತರ ದಿನಸಿ ವಸ್ತುಗಳು ಬೆಲೆ ಏಕಾಏಕಿ ಹೆಚ್ಚಿಸಿರುವುದು ಇದು ಮಹಿಳೆಯರಿಗೆ ತುಂಬಾ ಹೊರೆಯಾಗುತ್ತದೆ ಒಂದೆಡೆ ದೇಶದ ಪ್ರಧಾನ ಮಂತ್ರಿಗಳು ಉಚಿತವಾಗಿ ಸಿಲಿಂಡರ್ ನೀಡಿದಂತೆ ಮಾಡಿ ಮತ್ತೊಂದೆಡೆ ಜನರಿಂದ ಹಣ ವಸೂಲಿಗೆ ಮುಂದಾಗಿರುವುದು ಸರಿಯಲ್ಲ ಬಂಗಾರ ಖರೀದಿಸಬೇಡಿ ಪೆಟ್ರೋಲ್ ಡೀಸೆಲ್ ಹೆಚ್ಚು ಬಳಸಬೇಡಿ ಹೊರದೇಶಗಳಿಗೆ ಪ್ರವಾಸ ಹೊಗಬೇಡಿ ಎಂಬ ಹೇಳಿಕೆಗಳು ಬಾಲಿಶತನದಿಂದ ಕೂಡಿವೆ ಡೀಸೆಲ್ ಪೆಟ್ರೋಲ್ ದರಗಳ ಏರಿಕೆಯಿಂದ ಎಲ್ಲಾ ವಸ್ತುಗಳ ಬೆಲೆ ಗಗನಕ್ಕೆ ಎರಿವೆ ಮಧ್ಯಮ ವರ್ಗದ ಜನ ಕೇಂದ್ರ ಸರ್ಕಾರದ ವಿರುದ್ಧ ಹಿಡಿ ಶಾಪ ಹಾಕುತ್ತಿದ್ದಾರೆ.ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಮತ್ತೊಮ್ಮೆ ದರಗಳನ್ನು ಪರಿಶೀಲಿಸಿ ದಿನಬಳಕೆಯ ವಸ್ತುಗಳು ಮತ್ತು ಪೆಟ್ರೋಲ್ ಡೀಸೆಲ್ ಬೆಲೆ ಹಾಗೂ ಅಡುಗೆ ಅನಿಲ ದರವನ್ನು ಇಳಿಕೆ ಮಾಡುವಂತೆ ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ಮಹಿಳಾ ಘಟಕದ ಯಾದಗಿರಿ ಜಿಲ್ಲಾಧ್ಯಕ್ಷೆ ರುದ್ರಾಂಬಿಕ.ಆರ್.ಪಾಟೀಲ್ ಚಟ್ನಳ್ಳಿ ಒತ್ತಾಯಿಸಿದ್ದಾರೆ

ತುಂಗಭದ್ರಾ ಅಣೆಕಟ್ಟೆ: ಚೈನ್ ಅಳವಡಿಕೆ ಆರಂಭ

ಹೊಸಪೇಟೆ ,ಮೇ 16-


ತುಂಗಭದ್ರಾ ಅಣೆಕಟ್ಟೆಯ ಹೊಸ ಕ್ರೆಸ್ಟ್‌ಗೇಟ್‌ಗಳಿಗೆ ಹೊಸ ಚೈನ್‌ಲಿಂಕ್ ಅಳವಡಿಸುವ ಕಾರ್ಯ 33ನೇ ಕ್ರೆಸ್ಟ್‌ಗೇಟ್‌ನಿಂದ ಆರಂಭಿಸಲಾಯಿತು.

ಒಂದು ಕ್ರೆಸ್ಟ್‌ಗೇಟ್‌ಗೆ ಎರಡು ಚೈನ್‌ಗಳು ಬೇಕಿದ್ದು, ಚೆನ್ನೈಯಿಂದ ಬುಧವಾರ ಸಂಜೆ ಒಂದು ಸೆಟ್ ಚೈನ್ ಬಂದಿತ್ತು 'ಈ ತಿಂಗಳಲ್ಲಿ ಎಲ್ಲಾ 33 ಸೆಟ್ ಚೈನ್‌ಗಳ (ಒಟ್ಟು 66) ಅಳವಡಿಕೆ ಪೂರ್ಣಗೊಳ್ಳಲಿದೆ. ಕಳೆದ ವರ್ಷ ಡಿ.24ರಿಂದ ಕ್ರೆಸ್ಟ್‌ಗೇಟ್ ಅಳವಡಿಕೆ ಆರಂಭವಾಗಿ, ಈ ವರ್ಷ ಏ.25ರಂದು ಪೂರ್ಣಗೊಂಡಿತ್ತು. ಈಗ ಎಲ್ಲವೂ ಅಂತಿಮ ಹಂತಕ್ಕೆ ಬಂದಿದೆ' ಎಂದು ತುಂಗಭದ್ರಾ ಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.

18 ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ-2

ಬಾಗಲಕೋಟೆ,ಮೇ 16-

ಜಿಲ್ಲೆಯಲ್ಲಿ ಮೇ 18 ರಿಂದ 25 ವರೆಗೆ ನಡೆಯಲಿರುವ ಎಸ್.ಎಸ್.ಎಲ್.ಸಿ ಪರೀಕ್ಷೆ-2ರಲ್ಲಿ ಒಟ್ಟು 3233 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆಂದು ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಅವರು ಹೇಳಿದರು.



ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿಂದು ಎಸ್.ಎಸ್.ಎಲ್.ಸಿ ಪರೀಕ್ಷೆ-2 ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪ್ರತಿ ತಾಲೂಕಿಗೆ ಒಂದರಂತೆ ಒಟ್ಟು 7 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪರೀಕ್ಷಾ ಕೇಂದ್ರಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಭೇಟಿ ನೀಡಿ ಮೂಲಭೂತ ಸೌಲಭ್ಯಗಳ ಬಗ್ಗೆ ಪರಿಶೀಲನೆ ನಡೆಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ನಡೆಯುವ ಪರೀಕ್ಷಾ ಕಾರ್ಯವನ್ನು ವೀಕ್ಷಿಸಲು ಜಿಲ್ಲಾ ಕೇಂದ್ರದಲ್ಲಿ ವೆಬ್‌ಕಾಸ್ಟಿಂಗ್ ಸೌಲಭ್ಯ ಮಾಡಲಾಗಿದೆ ಎಂದು ತಿಳಿಸಿದರು.

ಪರೀಕ್ಷಾ ಕಾರ್ಯಕ್ಕೆ 7 ಜನ ಮುಖ್ಯ ಅಧೀಕ್ಷಕರು 7 ಜನ ಅಭಿರಕ್ಷಕರು, 6 ಜನ ಪರೀಕ್ಷಾ ವೀಕ್ಷಕರು, 8 ಜನ ವೆಬ್‌ಕಾಸ್ಟಿಂಗ್ ಸಿಬ್ಬಂದಿ, 7 ಜನ ಮೊಬೈಲ್ ಸ್ವಾಧೀನಾಧಿಕಾರಿಗಳು, 7 ಜನ ಸ್ಥಾನಿಕ ಜಾಗೃತ ದಳದವರು, 6 ಮಾರ್ಗಾಧಿಕಾರಿಗಳು ಹಾಗೂ 135 ಕೊಠಡಿ ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ. ಒಟ್ಟು 3233 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದು, ಬಾದಾಮಿ ತಾಲೂಕಿನಲ್ಲಿ 357, ಬಾಗಲಕೋಟೆಯಲ್ಲಿ 510, ಬೀಳಗಿ 606, ಹುನಗುಂದ 325, ಜಮಖಂಡಿ 801 ಹಾಗೂ ಮುಧೋಳ 634 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಬಾದಾಮಿ ವೀರಪುಲಕೇಶಿ ಹೈಯರ್ ಸೆಕೆಂಡರಿ ಸ್ಕೂಲ, ನವನಗರದ ಆದರ್ಶ ವಿದ್ಯಾಲಯ ಆರ್.ಎಂ.ಎಸ್, ಬೀಳಗಿ ಆದರ್ಶ ವಿದ್ಯಾಲಯ, ಹುನಗುಂದ ವಿಜಯ ಮಹಾಂತೇಶ ಬಾಲಕರ ಪ್ರೌಢಶಾಲೆ, ಜಮಖಂಡಿ ಸರಕಾರಿ ಪ.ಭಾ.ಸಂ. ಪ.ಪೂ ಕಾಲೇಜ (ಪ್ರೌಢಶಾಲಾ ವಿಭಾಗ), ಬನಹಟ್ಟಿ ಸರಕಾರಿ ಪದವಿ ಪೂರ್ವ ಕಾಲೇಜ ಹಾಗೂ ಮುಧೋ ಳ ಆರ್.ಎಂ.ಜಿ ಪ್ರೌಢಶಾಲೆಯಲ್ಲಿ ಪರೀಕ್ಷಾ ಕೇಂದ್ರಗಳನ್ನು ತೆರೆಯ ಲಾಗಿದೆ. ಅಲ್ಲದೇ ಪರೀಕ್ಷಾ ಕೇಂದ್ರ ಗಳ ಸುತ್ತ ಮುತ್ತ 200 ಮೀಟರ ಪ್ರದೇಶವನ್ನು ನಿಷೇಧಿಸಿ ಜಿಲ್ಲಾ ಧಿಕಾರಿಗಳು ಆದೇಶ ಹೊರಡಿಸಿ ದ್ದಾರೆ ಎಂದು ತಿಳಿಸಿದರು.

ಸಭೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಜಿ.ಮನ್ನಿಕೇರಿ ಸೇರಿದಂತೆ ಆಯಾ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಮೋದಿ ಸರ್ಕಾರದ ಎಡಬಿಡಂಗಿ ನೀತಿಗಳಿಗೆ ದಂಡ ತೆರುತ್ತಿರುವ ಭಾರತೀಯರು



ಮೋದಿ ಮತ್ತು ಅವರ ಸರ್ಕಾರವು ಪ್ರಸ್ತುತ ಇಂಧನ ಮತ್ತು ಆರ್ಥಿಕ ಬಿಕ್ಕಟ್ಟಿಗೆ ದೂರದ ಗುಮ್ಮನನ್ನು ತೋರಿಸಿ, ಸಮಸ್ಯೆಗಳಿಗೆ ಬೆನ್ನು ಹಾಕಿ ಪರಾರಿಯಾಗುವ ಪ್ರವೃತ್ತಿಯನ್ನು ಬಿಡಬೇಕು. ಜನರಿಗೆ ಮಿತವ್ಯಯದ ಪಾಠ ಹೇಳುವ ಮುನ್ನ ಸರ್ಕಾರಿ ವೆಚ್ಚಗಳು ಮತ್ತು ಅದ್ದೂರಿ ರಾಜಕೀಯ ಪ್ರಚಾರಗಳನ್ನು ತಗ್ಗಿಸಿ, ಜನರೊಂದಿಗೆ ನಿಲ್ಲುವಂತಾಗಬೇಕು.

ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಉದ್ವಿಗ್ನತೆಯಿಂದಾಗಿ ಭಾರತವು ತೈಲ ಬಿಕ್ಕಟ್ಟು ಮತ್ತು ಆರ್ಥಿಕ ಪರಿಣಾಮಗಳನ್ನು ಎದುರಿಸುತ್ತಿದೆ. ಇದೇ ಸಮಯದಲ್ಲಿ, ಪ್ರಧಾನಿ ಮೋದಿ ಅವರು ದೇಶದ ನಾಗರಿಕರು ಆರ್ಥಿಕ ಶಿಸ್ತು ಅನುಸರಿಸಬೇಕು, ಅಡುಗೆ ಎಣ್ಣೆ, ಎಲ್‌ಪಿಜಿ ಹಾಗೂ ಇಂಧನವನ್ನು ಮಿತವಾಗಿ ಬಳಸಬೇಕು ಎಂದು ಕರೆ ಕೊಟ್ಟಿದ್ದಾರೆ. ಚಿನ್ನ, ವಿದೇಶಿ ಪ್ರವಾಸ ಹಾಗೂ ರಸಗೊಬ್ಬರಗಳ ಮೇಲಿನ ವೆಚ್ಚವನ್ನು ಕಡಿತಗೊಳಿಸುವಂತೆಯೂ, ಉದ್ಯೋಗಿಗಳು ಸಾಧ್ಯವಾದಷ್ಟು ಮನೆಯಿಂದಲೇ ಕೆಲಸ (ವರ್ಕ್ ಫ್ರಮ್ ಹೋಮ್) ಮಾಡಬೇಕೆಂದೂ ಮನವಿ ಮಾಡಿಕೊಂಡಿದ್ದಾರೆ.

ಆದರೆ, ವಿಶ್ವಗುರು ಮೋದಿ ಅವರ ಮಿತವ್ಯಯದ ಮನವಿ ದೇಶದಲ್ಲಿನ ಬೃಹತ್ ಆರ್ಥಿಕ ವೈಫಲ್ಯದ ಒತ್ತಡವನ್ನು ಜನರ ಮೇಲೆ ಹೇರುವ ಪ್ರಯತ್ನವಾಗಿ ಕಾಣುತ್ತಿದೆ. ಅವರು ಜನರ ದೈನಂದಿನ ಚಟುವಟಿಕೆಗಳು ಮತ್ತು ನಡವಳಿಕೆಗಳನ್ನು ನಿಯಂತ್ರಿಸಿ, ತಮ್ಮ ವೈಫಲ್ಯವನ್ನು ಮುಚ್ಚಿಟ್ಟುಕೊಳ್ಳಲು ಬಯಸಿದಂತೆ ತೋರುತ್ತಿದೆ.

ಆದರೆ, ಈ ಪರಿಸ್ಥಿತಿಗೆ ನಿಜಕ್ಕೂ ಹೊಣೆ ಯಾರು? ಅಮೆರಿಕವೇ? ಇಸ್ರೇಲೇ? ಅಥವಾ ಈ ಎರಡೂ ದೇಶಗಳ ದಾಳಿಗಳನ್ನು ದಿಟ್ಟತನದಿಂದ ಎದುರಿಸುತ್ತಿರುವ ಇರಾನೇ? ಈ ಮೂರು ರಾಷ್ಟ್ರಗಳ ಯುದ್ಧದ ಪ್ರಭಾವವು ದೇಶದ ಆರ್ಥಿಕತೆಯ ಮೇಲೆ ಪರಿಣಾಮ ಬೀರಿರುವುದನ್ನು ಅಲ್ಲಗಳೆಯಲಾಗದು. ಆದರೆ, ಅದಷ್ಟೇ ಕಾರಣವಲ್ಲ. ಅದಕ್ಕಿಂತಲೂ ಮುಖ್ಯವಾಗಿ ಮೋದಿ ಸರ್ಕಾರದ ನೀತಿ-ನಿಲುವು-ಧೋರಣೆಗಳು.

ಬಿಜೆಪಿ ಸರ್ಕಾರದ ತಪ್ಪು ಆರ್ಥಿಕ ಮತ್ತು ಕಳಪೆ ವಿದೇಶಾಂಗ ನೀತಿಗಳ ನಿರ್ವಹಣೆಯಿಂದ ದೇಶದಲ್ಲಿ ಇಂಧನ ಮತ್ತು ಹಣಕಾಸಿನ ಬಿಕ್ಕಟ್ಟು ಸೃಷ್ಟಿಯಾಗಿದೆ. ಇದೊಂದು ರಚನಾತ್ಮಕ ದೌರ್ಬಲ್ಯ. ಈ ವೈಫಲ್ಯವನ್ನು ಸರಿಯಾದ ನೀತಿಗಳು ಮತ್ತು ಪರಿಹಾರ ಕ್ರಮಗಳನ್ನು ಅನುಸರಿಸುವ ಮೂಲಕ ಸರಿಪಡಿಸಬೇಕಿತ್ತು. ಆದರೆ, ಮೋದಿ ಸರ್ಕಾರದ ಧೋರಣೆಯು ತದ್ವಿರುದ್ಧವಾಗಿದೆ. ಪ್ರಧಾನಿಯವರು ದೇಶದ ಸ್ಥಿರತೆಯ ಜವಾಬ್ದಾರಿಯ ಸಂಪೂರ್ಣ ಹೊರೆಯನ್ನು ಭಾರತೀಯರ ಹೆಗಲಿಗೆ ವರ್ಗಾಯಿಸುತ್ತಿದ್ದಾರೆ.

ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಆರಂಭದಲ್ಲಿ, ಮೋದಿ ಸರ್ಕಾರವು ಭಾರತದ ಕಚ್ಚಾ ತೈಲ ಆಮದಿನಲ್ಲಿ 70% ಭಾಗವು ಹಾರ್ಮುಜ್ ಜಲಸಂಧಿಯನ್ನು ಅವಲಂಬಿಸಿಲ್ಲ. ಈ ಬೃಹತ್ ಪ್ರಮಾಣದ ತೈಲ ಇತರ ಮಾರ್ಗಗಳಿಂದ ಬರುತ್ತಿದೆ ಎಂದು ಹೇಳಿಕೊಂಡಿತ್ತು. ಭಾರತದಲ್ಲಿ ಇಂಧನ ಕೊರತೆ ಎದುರಾಗುವುದಿಲ್ಲವೆಂದು ಭಾರತೀಯರಿಗೆ ಭರವಸೆ ನೀಡಿತ್ತು. ಆದರೆ, ಈ ಭರವಸೆಗಳು ಈಗ ಸುಳ್ಳಾಗಿವೆ. ಮೋದಿ ಸರ್ಕಾರದ ಎಡಬಿಡಂಗಿ ನೀತಿಗಳು ಇದಕ್ಕೆ ಪ್ರಮುಖ ಕಾರಣವಾಗಿದೆ.

ಈ ಹಿಂದೆ, ಇರಾನ್ ಮತ್ತು ವೆನೆಜುವೆಲಾದಿಂದ ಭಾರತೀಯ ರೂಪಾಯಿಗಳಲ್ಲೇ ರಿಯಾಯಿತಿ ದರದಲ್ಲಿ ಭಾರತವು ತೈಲವನ್ನು ಖರೀದಿಸುತ್ತಿತ್ತು. ಅಂತೆಯೇ, ಭಾರತದ ಒಟ್ಟು ಕಚ್ಚಾ ತೈಲ ಆಮದಿನಲ್ಲಿ ಸುಮಾರು 40%ರಷ್ಟು ತೈಲವನ್ನು ರಿಯಾಯತಿ ದರದಲ್ಲಿ ರಷ್ಯಾ ಕೂಡ ಪೂರೈಕೆ ಮಾಡುತ್ತಿತ್ತು. ಆದರೆ, ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ದಾಳಿ ನಡೆಸಿದ ಬಳಿಕ, ಇಸ್ರೇಲ್ ಪರವಾಗಿ ಭಾರತ ನಿಲುವು ತಳೆಯಿತು. ಇರಾನ್-ವೆನೆಜುವೆಲಾದಿಂದ ಭಾರತೀಯ ರೂಪಾಯಿ ಮತ್ತು ರಿಯಾಯತಿಯಲ್ಲಿ ತೈಲ ಖರೀದಿಸುವ ಅವಕಾಶವನ್ನು ಮೋದಿ ಸರ್ಕಾರವೇ ಹಾಳುಮಾಡಿತು. ಅದೇ ರೀತಿ, ಅಮೆರಿಕ ಸರ್ಕಾರ ಸುಂಕ ವಿಧಿಸಿದ ತಕ್ಷಣವೇ ಟ್ರಂಪ್‌ಗೆ ಹೆದರಿದ ಮೋದಿ ಸರ್ಕಾರ, ರಷ್ಯಾದಿಂದ ರಿಯಾಯಿತಿ ದರದಲ್ಲಿ ಪಡೆಯುತ್ತಿದ್ದ ತೈಲ ಆಮದನ್ನು ಗಣನೀಯವಾಗಿ ಕಡಿತಗೊಳಿಸಿತು. ಇದರೊಂದಿಗೆ, ಭಾರತದ ಇಂಧನ ಸಾರ್ವಭೌಮತ್ವ ಮತ್ತು ಭದ್ರತೆಯನ್ನು ಸ್ವತಃ ಮೋದಿ ಸರ್ಕಾರವು ಮುಂದೆ ನಿಂತು ಹಾಳುಮಾಡಿತ್ತು.

ಪ್ರಸ್ತುತ, ಭಾರತದಲ್ಲಿ ಎಲ್‌ಪಿಜಿ ಮತ್ತು ಇಂಧನ ಬಿಕ್ಕಟ್ಟು ಎದುರಾಗಿದೆ. ಐದು ರಾಜ್ಯಗಳ ಚುನಾವಣೆಯೂ ಇದೇ ಸಮಯದಲ್ಲಿ ನಡೆಯುತ್ತಿದ್ದರಿಂದ, ಯಾವುದೇ ಬೆಲೆ ಏರಿಕೆಗೆ ಮುಂದಾಗದೆ ಮೋದಿ ಸರ್ಕಾರ ಮೌನವಾಗಿತ್ತು. ಈಗ ಚುನಾವಣೆಗಳು ಮುಗಿದು, ಸರ್ಕಾರಗಳು ರಚನೆಯಾಗುತ್ತಿದ್ದಂತೆ ಜನರ ಮೇಲೆ ಬೆಲೆ ಏರಿಕೆ ಹೊರೆ ಹೇರಿದೆ. ಪೆಟ್ರೋಲ್-ಡೀಸೆಲ್ ಬೆಲೆಗಳನ್ನು 3 ರೂ. ಏರಿಕೆ ಮಾಡಿದೆ. ಎಲ್‌ಪಿಜಿ ಬೆಲೆಯಂತೂ ದಿನದಿಂದ ದಿನಕ್ಕೆ ಗಗಕ್ಕೇರುತ್ತಿದೆ. ಕಾಳಸಂತೆಯಲ್ಲಂತೂ ಎಲ್‌ಪಿಜಿ ಬೆಲೆಗೆ ಯಾವುದೇ ಲಗಾಮುಗಳಿಲ್ಲ.

ಮಧ್ಯಪ್ರಾಚ್ಯದ ಯುದ್ಧದಿಂದ ಉಂಟಾಗಿರುವ ಬಿಕ್ಕಟ್ಟನ್ನು ಭಾರತ ನಿಭಾಯಿಸಲು ಭಾರತೀಯರು ಈ ಹೊರೆ ಹೊರಬೇಕು ಎಂದು ಜನರಲ್ಲಿ ಮನೋಭೂಮಿಕೆಯನ್ನು ಮೋದಿ ಸರ್ಕಾರ ಸಜ್ಜುಗೊಳಿಸಿದೆ. ಆದರೆ, ಈ ಹಿಂದೆ, ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಗಳು ತೀವ್ರವಾಗಿ ಕುಸಿದಿದ್ದಾಗಲೂ ಸಹ ಮೋದಿ ಸರ್ಕಾರವು ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು ಕೇವಲ ಹದಿನೈದು ತಿಂಗಳ ಅವಧಿಯಲ್ಲಿ ಒಂಬತ್ತು ಬಾರಿ ಹೆಚ್ಚಿಸಿತ್ತು. ಆ ಲಾಭವನ್ನು ಭಾರತೀಯ ಗ್ರಾಹಕರಿಗೆ ವರ್ಗಾಯಿಸುವ ಬದಲಿಗೆ ಸರ್ಕಾರ ಮತ್ತು ಕಾರ್ಪೊರೇಟ್ ಕುಳಗಳು ತಮ್ಮ ಜೇಬಿಗೆ ಇಳಿಸಿಕೊಂಡಿದ್ದರು.

2014 ಮತ್ತು 2021ರ ನಡುವೆ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವು ಪ್ರತಿ ಲೀಟರ್‌ಗೆ 9.48 ರೂಪಾಯಿಗಳಿಂದ 32.98 ರೂ.ಗಳಿಗೆ ಏರಿಕೆಯಾಗಿದೆ. ಅಂದರೆ, 248%ರಷ್ಟು ಹೆಚ್ಚಾಗಿದೆ. ಇದರಿಂದ, ಭಾರತ ಸರ್ಕಾರಕ್ಕೆ ಬರೋಬ್ಬರಿ 38.89 ಲಕ್ಷ ಕೋಟಿ ರೂ. ಲಾಭವಾಗಿದೆ. ಈ ಬೃಹತ್ ಲಾಭ ಪಡೆದಾಗಲೂ ದೇಶದ ನಾಗರಿಕರ ಮೇಲಿನ ಹೊರೆಯನ್ನು ಮೋದಿ ಸರ್ಕಾರ ತಗ್ಗಿಸಲಿಲ್ಲ. ಬೆಲೆ ಇಳಿಕೆಗೆ ಮುಂದಾಗಲಿಲ್ಲ. ಆದರೀಗ, ಬಿಕ್ಕಟ್ಟಿನ ಹೊರೆಯನ್ನು ಜನಸಾಮಾನ್ಯರ ಹೆಗಲಿಗೆ ವರ್ಗಾಯಿಸಿದ್ದಾರೆ.

ಮತ್ತೊಂದು ಅಂಶವೆಂದರೆ, ಮೋದಿ ಅವರು ಜನರಲ್ಲಿ ಮಿತವ್ಯಯದ ಮನವಿ ಮಾಡಿರುವುದು ಅವರ ದ್ವಂದ್ವ ನೀತಿಯನ್ನು ಎತ್ತಿ ತೋರಿಸುತ್ತದೆ. 2013ರಲ್ಲಿ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ, ಅಂದಿನ ಹಣಕಾಸು ಸಚಿವ ಪಿ. ಚಿದಂಬರಂ ಅವರು ದೇಶದ ಆರ್ಥಿಕ ಹಿತದೃಷ್ಟಿಯಿಂದ ಚಿನ್ನದ ಆಮದನ್ನು ನಿಯಂತ್ರಿಸುವಂತೆ ಮನವಿ ಮಾಡಿದ್ದರು. ಆಗ, ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದರು. ಚಿದಂಬರಂ ಅವರ ಮನವಿಯನ್ನು ಮೋದಿ ತೀವ್ರವಾಗಿ ಟೀಕಿಸಿದ್ದರು. ಚಿದಂಬರಂ ಅವರ ಮನವಿಯು ಭಾರತೀಯ ಮಹಿಳೆಯರ ಮಂಗಲಸೂತ್ರವನ್ನು ಕಿತ್ತುಕೊಳ್ಳುವ ಪ್ರಯತ್ನ ಎಂದು ಲೇವಡಿ ಮಾಡಿದ್ದರು. ಆದರೆ, ಇಂದು ತಾವೇ ಪ್ರಧಾನಿಯಾಗಿ, ದೇಶದ ಆರ್ಥಿಕ ನಿರ್ವಹಣೆಯ ವೈಫಲ್ಯ ಮುಚ್ಚಿಕೊಳ್ಳಲು ಜನರ ಮೇಲೆಯೇ ಮಿತವ್ಯಯದ ನಿರ್ಬಂಧಗಳನ್ನು ಹೇರುತ್ತಿದ್ದಾರೆ.

ಸರ್ಕಾರವು ಇಂಧನ ಕೊರತೆಯ ಹಾನಿಯನ್ನು ತಡೆಯಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಜನರಿಗೆ ಭರವಸೆ ನೀಡುವ ಬದಲಾಗಿ, ಪ್ರತಿಯೊಬ್ಬ ನಾಗರಿಕನೂ ಎಲ್ಲೆಲ್ಲಿ ವೆಚ್ಚ ಕಡಿತಗೊಳಿಸಬೇಕು ಎಂಬ ಪಟ್ಟಿಯನ್ನು ಮೋದಿ ಸರ್ಕಾರ ನೀಡುತ್ತಿದೆ. ಇದು ದೇಶದ ಜಿಡಿಪಿ ಮೌಲ್ಯವು ಮತ್ತಷ್ಟು-ಮೊಗದಷ್ಟು ಕುಸಿಯುವಂತೆ ಮಾಡುತ್ತಿದೆ.

ಮೋದಿ ಅವರು ಪ್ರಸ್ತುತ ಪರಿಸ್ಥಿತಿಯನ್ನು ಕೋವಿಡ್ ಮಾದರಿಯಲ್ಲಿ ನಿರ್ವಹಿಸುವಂತೆ ಮಾತನಾಡುತ್ತಿದ್ದಾರೆ. ಅವರ ಹೇಳಿಕೆಗಳಿಂದಾಗಿ ಷೇರು ಮಾರುಕಟ್ಟೆ ಏರುಪೇರಾಗಿ, ರೂಪಾಯಿ ಮೌಲ್ಯ ಮತ್ತಷ್ಟು ಕುಸಿದಿದೆ. ಏಷ್ಯಾದಲ್ಲಿಯೇ ಅತ್ಯಂತ ಕಳಪೆ ಕರೆನ್ಸಿ ಯಾಗಿ ರೂಪಾಯಿ ಗುರುತಿಸಿಕೊಂಡಿದೆ.

ಮತ್ತೊಂದು ಹಾಸ್ಯಾಸ್ಪದವೆಂದರೆ, ಜನಸಾಮಾನ್ಯರಿಗೆ ಇಂಧನ ಬಳಕೆಯನ್ನು ಕಡಿಮೆ ಮಾಡಲು, ಸಾರ್ವಜನಿಕ ಸಾರಿಗೆ ಬಳಸಲು ಮತ್ತು ವರ್ಚುವಲ್ ಸಭೆಗಳನ್ನು ನಡೆಸಲು ಕರೆ ಕೊಟ್ಟಿರುವ ಮೋದಿ, ತಾವೇ ಸ್ವತಃ ಸತತವಾಗಿ ವಿಮಾನಗಳು, ಹೆಲಿಕಾಪ್ಟರ್‌ಗಳು ಹಾಗೂ ಬೆಂಗಾವಲು ವಾಹನಗಳ ದೊಡ್ಡ ದಂಡಿನೊಂದಿಗೆ ವಿವಿಧ ರಾಜ್ಯಗಳಲ್ಲಿ ಬೃಹತ್ ರಾಜಕೀಯ ರ್‍ಯಾಲಿಗಳು, ರೋಡ್‌ಶೋಗಳು ಹಾಗೂ ವಿದೇಶಿ ಪ್ರವಾಸಗಳನ್ನು ನಡೆಸುತ್ತಿದ್ದಾರೆ. ಮೋದಿ ಮನವಿಗೆ ಮೋದಿಯೇ ಡಿಕ್ಕಿ ಹೊಡೆಯುತ್ತಿದ್ದಾರೆ.

ಮೋದಿ ಮತ್ತು ಅವರ ಸರ್ಕಾರವು ಪ್ರಸ್ತುತ ಇಂಧನ ಮತ್ತು ಆರ್ಥಿಕ ಬಿಕ್ಕಟ್ಟಿಗೆ ದೂರದ ಗುಮ್ಮನನ್ನು ತೋರಿಸಿ, ಸಮಸ್ಯೆಗಳಿಗೆ ಬೆನ್ನು ಹಾಕಿ ಪರಾರಿಯಾಗುವ ಪ್ರವೃತ್ತಿಯನ್ನು ಬಿಡಬೇಕು. ಬಿಕ್ಕಟ್ಟಿನ ಹೊರೆಯನ್ನು ಜನಸಾಮಾನ್ಯರ ಮೇಲೆ ಹೇರದೆ, ತಕ್ಷಣವೇ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಬಕಾರಿ ಸುಂಕವನ್ನು ಕಡಿತಗೊಳಿಸಬೇಕು. ದಿನಬಳಕೆ ವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು. ಪಾಶ್ಚಿಮಾತ್ಯ ದೇಶಗಳ ಒತ್ತಡಕ್ಕೆ ಮಣಿಯದೆ ಇರಾನ್, ರಷ್ಯಾದಂತಹ ರಾಷ್ಟ್ರಗಳಿಂದ ರೂಪಾಯಿ ಆಧರಿತ ವ್ಯಾಪಾರ ಅಥವಾ ರಿಯಾಯಿತಿ ದರದಲ್ಲಿ ಕಚ್ಚಾ ತೈಲ ಆಮದನ್ನು ಹೆಚ್ಚಿಸಿ ಇಂಧನ ಭದ್ರತೆ ಕಾಪಾಡಬೇಕು. ಜನರಿಗೆ ಮಿತವ್ಯಯದ ಪಾಠ ಹೇಳುವ ಮುನ್ನ ಸರ್ಕಾರಿ ವೆಚ್ಚಗಳು ಮತ್ತು ಅದ್ದೂರಿ ರಾಜಕೀಯ ಪ್ರಚಾರಗಳನ್ನು ತಗ್ಗಿಸಿ, ಜನರೊಂದಿಗೆ ನಿಲ್ಲುವಂತಾಗಬೇಕು.

ಯುಎಇ - ಭಾರತ ಆರ್ಥಿಕ ಬಾಂಧವ್ಯ: ಪ್ರಚಾರದ ಭರಾಟೆ, ಅನುಷ್ಠಾನ ಮರೀಚಿಕೆ

ಭಾರತದ ಆರ್ಥಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯಲ್ಲಿರುವ ಮೂಲಭೂತ ದೋಷಗಳನ್ನು ಸರಿಪಡಿಸದೆ, ಕೇವಲ ಅಂತಾರಾಷ್ಟ್ರೀಯ ವೇದಿಕೆಗಳ ಮೇಲೆ ವಿದೇಶಿ ಬಂಡವಾಳದ ಗುಣಗಾನ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಹೂಡಿಕೆದಾರರಿಗೆ ಪೂರಕವಾದ, ಮುಕ್ತ ಮತ್ತು ವಿಶ್ವಾಸಾರ್ಹ ವಾತಾವರಣ ಕಲ್ಪಿಸುವಲ್ಲಿ ಕೇಂದ್ರ ವ್ಯವಸ್ಥೆ ಸಂಪೂರ್ಣ ವಿಫಲವಾಗಿದೆ.

ಜಾಗತಿಕ ಆರ್ಥಿಕತೆಯಲ್ಲಿ ಭಾರತ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ನಡುವಿನ ವಾಣಿಜ್ಯ ಬಾಂಧವ್ಯದ ಬಗ್ಗೆ ಇತ್ತೀಚಿನ ದಿನಗಳಲ್ಲಿ ಬಹುದೊಡ್ಡ ಮಟ್ಟದ ಪ್ರಚಾರ ನೀಡಲಾಗುತ್ತಿದೆ. ಯುಎಇಯಿಂದ ಭಾರಿ ಪ್ರಮಾಣದ ಬಂಡವಾಳ ಭಾರತದತ್ತ ಸುಲಭವಾಗಿ ಹರಿದು ಬರುತ್ತಿದೆ ಎಂಬ ಭ್ರಮೆಯನ್ನು ವ್ಯವಸ್ಥಿತವಾಗಿ ಸೃಷ್ಟಿಸಲಾಗುತ್ತಿದೆ. ಆದರೆ, ವಾಸ್ತವದ ಕಠೋರ ನೆಲೆಗಟ್ಟನಲ್ಲಿ ಪರಿಶೀಲಿಸಿದಾಗ, ಬೃಹತ್ ಶೃಂಗಸಭೆಗಳಲ್ಲಿ ಅತ್ಯಂತ ಸಂಭ್ರಮದಿಂದ ಘೋಷಣೆಯಾಗುವ ಕೋಟ್ಯಂತರ ಡಾಲರ್ ಮೌಲ್ಯದ ಕರಾರು ಒಪ್ಪಂದಗಳು ಕೇವಲ ರಾಜಕೀಯ ಪ್ರಚಾರಕ್ಕೆ ಮಾತ್ರ ಸೀಮಿತವಾಗಿವೆ. ತಳಮಟ್ಟದಲ್ಲಿ ನೈಜ ಬಂಡವಾಳ ಹರಿವು ಅತ್ಯಂತ ನಿರಾಶಾದಾಯಕವಾಗಿದೆ ಎಂಬುದು ಆರ್ಥಿಕ ತಜ್ಞರ ಸ್ಪಷ್ಟ ಅಭಿಪ್ರಾಯವಾಗಿದೆ.

ಭಾರತ ಮತ್ತು ಯುಎಇ ನಡುವಿನ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ () ಜಾರಿಗೆ ಬಂದ ನಂತರ ವ್ಯಾಪಾರ ವಹಿವಾಟು ಗಣನೀಯವಾಗಿ ಹೆಚ್ಚಾಗಿದೆ ಎಂದು ಬಿಂಬಿಸಲಾಗುತ್ತಿದೆ. ಆದರೆ, ಈ ವಹಿವಾಟಿನ ಅಂಕಿ-ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಇದು ಪ್ರಧಾನವಾಗಿ ಕೇವಲ ತೈಲ ಆಮದಿನ ಮೇಲಿನ ಅವಲಂಬನೆ ಹಾಗೂ ಕಡಿಮೆ ಮೌಲ್ಯದ ಸರಕುಗಳ ವಿನಿಮಯವಷ್ಟೇ ಆಗಿದೆ. ಯುಎಇಯಿಂದ ಭಾರತದ ಉತ್ಪಾದನಾ ವಲಯ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಹರಿದು ಬರಬೇಕಿದ್ದ ನೈಜ ವಿದೇಶಿ ನೇರ ಹೂಡಿಕೆ () ನಿರೀಕ್ಷಿತ ಮಟ್ಟದಲ್ಲಿಲ್ಲ ಎಂಬುದು ಭಾರತದ ಆರ್ಥಿಕ ನೀತಿಗಳ ಸಂಪೂರ್ಣ ವೈಫಲ್ಯವನ್ನು ಎತ್ತಿತೋರಿಸುತ್ತದೆ. ಕೇವಲ ಒಪ್ಪಂದಗಳ ಸಂಖ್ಯೆ ಹೆಚ್ಚಾಗಿದೆ ವಿನಃ ಗುಣಮಟ್ಟದ ಬಂಡವಾಳವಿಲ್ಲ.

ಅರಬ್ ಬಂಡವಾಳಶಾಹಿಗಳು ಭಾರತದಲ್ಲಿ ಹೂಡಿಕೆ ಮಾಡಲು ಇಂದಿಗೂ ಹಿಂದೇಟು ಹಾಕಲು ಪ್ರಮುಖ ಕಾರಣವೆಂದರೆ ಇಲ್ಲಿನ ಆಡಳಿತ ವ್ಯವಸ್ಥೆಯಲ್ಲಿ ಬೇರುಬಿಟ್ಟಿರುವ ಭ್ರಷ್ಟಾಚಾರ ಮತ್ತು ವಿಪರೀತ ಆಡಳಿತಾತ್ಮಕ ವಿಳಂಬ. ಕೆಂಪುಪಟ್ಟಿಯ ( ) ಸಂಸ್ಕೃತಿಯಿಂದಾಗಿ, ಯಾವುದೇ ಹೊಸ ಯೋಜನೆಗೆ ಎಲ್ಲ ಇಲಾಖೆಗಳ ಅನುಮೋದನೆ ಪಡೆಯಲು ವರ್ಷಗಳೇ ಬೇಕಾಗುತ್ತವೆ. ಒಂದೆಡೆ ಹೂಡಿಕೆದಾರರನ್ನು ಆಕರ್ಷಿಸಲು ಕೆಂಪು ಹಾಸು ಹಾಸುತ್ತೇವೆ ಎಂದು ಕೇಂದ್ರ ಸರ್ಕಾರ ಹೇಳುತ್ತದೆಯಾದರೂ, ವಾಸ್ತವದಲ್ಲಿ ಹೂಡಿಕೆದಾರರು ಸರ್ಕಾರಿ ಕಚೇರಿಗಳ ಅಲೆದಾಟದಲ್ಲಿಯೇ ಹೈರಾಣಾಗುತ್ತಿದ್ದಾರೆ. ಇಲಾಖೆಗಳ ನಡುವಿನ ಸಮನ್ವಯದ ಕೊರತೆಯು ವಿದೇಶಿ ಕಂಪನಿಗಳಿಗೆ ಭಾರತದ ಮೇಲಿನ ಆಸಕ್ತಿಯನ್ನು ಕೊಲ್ಲುತ್ತಿದೆ.

ಭಾರತದಲ್ಲಿ ಕೈಗಾರಿಕೆ ಸ್ಥಾಪನೆಗೆ ಅತಿ ದೊಡ್ಡ ಅಡಚಣೆಯಾಗಿರುವುದು ಅತ್ಯಂತ ಜಟಿಲವಾದ ಭೂಸ್ವಾಧೀನ



ಪ್ರಕ್ರಿಯೆ. ಯುಎಇಯ ಮುಬಾದಲಾ ಸೇರಿದಂತೆ ಪ್ರಮುಖ ಸಾವರಿನ್ ವೆಲ್ತ್ ಫಂಡ್‌ಗಳು ಬೃಹತ್ ಯೋಜನೆಗಳಿಗೆ ಹಣ ಒದಗಿಸಲು ಸಿದ್ಧವಿದ್ದರೂ, ವಿವಾದಿತ ಭೂಸ್ವಾಧೀನ ಕಾಯ್ದೆಗಳು ಮತ್ತು ಸ್ಥಳೀಯ ಮಟ್ಟದ ರಾಜಕೀಯ ಪ್ರೇರಿತ ಪ್ರತಿಭಟನೆಗಳು ಯೋಜನೆಗಳನ್ನು ಹಳ್ಳ ಹಿಡಿಸುತ್ತಿವೆ. ಇದರ ಜೊತೆಗೆ, ಇಲ್ಲಿನ ಅತ್ಯಂತ ಸಂಕೀರ್ಣವಾದ ಮತ್ತು ಗೊಂದಲಮಯ ಕಾರ್ಮಿಕ ಕಾಯ್ದೆಗಳು ವಿದೇಶಿ ಕಂಪನಿಗಳಿಗೆ ನಿರಂತರ ತಲೆನೋವಾಗಿ ಪರಿಣಮಿಸಿವೆ. ಹೀಗಾಗಿ, ಸುಲಭವಾಗಿ ಉದ್ಯಮ ಸ್ಥಾಪಿಸುವ ವಾತಾವರಣ ಭಾರತದಲ್ಲಿ ಮರೀಚಿಕೆಯಾಗಿದೆ.

ಇವೆಲ್ಲದಕ್ಕೂ ಮಿಗಿಲಾಗಿ, ಭಾರತದ ತೆರಿಗೆ ನೀತಿಗಳಲ್ಲಿನ ತೀವ್ರ ಅಸ್ಥಿರತೆ ಯುಎಇ ಹೂಡಿಕೆದಾರರಲ್ಲಿ ಅಭದ್ರತೆ ಸೃಷ್ಟಿಸಿದೆ. ಆಗಿಂದಾಗ್ಗೆ ಏಕಾಏಕಿ ಬದಲಾಗುವ ನಿಯಮಾವಳಿಗಳು, ಹಿಂದಿನ ದಿನಾಂಕದಿಂದ ಅನ್ವಯವಾಗುವಂತೆ ವಿಧಿಸುವ ತೆರಿಗೆಗಳ ಭೀತಿ ಮತ್ತು ಆಮದು ಸುಂಕದ ಏರಿಳಿತಗಳು ಹೂಡಿಕೆದಾರರ ವಿಶ್ವಾಸವನ್ನು ಸಂಪೂರ್ಣವಾಗಿ ಕಸಿದುಕೊಂಡಿವೆ. ದೀರ್ಘಾವಧಿಯ ಲಾಭದ ನಿರೀಕ್ಷೆಯಲ್ಲಿ ಬರುವ ಅರಬ್ ಉದ್ಯಮಿಗಳಿಗೆ ಭಾರತದ ಈ ಅನಿಶ್ಚಿತ ಹಾಗೂ ಅಪಾರದರ್ಶಕ ನೀತಿಗಳು ಭಾರಿ ಆತಂಕದ ವಾತಾವರಣವನ್ನು ನಿರ್ಮಿಸಿದ್ದು, ಆರ್ಥಿಕ ವ್ಯವಸ್ಥೆಯ ಮೇಲಿನ ನಂಬಿಕೆ ಹುಸಿಯಾಗಿದೆ.

ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಭಾರತವು ಇಂದಿಗೂ ದಶಕಗಳಷ್ಟು ಹಿಂದಿದೆ ಎಂಬುದು ವಿದೇಶಿ ಬಂಡವಾಳಿಗರಿಗೆ ಅರಗಿಸಿಕೊಳ್ಳಲಾಗದ ಕಟುಸತ್ಯ. ಯುಎಇಯ ಡಿಪಿ ವರ್ಲ್ಡ್ ( ) ನಂತಹ ಜಾಗತಿಕ ಸಂಸ್ಥೆಗಳು ಭಾರತದ ಬಂದರು ನಿರ್ವಹಣೆ ಮತ್ತು ಸರಕು ಸಾಗಣೆ ವಲಯದಲ್ಲಿ ಹೂಡಿಕೆ ಮಾಡಲು ಮುಂದಾದರೂ, ಭಾರತದ ಕಳಪೆ ರಸ್ತೆ ಜಾಲ, ರೈಲು ಸಂಪರ್ಕದ ಕೊರತೆ ಮತ್ತು ವಿಳಂಬ ಗತಿಯ ಲಾಜಿಸ್ಟಿಕ್ಸ್ ವ್ಯವಸ್ಥೆಯು ಅವರ ಕಾರ್ಯಾಚರಣೆಗೆ ಬಹುದೊಡ್ಡ ತೊಡಕಾಗಿದೆ. ಈ ಕಳಪೆ ಮೂಲಸೌಕರ್ಯದಿಂದಾಗಿ ಉತ್ಪಾದನಾ ಹಾಗೂ ಸಾರಿಗೆ ವೆಚ್ಚ ವಿಪರೀತವಾಗಿ ಹೆಚ್ಚಾಗುತ್ತಿದೆ. ಇದು ಜಾಗತಿಕ ಮಾರುಕಟ್ಟೆಯಲ್ಲಿ ಹೂಡಿಕೆದಾರರ ಲಾಭಾಂಶವನ್ನು ಕಡಿತಗೊಳಿಸುತ್ತಿದೆ.

ಉಭಯ ದೇಶಗಳ ನಡುವಿನ ಬೃಹತ್ ಯೋಜನೆಗಳು ಕೇವಲ ಘೋಷಣೆಗಳಾಗಿ ಮಾತ್ರ ಉಳಿದಿರುವುದಕ್ಕೆ ಐಟುಯುಟು (22) ಉಪಕ್ರಮವೇ ಅತ್ಯಂತ ಸ್ಪಷ್ಟ ನಿದರ್ಶನ. ಈ ಮಹತ್ವಾಕಾಂಕ್ಷಿ ಯೋಜನೆಯಡಿ ಭಾರತದಲ್ಲಿ ಬೃಹತ್ ಆಹಾರ ಪಾರ್ಕ್‌ಗಳನ್ನು ( ) ನಿರ್ಮಿಸಲು ಯುಎಇ ಎರಡು ಶತಕೋಟಿ ಡಾಲರ್ ಹೂಡಿಕೆ ಮಾಡುವುದಾಗಿ ಘೋಷಿಸಿತ್ತು. ಆದರೆ, ಆಡಳಿತಾತ್ಮಕ ದಿವ್ಯ ನಿರ್ಲಕ್ಷ್ಯ, ನಿಗದಿತ ಸ್ಥಳಗಳಲ್ಲಿ ಸೂಕ್ತ ಭೂಮಿಯ ಲಭ್ಯತೆಯ ಕೊರತೆ ಮತ್ತು ವಿಭಿನ್ನ ಏಜೆನ್ಸಿಗಳ ನಡುವಿನ ಕಳಪೆ ಸಮನ್ವಯದಿಂದಾಗಿ ಈ ಯೋಜನೆಗಳು ಇಂದಿಗೂ ಕಾಗದದ ಮೇಲೆಯೇ ಧೂಳು ತಿನ್ನುತ್ತಿವೆ. ಯೋಜನೆಗಳ ಅನುಷ್ಠಾನದಲ್ಲಿನ ಈ ಆಮೆಗತಿಯು ಭಾರತದ ಆಡಳಿತಾತ್ಮಕ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸುವಂತೆ ಮಾಡಿದೆ. ಭಾರತದ ಆರ್ಥಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯಲ್ಲಿರುವ ಮೂಲಭೂತ ದೋಷಗಳನ್ನು ಸರಿಪಡಿಸದೆ, ಕೇವಲ ಅಂತಾರಾಷ್ಟ್ರೀಯ ವೇದಿಕೆಗಳ ಮೇಲೆ ವಿದೇಶಿ ಬಂಡವಾಳದ ಗುಣಗಾನ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಹೂಡಿಕೆದಾರರಿಗೆ ಪೂರಕವಾದ, ಮುಕ್ತ ಮತ್ತು ವಿಶ್ವಾಸಾರ್ಹ ವಾತಾವರಣ ಕಲ್ಪಿಸುವಲ್ಲಿ ಕೇಂದ್ರ ವ್ಯವಸ್ಥೆ ಸಂಪೂರ್ಣ ವಿಫಲವಾಗಿದೆ. ಈ ದುರಾಡಳಿತ, ಆರ್ಥಿಕ ನೀತಿಗಳ ಅನಿಶ್ಚಿತತೆ ಹಾಗೂ ಕನಿಷ್ಠ ಮೂಲಸೌಕರ್ಯಗಳ ಕೊರತೆ ಇದೇ ರೀತಿ ಮುಂದುವರಿದರೆ, ಯುಎಇಯಿಂದ ನಿರೀಕ್ಷಿಸುತ್ತಿರುವ ಬೃಹತ್ ಬಂಡವಾಳ ಹರಿವು ಕೇವಲ ಬರೀ ಮಾತಾಗಿಯೇ ಉಳಿಯಲಿದ್ದು, ದೇಶದ ಆರ್ಥಿಕ ಪ್ರಗತಿಗೆ ಇದು ಭಾರಿ ಹಿನ್ನಡೆಯಾಗಲಿದೆ.

ಸಂಗೀತಪ್ರೇಮಿಗಳ ಎದೆತಣಿಸಿದ ಅಸಲಿ ಪ್ರತಿಭೆ ಆಶಾ ಭೋಸ್ಲೆ



ಆಶಾ ಭೋಸ್ಲೆ ಇಂದು ನಮ್ಮ ನಡುವೆ ಇಲ್ಲದಿದ್ದರೂ, ಅರವತ್ತು ವರ್ಷಗಳ ಕಾಲ ತಮ್ಮ ಸಿರಿಕಂಠದಿಂದ ಸಂಗೀತಪ್ರೇಮಿಗಳ ಎದೆತಣಿಸಿದ ಅವರ ಹಾಡುಗಳು ನಮ್ಮೊಂದಿಗಿವೆ. ಅವರ ವೈವಿಧ್ಯತೆ, ವಿಭಿನ್ನತೆ ಮತ್ತು ಸಂಗೀತದೊಂದಿಗಿನ ತಲ್ಲೀನತೆ ಅವರನ್ನು ಜೀವಂತ ದಂತಕಥೆಯನ್ನಾಗಿಸಿದೆ.

ಪತ್ರಕರ್ತ ರಾಜದೀಪ್ ಸರ್ದೇಸಾಯಿ, ತಮ್ಮ ಎಕ್ಸ್‌ನಲ್ಲಿ ಸಣ್ಣ ಹಾಡಿನ ವಿಡಿಯೋ ತುಣುಕೊಂದನ್ನು ಹಂಚಿಕೊಂಡಿದ್ದಾರೆ. ಅದು ಸಂಗೀತ ನಿರ್ದೇಶಕ ಆರ್.ಡಿ. ಬರ್ಮನ್ ಮತ್ತು ಗಾಯಕಿ ಆಶಾ ಭೋಸ್ಲೆಯವರು ಹಾಡಿರುವ ಒಂದು ಹಾಡಿನ ದೃಶ್ಯ. 1972ರಲ್ಲಿ ಬಿಡುಗಡೆಯಾದ ರಾಜೇಶ್ ಖನ್ನಾ ಮತ್ತು ಮುಮ್ತಾಜ್ ನಟಿಸಿರುವ ಅಪ್ನಾ ದೇಶ್ ಚಿತ್ರದ ದುನಿಯಾ ಮೇ ಲೋಗೋ ಕೋ ಹದಿಹರೆಯದವರನ್ನು ಹುಚ್ಚೆಬ್ಬಿಸಿದ ಹಾಡಿನ ದೃಶ್ಯ.

ಆ ಕಾಲಕ್ಕೆ ಅದು ಭಾರೀ ಕ್ರೇಜ್ ಹುಟ್ಟಿಸಿದ ಜನಪ್ರಿಯ ಚಿತ್ರಗೀತೆಯಾಗಿತ್ತು. ಅದಕ್ಕೆ ತಕ್ಕಂತೆ ವೆಸ್ಟರ್ನ್ ಸಂಗೀತ ಸಂಯೋಜನೆಯಿತ್ತು. ಪಾಪ್ ಶೈಲಿಯ ಗಡುಸು ಧ್ವನಿಗೆ ಸ್ವತಃ ಬರ್ಮನ್ ದನಿಗೂಡಿಸಿದ್ದರೆ, ಅದಕ್ಕೆ ವಿರುದ್ಧವಾದ ತಣ್ಣನೆಯ ಫೀಮೇಲ್ ಸಿಂಗರ್ ಆಗಿ ಆಶಾ ಭೋಸ್ಲೆ ಹಾಡಿದ್ದರು.

ಅದೇ ಹಾಡನ್ನು ಖಾಸಗಿ ಸಮಾರಂಭವೊಂದರಲ್ಲಿ ಆರ್.ಡಿ. ಬರ್ಮನ್ ಮತ್ತು ಆಶಾ ಭೋಸ್ಲೆ ಮತ್ತೊಮ್ಮೆ ಹಾಡಿದ್ದರು. ಹಾಡುವಾಗಿನ ಅವರ ಹಾವಭಾವ, ಸಂಗೀತದ ವಾದ್ಯಗಳನ್ನು ನುಡಿಸುವ ನಟನೆ, ಅದಕ್ಕೆ ತಕ್ಕ ಬರ್ಮನ್ ನೃತ್ಯ. ಪಕ್ಕದಲ್ಲಿ ಅದಕ್ಕೆ ತದ್ವಿರುದ್ಧವಾಗಿ ಸೌಮ್ಯವಾಗಿ ನಿಂತು ಹಾಡುತ್ತಿರುವ ಆಶಾ ಭೋಸ್ಲೆ- ನಿಜಕ್ಕೂ ಅದೊಂದು ಅಪರೂಪದ ವಿಡಿಯೋ ತುಣುಕು.

ಸಂಗೀತ ನಿರ್ದೇಶಕ ಆರ್.ಡಿ. ಬರ್ಮನ್ ಮತ್ತು ಗಾಯಕಿ ಆಶಾ ಭೋಸ್ಲೆಯ ಜೋಡಿಯೇ, ಹೇಳಿಮಾಡಿಸಿದ ಅಪರೂಪದ ಅಪೂರ್ವ ಜೋಡಿ. ಅದರಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ಗಾಯನ ಹದವರಿತು ಮಿಳಿತಗೊಂಡಿತ್ತು. ಭಾರತೀಯ ಸಿನಿಪ್ರಿಯರಿಗೆ ಬೇಕಾದ ಸಂಗೀತ ಧಾರೆಯನ್ನು ಎದೆಗೆ ದಾಟಿಸಿತ್ತು.

ಆ ಜೋಡಿ ಹಕ್ಕಿಯಲ್ಲಿ ಒಂದಾದ ಹಾಡುವ ಹಕ್ಕಿ ಆಶಾ ಭೋಸ್ಲೆ ನಿನ್ನೆ ಭಾನುವಾರ, ತಮ್ಮ 92ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಈ ಮಹಾನ್ ಗಾಯಕಿ ಭಾರತೀಯ ಸಂಗೀತ ಲೋಕದಲ್ಲಿ, 6 ದಶಕಗಳ ಕಾಲ 12 ಸಾವಿರಕ್ಕೂ ಅಧಿಕ ಹಾಡುಗಳನ್ನು ಹಾಡಿ ದಾಖಲೆ ನಿರ್ಮಿಸಿದ್ದಾರೆ. ಹಿಂದಿ ಸೇರಿದಂತೆ 20ಕ್ಕೂ ಹೆಚ್ಚು ಭಾರತೀಯ ಭಾಷೆಗಳಲ್ಲಿ(ಕನ್ನಡದ ಮೂರು ಚಿತ್ರಗಳಿಗೂ ಹಾಡಿದ್ದಾರೆ) ತಮ್ಮದೇ ಆದ ಛಾಪು ಮೂಡಿಸಿದ ಮರೆಯಲಾರದ ಗಾಯಕಿ ಎನಿಸಿಕೊಂಡಿದ್ದಾರೆ.

ಆಶಾ ಭೋಸ್ಲೆ 1933ರ ಸೆಪ್ಟೆಂಬರ್ 8ರಂದು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಜನಿಸಿದರು. ಕೊಂಕಣ ಮೂಲದ ರಂಗಭೂಮಿ ಹಿನ್ನೆಲೆಯಿಂದ ಬಂದ ಅವರ ಕುಟುಂಬ ಕಲಾ ಕುಟುಂಬವಾಗಿತ್ತು. ಸಂಗೀತ ಮತ್ತು ಹಿಂದೂಸ್ತಾನಿ ಗಾಯಕರಾಗಿದ್ದ ತಂದೆ ಪಂಡಿತ್ ದೀನಾನಾಥ್ ಮಂಗೇಶ್ಕರ್ ಬಾಲ್ಯದಲ್ಲಿಯೇ ಸಂಗೀತದ ಪಾಠಗಳನ್ನು ಕಲಿಸಿದರು. ಪ್ರಸಿದ್ಧ ಗಾಯಕಿ ಲತಾ ಮಂಗೇಶ್ಕರ್ ಅವರ ಸಹೋದರಿಯಾಗಿದ್ದರು. ಆದರೆ, ತಂದೆಯ ಅಕಾಲಿಕ ನಿಧನದಿಂದ ಕುಟುಂಬ ಸಂಕಷ್ಟಕ್ಕೆ ನಿಲುಕಿತು. ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕಾಗಿ ಬಹಳ ಚಿಕ್ಕ ವಯಸ್ಸಿನಲ್ಲಿ, ಸಹೋದರಿಯರು ಹಾಡಲು ಆರಂಭಿಸಿದರು.

ಆಶಾ ಭೋಸ್ಲೆ ಅವರು ತುಂಬಾ ಕಿರಿಯ ವಯಸ್ಸಿನಲ್ಲಿಯೇ, ಹದಿನಾರರ ಹರೆಯದಲ್ಲಿ ಮನೆಯವರ ವಿರೋಧದ ನಡುವೆಯೇ ಪ್ರೇಮ ವಿವಾಹವಾಗಿದ್ದರು. ಲೋಕ ತಿಳಿಯುವ ಮುನ್ನವೇ ಮೂರು ಮಕ್ಕಳ ತಾಯಿಯಾಗಿದ್ದರು. ಈ ನಿರ್ಧಾರ ಮೊದಲೇ ಸಂಕಷ್ಟದಲ್ಲಿದ್ದ ಕುಟುಂಬದಲ್ಲಿ ಬಿರುಗಾಳಿ ಎಬ್ಬಿಸಿತು. ಇದರಿಂದ ಸಹೋದರಿ ಲತಾ ಅವರೊಂದಿಗೆ ಮಾತು ಬಿಡಲು ಕೂಡ ಕಾರಣವಾಯಿತು. ಕುಟುಂಬದಿಂದ ದೂರವಾದ ಆಶಾ, ಪ್ರೇಮಿಸಿ ಮದುವೆಯಾಗಿದ್ದರೂ, ಅಲ್ಲಿಯೂ ಅವರಿಗೆ ನೆಮ್ಮದಿ ಇಲ್ಲವಾಗಿತ್ತು. ಕೌಟುಂಬಿಕ ಕಲಹ, ವಿಚ್ಛೇದನದಿಂದ ನೊಂದು ಬೆಂದುಹೋಗಿದ್ದರು. ಆ ಬೆಂದ ಜೀವಕ್ಕೆ ಗಾಯನ ಸಂಜೀವಿನಿಯಾಗಿ ಒದಗಿಬಂದಿತ್ತು. ಅದರಿಂದ ಸಿಕ್ಕ ಜನಪ್ರಿಯತೆ, ಖ್ಯಾತಿ, ಹಣ ಎಲ್ಲವನ್ನು ಮರೆಸಿತ್ತು.

ಲತಾ ಮತ್ತು ಆಶಾ- ಇಬ್ಬರೂ ಒಂದೇ ಕುಟುಂಬದ ಕುಡಿಗಳಾದರೂ, ಇಬ್ಬರೂ ಸಹ ಅತ್ಯುತ್ತಮ ಗಾಯಕಿಯರಾಗಿ ಹೆಸರು ಮಾಡಿದ್ದರೂ, ಭಾರತೀಯ ಚಿತ್ರರಂಗದಲ್ಲಿ ಇಬ್ಬರೂ ತಮ್ಮದೇ ಆದ ಸ್ಥಾನ ಪಡೆದಿದ್ದರು. ಲತಾ ಭಾವಪೂರ್ಣ ಗೀತೆಗಳಿಗೆ ಪ್ರಸಿದ್ಧರಾದರೆ; ಆಶಾ ಪಾಶ್ಚಾತ್ಯ ಶೈಲಿಯ ಹಾಡುಗಳಿಗೆ ಜನಪ್ರಿಯರಾಗಿದ್ದರು. ಈ ರೀತಿಯ ಪ್ರತ್ಯೇಕ ಗುರುತು ಇದ್ದರೂ, ಕೆಲವೊಮ್ಮೆ ಅವಕಾಶಗಳ ವಿಷಯದಲ್ಲಿ ಇಬ್ಬರ ನಡುವೆ ಸ್ಪರ್ಧೆಯೂ ಇತ್ತು. ಸಂಗೀತ ನಿರ್ದೇಶಕರ ಆಯ್ಕೆಯಿಂದಾಗಿ ಇಬ್ಬರ ನಡುವೆ ವೈಮನಸ್ಸಿಗೂ ಕಾರಣವಾಗಿತ್ತು.

ಲತಾ ಮತ್ತು ಆಶಾರ ಪ್ರತಿಭೆಯನ್ನು ಸೀಳಿ ನೋಡುವ ಸಮಾಜ ಮತ್ತು ಮಾಧ್ಯಮಗಳಿಂದ, ಅತಿ ಹೆಚ್ಚು ನೊಂದವರು ಆಶಾ ಭೋಸ್ಲೆಯವರು. ಏಕೆಂದರೆ, ಅವಕಾಶಗಳು ಅರಸಿ ಬರುತ್ತಿದ್ದುದು ಹೆಚ್ಚಾಗಿ ಅಕ್ಕನಿಗೆ. ಆಶಾ ಎಂದಾಕ್ಷಣ ಕ್ಯಾಬರೆ ಎಂದು ಬ್ರ್ಯಾಂಡ್ ಮಾಡಲಾಗಿತ್ತು. ಅದರಲ್ಲೂ ಮಾಧ್ಯಮಗಳು ಬೇಕೆಂದೇ ಇಬ್ಬರ ನಡುವೆ ಗೆರೆ ಕೊರೆದು, ಯಾರು ಶ್ರೇಷ್ಠ ಎಂಬ ಪ್ರಶ್ನೆ ಎತ್ತುತ್ತಿದ್ದವು. ಆ ಪ್ರಶ್ನೆ ಎದುರಾದಾಗಲೆಲ್ಲ ಆಶಾ ಭಾರೀ ಮುಜುಗರಕ್ಕೆ ಒಳಗಾಗುತ್ತಿದ್ದರು. ತಾನು ಅಕ್ಕನಿಗಿಂತ ಭಿನ್ನ ಎಂದು ತಮ್ಮ ಹಾಡುಗಳ ಮೂಲಕ ತೋರಿದರೂ, ಚಿತ್ರರಂಗ ಇಬ್ಬರ ಪ್ರತಿಭೆಯನ್ನು ಸಮಾನವಾಗಿ ದುಡಿಸಿಕೊಂಡರೂ, ಅಲ್ಲೊಂದು ತಾರತಮ್ಯ ಅವರಿಗೇ ಗೊತ್ತಿಲ್ಲದಂತೆ ನೆಲೆಯಾಗಿತ್ತು.

ಹಾಗೆ ನೋಡಿದರೆ, ಆಶಾ ಮತ್ತು ಲತಾ ನಡುವಿನ ಮುನಿಸು ಒಂದು ಶಾಶ್ವತ ವೈಮನಸ್ಯವಲ್ಲ. ಅದು ಜೀವನದ ಕೆಲವು ಹಂತಗಳಲ್ಲಿ ಉಂಟಾದ ಭಿನ್ನಾಭಿಪ್ರಾಯಗಳು ಮತ್ತು ಪರಿಸ್ಥಿತಿಯ ಪರಿಣಾಮಗಳು ಮಾತ್ರ. ಲತಾ ಮಂಗೇಶ್ಕರ್ ಹೆಚ್ಚು ಸಂಯಮಿತ ಮತ್ತು ಸಂಪ್ರದಾಯಬದ್ಧ ಶೈಲಿಯನ್ನು ಅನುಸರಿಸಿದರೆ; ಆಶಾ ಭೋಸ್ಲೆ ಹೆಚ್ಚು ಮುಕ್ತ ಮನಸ್ಸಿನ, ಪ್ರಯೋಗಶೀಲ ವ್ಯಕ್ತಿತ್ವ ಹೊಂದಿದವರು. ಈ ವ್ಯತ್ಯಾಸವೂ ಅವರ ನಡುವಿನ ಅಂತರಕ್ಕೆ ಕಾರಣವಾಯಿತು. ವಯಸ್ಸಾದಂತೆ, ಮಾಗಿದಂತೆ ಒಂದಾಗಿದ್ದವರು, ಮತ್ತೆ ಒಂದಾದರು. ಪರಸ್ಪರ ಗೌರವ ಮತ್ತು ಸ್ನೇಹವನ್ನು ಕಾಪಾಡಿಕೊಂಡರು. ಹಲವಾರು ಸಂದರ್ಭಗಳಲ್ಲಿ ಒಬ್ಬರಿಗೊಬ್ಬರು ಪ್ರಶಂಸಿಸಿಕೊಂಡರು. ಕೊನೆಯಲ್ಲಿ ಅವರ ಸಂಬಂಧದಲ್ಲಿ ಪ್ರೀತಿ ಮತ್ತು ಗೌರವವೇ ಮುಖ್ಯವಾಗಿ ಉಳಿಯಿತು.

ಇಷ್ಟಾದರೂ, ಈ ಇಬ್ಬರು ಸಹೋದರಿಯರ ಮೇಲಿನ ಅಪವಾದವೊಂದು ಹಾಗೇ ಉಳಿಯಿತು. ಅದು ಹೊಸ ತಲೆಮಾರಿನ ಅನೇಕ ಗಾಯಕಿಯರ ಅವಕಾಶಗಳನ್ನು ಕಿತ್ತುಕೊಂಡರೆಂಬ ಅಪವಾದ. ಹಿಂದಿ ಚಿತ್ರರಂಗದಲ್ಲಿ ಅತ್ಯಂತ ಬೇಡಿಕೆಯಿದ್ದ ಸಂದರ್ಭದಲ್ಲಿ; ಅನೇಕ ಸಂಗೀತ ನಿರ್ದೇಶಕರು, ನಿರ್ಮಾಪಕರು ಇವರ ಮಾತು ಕೇಳುತ್ತಿದ್ದ ಸಮಯದಲ್ಲಿ ಪ್ರತಿಭಾವಂತ ಹೊಸ ಗಾಯಕಿಯರಿಗೆ ಅಡ್ಡಗಾಲು ಹಾಕಿದರು, ಅವರ ಅವಕಾಶಗಳನ್ನು ಕಿತ್ತುಕೊಂಡು ಏಕಸ್ವಾಮ್ಯ ಮೆರೆದರು ಎಂಬ ದೂರು ಇದೆ, ಇರಲಿ.

ಆದರೆ ಆಶಾ ಭೋಸ್ಲೆ ಅವರ ಆರಂಭದ ಸಂಗೀತ ಜೀವನವು ಕೂಡ ಸವಾಲಿನಿಂದ ಕೂಡಿತ್ತು. ಆರಂಭದಲ್ಲಿ ಸಣ್ಣಮಟ್ಟದ ಹಾಡುಗಳಿಂದ ಆರಂಭವಾದ ಅವರ ಪ್ರಯಾಣ, ಶ್ರಮ ಮತ್ತು ಪ್ರತಿಭೆಯಿಂದ ಹಂತ ಹಂತವಾಗಿ ಮೇಲೇರಿ ಸಂಗೀತಲೋಕದ ಶಿಖರವಾದರು. ಆರಂಭದಲ್ಲಿ ಸಂಗೀತ ನಿರ್ದೇಶಕ ಒ.ಪಿ. ನಯ್ಯರ್ ಅವಕಾಶ ನೀಡಿ ಬೆಳೆಸಿದರೆ; ಮುಂದೆ ಆರ್.ಡಿ. ಬರ್ಮನ್, ಆಶಾರನ್ನು ಜೀವನಸಂಗಾತಿಯನ್ನಾಗಿ ಸ್ವೀಕರಿಸಿದ್ದೂ ಅಲ್ಲದೆ, ಅವರ ಕಂಠಸಿರಿಯನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ದರು.

ಆಶಾ ಭೋಸ್ಲೆ ಅವರು, ಒಂದೇ ರೀತಿಯ ಹಾಡುಗಳಿಗೆ ಸೀಮಿತವಾಗದವರು. ಕ್ಯಾಬರೆ, ಗಝಲ್, ಪಾಪ್, ಫೋಕ್, ಭಜನ್, ಕ್ಲಾಸಿಕಲ್ ಸೇರಿದಂತೆ ಎಲ್ಲಾ ಶೈಲಿಗಳಲ್ಲಿಯೂ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದರು. ಅವರ ಧ್ವನಿಯ ಏರಿಳಿತ, ಲವಲವಿಕೆ ಮತ್ತು ಪ್ರಯೋಗಶೀಲತೆ ಅವರನ್ನು ಇತರರಿಗಿಂತ ಭಿನ್ನವಾಗಿಸಿದೆ. ಅವರ ಕಂಠಕ್ಕೆ ತಕ್ಕಂತೆ ಅವರಿಗೆ ಸಿಕ್ಕ ಆರ್.ಡಿ. ಬರ್ಮನ್ ಅವರ ವಿಶಿಷ್ಟ ಬಗೆಯ ಸಂಗೀತ, ಬೇರೆಯದೇ ಸಂಗೀತ ನಾದವನ್ನು ಭಾರತೀಯರಿಗೆ ಉಣಬಡಿಸಿದವು. ಪಿಯಾ ತೋ ಅಬ್ ತೋ ಆಜಾ, ದಮ್ ಮಾರೋ ದಮ್, ಚುರಾಲಿಯ ಹೈ ತುಮ್‌ನೆ ಜೋ ದಿಲ್ ಕೋದಂತಹ ಆ ಹಸ್ಕಿ ವಾಯ್ಸ್ ಗೆ ಹದಿಹರೆಯದವರು ಹುಚ್ಚೆದ್ದು ಕುಣಿದರು.

ಇಂತಹ ಆಶಾರಿಗೆ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ, ಫಿಲ್ಮ್‌ಫೇರ್ ಪ್ರಶಸ್ತಿಗಳು ಮತ್ತು ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಸೇರಿದಂತೆ ಅನೇಕ ಗೌರವಗಳು ಲಭಿಸಿವೆ. ಅವರು ಭಾರತ ಮಾತ್ರವಲ್ಲದೆ ವಿಶ್ವದ ಹಲವೆಡೆ ಸಂಗೀತ ಕಾರ್ಯಕ್ರಮಗಳನ್ನು ನಡೆಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಖ್ಯಾತಿ ಗಳಿಸಿದ್ದಾರೆ. ಜೀವನದ ಸಂಕಷ್ಟಗಳನ್ನು ಎದುರಿಸಿ, ತಮ್ಮ ಪರಿಶ್ರಮದಿಂದಲೇ ಉನ್ನತ ಸ್ಥಾನಕ್ಕೆ ಏರಿದ ಅವರು ಅನೇಕ ಯುವ ಗಾಯಕರಿಗೆ ಪ್ರೇರಣೆಯಾಗಿದ್ದಾರೆ. ಅವರು ಇಂದು ನಮ್ಮ ನಡುವೆ ಇಲ್ಲದಿದ್ದರೂ, ಅರವತ್ತು ವರ್ಷಗಳ ಕಾಲ ತಮ್ಮ ಸಿರಿಕಂಠದಿಂದ ಸಂಗೀತಪ್ರೇಮಿಗಳ ಎದೆತಣಿಸಿದ ಅವರ ಹಾಡುಗಳು ನಮ್ಮೊಂದಿಗಿವೆ. ಅವರ ವೈವಿಧ್ಯತೆ, ವಿಭಿನ್ನತೆ ಮತ್ತು ಸಂಗೀತದೊಂದಿಗಿನ ತಲ್ಲೀನತೆ ಅವರನ್ನು ಜೀವಂತ ದಂತಕಥೆಯನ್ನಾಗಿಸಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR